
ಹಂತ 3
ನಂಬಿಕೆಯ ವೀರರ
ಶಿಕ್ಷಕರ ಪುಸ್ತಕ
ಎಲ್ಲಾ ವಯಸ್ಸಿನವರಿಗೆ

# ನಂಬಿಕೆಯ ವೀರರು

**"ಮಕ್ಕಳೇ ಪ್ರಮುಖರು" ಸಂಡೇ ಸ್ಕೂಲ್ ಪಠ್ಯ**

**ಶಿಕ್ಷಕರ ಪುಸ್ತಕ**

**ಎಲ್ಲಾ ವಯಸ್ಸಿನವರಿಗೆ**

**ಹಂತ 3: ಪಾಠಗಳು 1-13 (27-39)**

**ವೆಬ್:** www.ChildrenAreImportant.com/heroes/

**"ಮಕ್ಕಳೇ ಪ್ರಮುಖರು" ತಂಡದ ಎಲ್ಲಾ ಸದಸ್ಯರಿಗೆ ಕೃತಜ್ಞತೆಗಳು!**

**ಎಡಿಟರ್:** Kristina Krauss

**ಕ್ರಿಯಾತ್ಮಕ ತಂಡ:** Abril Palacios Camacho, Areli Zuriel Salinas Sanchez, Dwight Krauss, Flor Boldo, Jennifer Sánchez
Nieto, Julio Sánchez Nieto, Mike Kangas, Suki Kangas, Verónica Toj, and Vickie Kangas.
Thanks to Rubén Dario for the wonderful music in this program.

**ಭಾಷಾಂತರ ತಂಡ:** alineviera, Annupama Wankhede, Anton Klymyk, Araz Mammadzadeh, Aroma Publications and Media, Arturo Jr Boron, Blessy Jacob, Carmela Dawn Flores, Chrisbresnahan, David Raju, Ephraim Njuguna Mirobi, Finny Jacob, Geenav, HamidReza Azimi (hamid.azimi1364 at gm#ail com), Heyaudrey, I-clever.com, iqbalman, Jacob Kuruvilla, kamilturk, Karunguru Mwangi, kiran, Maitrayi Mondal, Marco Chu, Marcos Rocha, Mathew Das, Mitesh Mandaliya, mrramlama, Mrs.Geethashree NavaneethaKrishnan, Nassim Bougtaia, nicbenk, Paul Mwangi, Paul Septan, Rana922, Rubina Rai, Safdar Khan, shahroshan15, Talento-Unido, ueritom, Verdia Juliansyah Cancerika, Yeoh Jung Chin, Zeina Mirella Barzaga Arencibia

# ಪರಿಚಯ

"ನಂಬಿಕೆಯ ವೀರರು" ಸಂಡೇ ಸ್ಕೂಲ್ 3 ನೇ ಹಂತಕ್ಕೆ ಸ್ವಾಗತ!

"ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲಿ ನಮ್ಮ ಸುತ್ತಲು ಇರುವದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಟ್ಟು . . . ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ" ಇಬ್ರಿಯ 12:1

ಇಬ್ರಿಯ ಪತ್ರಿಕೆ 11ನೇ ಅಧ್ಯಾಯದಲ್ಲಿ ಹೇಳಲಾಗಿರುವ ನಾಯಕರನ್ನು ಇಲ್ಲಿ ಸಾಕ್ಷಿಗಳು ಎಂದು ಸೂಚಿಸಲಾಗಿದೆ, ನಾವು ಇದೇ ನಾಯಕರ ಬಗ್ಗೆ ಈ ವರ್ಷ ಕಲಿತುಕೊಂಡಿದ್ದೇವೆ. ಈ ನಾಯಕರೆಲ್ಲರೂ ಈಗ ನಮ್ಮನ್ನು ನೋಡುತ್ತಿದ್ದಾರೆ ಮತ್ತು ಈಗ ಓಟದ ಸರದಿ ನಮ್ಮದಾಗಿದೆ. ಈಗ ನಾವು ಈ ಲೋಕದಲ್ಲಿ ಜೀವಿಸುವವರಾದ್ದರಿಂದ, ದೇವರಿಗೆ ನಾನು ಏನಾದರು ಕೊಡಲೇಬೇಕು. ನಾವು ಓಡುವದನ್ನು ಮೇಘದೋಪಾದಿಯಲ್ಲಿರುವ ಸಾಕ್ಷಿಗಳು ನೋಡುತ್ತಾ ಇದ್ದಾರೆ. ಇದು ಕ್ರಿಯೆಯ ಸಮಯವಾಗಿದೆ! ಈ ಲೋಕದಲ್ಲಿ ಬದಲಾವಣೆಗಳನ್ನು ಮಾಡಲು ನಮಗೆ ಕೆಲವು ವರ್ಷಗಳು ಮಾತ್ರವೇ ಇದೆ, ಆದ್ದರಿಂದ ನಮ್ಮ ನಂಬಿಕೆಯನ್ನು ಕ್ರಿಯೆಯಲ್ಲಿ ತೋರ್ಪಡಿಸಲು ಇದು ಸೂಕ್ತವಾದ ಸಮಯವಾಗಿದೆ!

ದೇವಜನರನ್ನು ಪ್ರತಿನಿಧಿಸುತ್ತಾ ದೇಶದ ಅಧ್ಯಕ್ಷನೊಂದಿಗೆ ನೇರವಾಗಿ ಮಾತನಾಡುವಂಥ ಅವಕಾಶ ಮೋಶೆಗೆ ದೊರೆತ ಹಾಗೆ ಅನೇಕರಿಗೆ ದೊರೆಯುವದಿಲ್ಲ; ಹಾಗೆಯೇ ಎಸ್ತೇರಳ ಹಾಗೆ ಸ್ವಾದಿಷ್ಟ ಆಹಾರ, ಅಮೂಲ್ಯವಾದ ವಸ್ತ್ರಗಳನ್ನು ಧರಿಸಿಕೊಂಡು ಔತಣಗಳನ್ನು ಏರ್ಪಡಿಸುವ ಮೂಲಕ ದೇವಜನರನ್ನು ಕಾಪಾಡುವ ಅದೃಷ್ಟವೂ ಅನೇಕರಿಗೆ ಸಿಗುವದಿಲ್ಲ. ಆದರೆ ಈ ಕಥೆಗಳೆಲ್ಲವೂ ಪ್ರಾಮುಖ್ಯವಾದವುಗಳಾಗಿ ನಮ್ಮ ಅನುದಿನದ ಜೀವನಕ್ಕೆ ಅನ್ವಯಿಸುತ್ತವೆ. ಆದರೆ ನಾವು ಅರಸನಾದ ಹಿಜ್ಕೀಯ ಮತ್ತು ನೆಹೆಮಿಯನ ಹಾಗೆ ಜವಬ್ದಾರಿಕೆಗಳನ್ನು ತೆಗೆದುಕೊಳ್ಳುವದು, ನಮ್ಮ ತಿಳುವಳಿಕೆಗೂ ಮೀರಿದ ದೇವರ ತಿಳುವಳಿಕೆಗೆ ಯೋಬನ ಹಾಗೆ ನಮ್ಮನ್ನು ಒಪ್ಪಿಸಿಕೊಡುವದು, ಶದ್ರಕ್, ಮೇಷಕ್ ಮತ್ತು ಅಬೆದ್ನಗೋರ ಹಾಗೆ ಸದ್ಯದ ಸ್ಥಿತಿಗಿಂತ ನಿತ್ಯತೆ ಅಮೂಲ್ಯವೆಂದು ಪರಿಗಣಿಸುವದು ಮತ್ತು ಯೋನನ ಹಾಗೆ ದೇವರ ಮಾತು ಕೇಳದೆ ಓಡಿ ಹೋಗದೆ ಇರುವದು ಅತ್ಯಂತ ಪ್ರಾಮುಖ್ಯವಾದ ಕಾರ್ಯಗಳಾಗಿವೆ. ನಾವು ಮೇಘದೋಪಾದಿಯಲ್ಲಿರುವ ಈ ಸಾಕ್ಷಿಗಳಿಂದ ಯಾಕೆ ಕಲಿತುಕೊಳ್ಳುವದಿಲ್ಲ? ನಮ್ಮ ನಂಬಿಕೆಯನ್ನು ಕ್ರಿಯೆಯಲ್ಲಿ ವ್ಯಕ್ತಪಡಿಸೋಣ ಮತ್ತು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ!

ನಿಮ್ಮ ಸುತ್ತಮುತ್ತಲಿನಲ್ಲಿರುವ ಮಕ್ಕಳನ್ನು "ನಂಬಿಕೆಯ ವೀರರ" ಜೀವಿತವನ್ನು ನೋಡಲು ಮುನ್ನಡೆಸುವ ಮೂಲಕ ದೇವರು ನಿಮ್ಮ ಜೀವಿತವನ್ನು ಆಶೀರ್ವದಿಸಲಿ.





ಪ್ರೀತಿಯೊಂದಿಗೆ,
ಮಕ್ಕಳೇ ಪ್ರಮುಖರು ತಂಡ

# ಈ ಸಾಮಗ್ರಿಯನ್ನು ಉಪಯೋಗಿಸುವದು ಹೇಗೆ

## ಟೈಮ್ ಲೈನ್

ಪ್ರತಿ ವಾರ ಮಕ್ಕಳು ಸತ್ಯವೇದ ಕಥೆಯ ವೀರನ ಜೀವವನ್ನು ಪ್ರತಿನಿಧಿಸಲು ತಮ್ಮ ಪುಸ್ತಕದಲ್ಲಿರುವ ಟೈಮ್ ಲೈನ್ ಮೇಲೆ ಗೆರೆಯನ್ನು ಎಳೆಯಬೇಕು. ಉದಾಹರಣೆಗೆ, ಪಾಠ 1 ರಲ್ಲಿ, ಎಹೂದನ ಜೀವನವನ್ನು ಪಾಠ 1ರ ಅಂಕಣದಲ್ಲಿ ಕೊಡಲಾಗಿರುವ ಸ್ಥಳದಲ್ಲಿ ಗೆರೆಯನ್ನು ಎಳೆಯಬೇಕು. ಪಾಠದಲ್ಲಿ ಕೊಡಲಾಗಿರುವ ಸಂಖ್ಯೆಗಳ ಉಪಯೋಗದಿಂದ, ನಮ್ಮ ಆಲೋಚನೆ ಏನೆಂದರೆ ಗೆರೆ ಎಲ್ಲಿಂದ ಪ್ರಾರಂಭವಾಗಬೇಕು ಮತ್ತು ಎಷ್ಟು ಉದ್ದ ಇರಬೇಕು ಎಂಬದನ್ನು ಲೆಕ್ಕ ಹಾಕಬೇಕು. ಪ್ರತಿಯೊಂದು ಚದರ 100 ವರ್ಷಗಳನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ, ಎಲೀಷನ ಜೀವಿತ ಕ್ರಿ.ಪೂ 800 ರಿಂದ 900 ರ ನಡುವೆ ಪ್ರಾರಂಭವಾಗುತ್ತದೆ ನಂತರ ಕ್ರಿ.ಪೂ 800 ರಲ್ಲಿ ಕೊನೆಗೊಳ್ಳುತ್ತದೆ. ಪ್ರತಿಯೊಬ್ಬ ವೀರನ ಜೀವಿತ ಮತ್ತು ಆಶ್ಚರ್ಯಕರವಾದ ಮಾಹಿತಿಗಳಾದ, ಶದ್ರಕ್, ಮೇಷಕ್ ಮತ್ತು ಅಬೆದ್ನೆಗೋರನ್ನು ಯೆರೇಮಿಯನ ಜೀವಿತಕಾಲದಲ್ಲಿ ಬೆಂಕಿಯ ಕುಲುಮೆಗೆ ಹಾಕಲಾಯಿತು ಎಂಬದನ್ನು ತಿಳಿದುಕೊಳ್ಳುವಾಗ ಬಹಳ ಸಂತೋಷವಾಗುತ್ತದೆ.



# 1. ಜವಾಬ್ದಾರಿಕೆಯನ್ನು ತೆಗೆದುಕೊಳ್ಳಿರಿ



ಸತ್ಯವೇದ ಕಥೆ: ಎಲೀಷ

1 ಅರಸು 19:19-21, 2 ಅರಸು 2:1-18

## ಕಂಠಪಾಠ ವಚನ

ಲೂಕ **11:10** ಏಕೆಂದರೆ, ಕೇಳಿಕೊಳ್ಳುವ ಪ್ರತಿಯೊಬ್ಬನಿಗೂ ದೊರಕುವುದು; ಹುಡುಕುವವನಿಗೆ ಸಿಗುವುದು; ತಟ್ಟುವವನಿಗೆ ಬಾಗಿಲು ತೆರೆಯಲಾಗುವುದು.'

## ಕಥೆಯ ಅವಶ್ಯಕತೆ



ಸಂಡೆ ಸ್ಕೂಲ್ ಕೋಣೆಯು ಅಷ್ಟೊಂದು ಚೆನ್ನಾಗಿ ಕಾಣಿಸುತ್ತಾ ಇರಲಿಲ್ಲ. ಅದಕ್ಕೆ ಸರಿಯಾಗಿ ಸುಣ್ಣ ಹಚ್ಚಿರಲಿಲ್ಲ, ಅದರ ಗೋಡೆಗಳು ಅಲ್ಲಲ್ಲಿ ಬಿರುಕು ಬಿಟ್ಟಿದ್ದವು. ಒಂದುದಿನ ಸೌಲ ಕೋಣೆಯನ್ನು ನೋಡುತ್ತಾ ಬಹಳ ದುಃಖಪಡುತ್ತಿದ್ದನು, ಆದರೆ ಅವನು ತನ್ನೊಳಗೆ ತಾನೇ ಹೇಳಿಕೊಂಡದ್ದು ಏನೆಂದರೆ, "ನಾನು ಏನಾದರೂ ಮಾಡಬೇಕು. ನಾನು ಸುಣ್ಣ ತಂದು ಈ ಕೋಣೆಗೆ ಬಳಿಯುತ್ತೇನೆ." ಸೌಲ ಅನೇಕ ತಿಂಗಳಿನಿಂದ ವೀಡಿಯೋ ಗೇಮ್ ಖರೀದಿಸಲು ಹಣ ಕೂಡಿಡುತ್ತಿದ್ದನು, ಅವು ಅವನಿಗೆ ಬಹಳ ಇಷ್ಟವಾದವುಗಳಾಗಿದ್ದವು. ತಾನು ಕೂಡಿಡುತ್ತಿದ್ದ ಹಣವನ್ನು ಎಣಿಸಿದಾಗ, ಅದರಿಂದ ಸುಣ್ಣ ಮತ್ತು ಬ್ರಷ್ ಕೊಳ್ಳಲು ಅಷ್ಟು ಸಾಕು ಎಂಬದು ಅವನಿಗೆ ಗೊತ್ತಾಯಿತು. ಅವನು ವೀಡಿಯೋ ಗೇಮ್ ಗಾಗಿ ಕೂಡಿಟ್ಟಿದ್ದ ಹಣವನ್ನು ಸಭೆಯ ಕಾರ್ಯಕ್ಕಾಗಿ ಖರ್ಚು ಮಾಡಲು ಮುಂದಾಗುತ್ತಾನೆಯೇ?

## ಮುಖ್ಯ ಪಾಠ

ನಂಬಿಕೆಯ ವೀರರಿಗೆ ಮತ್ತೊಮ್ಮೆ ಸ್ವಾಗತ! ದೇವರು ಚರಿತ್ರೆಯಾದ್ಯಂತ ಜನರ ಜೀವಿತಗಳಲ್ಲಿ ಮಾಡಿರುವ ಕಾರ್ಯಗಳು ಅಮೋಘವಾದವುಗಳಾಗಿವೆ. ನಮ್ಮ ಜೀವಿತಗಳಿಗೆ ನಾವು ಕಲಿತುಕೊಳ್ಳಬೇಕಾಗಿರುವ ನಂಬಿಕೆಯ ಇನ್ನೂ ಕೆಲವು ಉದಾಹರಣೆಗಳನ್ನು ನೋಡಿಕೊಳ್ಳೋಣ. ಕಳೆದ ಎರಡು ವಾರಗಳಲ್ಲಿ ಎಲೀಯ ಮತ್ತು ವಿಧವೆ ಹಾಗೂ ಕರ್ಮೆಲ್ ಬೆಟ್ಟದ ಮೇಲೆ ಬಾಳನ ಪ್ರವಾದಿಗಳೊಂದಿಗೆ ನಡೆದ ಘಟನೆಗಳು ನಿಮಗೆ ನೆನಪಿದೆಯೇ? ಇಂದು ನಾವು ಅವನ ಸೇವಕನಾದ ಎಲೀಷನ ಬಗ್ಗೆ ಕಲಿತುಕೊಳ್ಳೋಣ. ಎಲೀಯ ಎಲೀಷನನ್ನು ತನ್ನ ವೈಯಕ್ತಿಕ ಸೇವಕನನ್ನಾಗಿ ಆಯ್ಕೆ ಮಾಡಿಕೊಳ್ಳುವಾಗ, ಎಲೀಷನು ತನ್ನ ಎತ್ತುಗಳನ್ನು ಯಜ್ಞವಾಗಿ ಅರ್ಪಿಸಿದನು ಮತ್ತು ಎತ್ತಿನ ಗಾಡಿಯನ್ನು ಸುಟ್ಟು ಹಾಕಿದನು. ತನಗೆ ದೊರೆತ ಕರೆಗೆ ಪ್ರತ್ಯುತ್ತರವಾಗಿ ಅವನು ತನ್ನ ಹಳೆಯ ಕೆಲಸ ಮತ್ತು ಜೀವಿತವನ್ನು ಸುಟ್ಟು ಹಾಕಿದನು. ದೇವರು ಈ ರೀತಿಯ ಆಸಕ್ತಿಯನ್ನು ನಮ್ಮಿಂದ ಎದುರುನೋಡುವವನಾಗಿದ್ದಾನೆ. ನಾವು ಆತನನ್ನು ಹಿಂಬಾಲಿಸುವ ಆಯ್ಕೆಯನ್ನು ಮಾಡಿಕೊಳ್ಳುವಾಗ ಅದಕ್ಕೆ ಕೊಡಬೇಕಾದ ಕ್ರಯದ ಬಗ್ಗೆ ಯೋಚಿಸಬೇಕು ಎಂದು ಯೇಸು ಕ್ರಿಸ್ತನು ನಮಗೆ ಹೇಳಿದ್ದಾನೆ. ಉಳಿದವುಗಳಿಗಿಂತ ಹೆಚ್ಚಾಗಿ ನಾವು ನಮ್ಮ ಜೀವಿತದಲ್ಲಿ ಆತನಿಗೆ ಪ್ರಥಮ ಸ್ಥಾನವನ್ನು ಕೊಡಲು ಬಯಸುತ್ತೇವೆಯೇ? **(**ಲೂಕ 14:25-35**)** ಕೆಲವು ದಿನಗಳಾದ ನಂತರ, ಎಲೀಯನು ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ಹೋಗುವ ಸಮಯ ಬಂದಿತು. ಅವನು ಎಲೀಷನನ್ನು ತಡೆಯುತ್ತಲೇ ಇದ್ದನು, ತಾನು ಹೋಗುವಾಗ ಅವನು ಜೊತೆಯಲ್ಲಿ ಇರುವದು ಬೇಡ ಎಂದು ಎಲೀಯನು ಬಯಸಿದನು. ಆದರೆ ಎಲೀಷನು ಅದನ್ನು ಒಪ್ಪಿಕೊಳ್ಳಲಿಲ್ಲ. ಅವನು ಜವಾಬ್ದಾರಿಕೆಯನ್ನು ತೆಗೆದುಕೊಂಡನು, ನಿರೀಕ್ಷೆಗೂ ಮೀರಿದ ಕಾರ್ಯವನ್ನು ಮಾಡಿದನು ಮತ್ತು ತನ್ನ

ಯಜಮಾನನೊಂದಿಗೆ ಮುಂದೆ ಸಾಗುತ್ತಲೇ ಇದ್ದನು. ಅವರು ಯೊರ್ದನ್ ಹೊಳೆಯ ಹತ್ತಿರಕ್ಕೆ ಬಂದಾಗ, ಎಲೀಯನು ತನ್ನ ಕಂಬಳಿಯಿಂದ ಅದನ್ನು ಹೊಡೆದನು, ನೀರು ವಿಭಾಗವಾಗಿ ಅವರು ಒಣನೆಲದ ಮೇಲೆ ನಡೆದುಕೊಂಡು ಹೋದರು. ಸತ್ಯವೇದದಲ್ಲಿ ಈ ಘಟನೆ ಕೆಲವೊಮ್ಮೆ ಮಾತ್ರವೇ ನಡೆದಿದೆ. ಅವರು ನಡೆದುಕೊಂಡು ಹೋಗುವಾಗ, ಎಲೀಯ ಎಲೀಷನಿಗೆ ನಿನಗೇನು ಬೇಕು ಎಂದು ಕೇಳಿದನು. ಎಲೀಷನು ಮತ್ತೊಮ್ಮೆ ಜವಾಬ್ದಾರಿಕೆಯನ್ನು ತೋರಿಸಿದನು, ಧೈರ್ಯವಾಗಿ ಒಂದನ್ನು ಬೇಡಿಕೊಂಡನು: ಎಲೀಯನ ಆತ್ಮದಲ್ಲಿ ಎರಡು ಪಾಲನ್ನು ಕೊಡುವಂತೆ ಕೇಳಿಕೊಂಡನು. ನಾನು ಒಯ್ಯಲ್ಪಡುವದನ್ನು ನೀನು ನೋಡುವದಾದರೆ ನೀನು ಬೇಡಿಕೊಂಡದ್ದು ನಿನಗೆ ದೊರೆಯುವದು ಎಂಬದಾಗಿ ಎಲೀಯನು ಅವನಿಗೆ ಹೇಳಿದನು. ಎಲೀಷನು ವಿಶಿಷ್ಟವಾದ ರೀತಿಯಲ್ಲಿ ಪರಲೋಕಕ್ಕೆ ಒಯ್ಯಲ್ಪಟ್ಟನು. ಅವನು ಸಹಜವಾಗಿ ಈ ಲೋಕವನ್ನು ತ್ಯಜಿಸಲಿಲ್ಲ ಬದಲಾಗಿ ಅಗ್ನಿಮಯವಾದ ರಥಗಳು ಬಂದು ಅವನನ್ನು ಪರಲೋಕಕ್ಕೆ ಕರದುಕೊಂಡು ಹೋದವು. ಎಲೀಷ ಎಲೀಯನ ಕಂಬಳಿಯನ್ನು ತೆಗೆದುಕೊಂಡು ಹಿಂದಿರುಗಿ ಹೋದನು. ಯೊರ್ದನ್ ನದಿಯ ಬಳಿ ಅವನು ಜವಾಬ್ದಾರಿಕೆಯನ್ನು ತೆಗೆದುಕೊಂಡನು ಮತ್ತು ಎಲೀಯನು ಮಾಡಿದ ಹಾಗೆಯೇ ನೀರನ್ನು ಹೊಡೆದನು, ನೀರು ಅವನಿಗಾಗಿಯೂ ವಿಭಾಗವಾಯಿತು! ದೇವರು ನನಗೆ ಉತ್ತರ ಕೊಡುವನು ಎಂಬ ನಂಬಿಕೆ ಅವನಿಗಿತ್ತು ಮತ್ತು ತನ್ನ ಬೇಡಿಕೆ ಈಡೇರಿಸಲ್ಪಡುವದು ಎಂಬ ವಿಶ್ವಾಸ ಅವನಿಗಿತ್ತು.

ಹೊಸ ಒಡಂಬಡಿಕೆಯಲ್ಲಿಯೂ ನಾವು ಜವಾಬ್ದಾರಿಕೆಗಳನ್ನು ತೆಗೆದುಕೊಂಡ ಜನರನ್ನು ನೋಡುತ್ತೇವೆ. ನೀನು ನೀರಿನ ಮೇಲೆ ನಡೆಯುವಂತೆ, ನನಗೂ ನೀರಿನ ಮೇಲೆ ನಡೆಯಲು ಅಪ್ಪಣೆ ಕೊಡು ಎಂದು ಪೇತ್ರನು ಯೇಸು ಕ್ರಿಸ್ತನನ್ನು ಬೇಡಿಕೊಂಡನು. ಕಾನಾನ್ಯದವಳಾದ ಸ್ತ್ರೀ ತನ್ನ ಮಗಳನ್ನು ಬಿಡುಗಡೆ ಮಾಡುವಂತೆ ಆಸಕ್ತಿಯಿಂದ ಎಡಬಿಡದೆ ಬೇಡಿಕೊಂಡಳು. ನಾನು ಕೇವಲ ಇಸ್ರಾಯೇಲ್ಯರಗಾಗಿ ಕಳುಹಿಸಲ್ಪಟ್ಟಿದ್ದೇನೆ ಎಂದು ಯೇಸು ಕ್ರಿಸ್ತನು ಆಕೆಗೆ ಹೇಳಿದಾಗ, ಆಕೆ ಆತನನ್ನು ಮತ್ತೆ ಮತ್ತೆ ಬೇಡಿಕೊಂಡಳು, ಅದು ಸಣ್ಣ ಮತ್ತು ಸುಲಭಾದ ಕಾರ್ಯವೆಂದು ಅರಿಕೆಮಾಡಿಕೊಂಡಳು, ಆಕೆಯ ಮಗಳಿಗೆ ಸ್ವಸ್ಥಾಯಿತು. ಶತಾಧಪತಿಯು ತನ್ನ ಸೇವಕನನ್ನು ಗುಣಪಡಿಸುವಂತೆ ಬೇಡಿಕೊಂಡನು. ಯೇಸು ಕ್ರಿಸ್ತನೇ ಅರಸನು ಮತ್ತು ಭೂಲೋಕದಲ್ಲಿ ಸಂಪೂರ್ಣ ಅಧಿಕಾರವಳ್ಳವನು ಎಂಬದನ್ನು ಅರಿತುಕೊಂಡು, ನೀನು ನನ್ನ ಮನೆಗೆ ಬರುವ ಯೋಗ್ಯತ ನನಗಿಲ್ಲ, ನೀನು ಒಂದು ಮಾತು ಹೇಳಿದರೆ ಸಾಕು ಎಂಬದಾಗಿ ಬೇಡಿಕೊಂಡನು, ಕೂಡಲೇ ಅವನ ಸೇವಕನಿಗೆ ಗುಣವಾಯಿತು. ದೇವರು ಈ ರೀತಿಯ ನಂಬಿಕೆಯನ್ನು ಸನ್ಮಾನಿಸುತ್ತಾನೆ. ಯೇಸು ಕ್ರಿಸ್ತನು ನಮಗೆ ಹೇಳಿರುವದೇನೆಂದರ ಸಾಸಿವೆ ಕಾಳಿನಷ್ಟು ನಂಬಿಕೆ ನಮಗಿದ್ದರೆ ನಮಗೆ ಅಸಾಧ್ಯವಾದದ್ದು ಯಾವುದೂ ಇರುವದಲ್ಲ (ಮತ್ತಾಯ 17:20).

ನಾನು ಜವಾಬ್ದಾರಿಕೆಯನ್ನು ತೆಗೆದುಕೊಳ್ಳುತ್ತೇನೆ ಮತ್ತು ನನ್ನ ನಂಬಿಕೆಯನ್ನು ಕಾರ್ಯ ರೂಪಕ್ಕೆ ತರುತ್ತೇನೆ.

## ವಿಶ್ಲೇಷಣೆ



ಅವನು ಹೋಗಿ ಸುಣ್ಣ ಮತ್ತು ಬ್ರಷ್ ತೆಗೆದುಕೊಂಡು ಬಂದನು. ಒಂದುದಿನ ಯಾವುದೇ ತರಗತಿಗಳು ಇಲ್ಲದೆ ಇರುವಾಗ, ಅವನು ಹೋಗಿ ಕೋಣೆಗೆ ಸುಣ್ಣ ಬಳಿದನು. ಶಿಕ್ಷಕನಿಗೆ ಈ ವಿಷಯ ತಿಳಿದಾಗ, ಸೌಲನು ತೋರಿದ ಜವಾಬ್ದಾರಿಕೆಗಾಗಿ ಅವನನ್ನು ಹೊಗಳಿದರು. ಇದಾದ ನಂತರ ಕೋಣೆಯನ್ನು ನೋಡಿಕೊಳ್ಳಲು ಒಂದು ತಂಡವನ್ನು ರೂಪಿಸಿ, ಸೌಲನನ್ನು ಅದಕ್ಕೆ ನಾಯಕನನ್ನಾಗಿ ಮಾಡಿದರು.

## ಚಟುವಟಿಕೆ

ಜವಾಬ್ದಾರಿಕೆ ತೆಗೆದುಕೊಳ್ಳುವದು



ವಿದ್ಯಾರ್ಥಿಗಳಿಂದ ಸಹಾಯ ಮಾಡಲು ಆಗುವಂಥ ಕಾರ್ಯಗಳ ಪಟ್ಟಿಯನ್ನು ಮಾಡಿರಿ, ಅಂದರೆ ತರಗತಿಯಲ್ಲಿ ಜೊತಯಲ್ಲಿ ಓದುವವರಿಗೆ ತಮ್ಮ ಹಾಳೆಗಳನ್ನು ಕೊಟ್ಟು ಸಹಾಯ ಮಾಡುವದು ಅಥವಾ ತರಗತಿಯ ಚಟುವಟಿಕೆ ಮುಗಿದ ನಂತರ ಶುಚಿ ಮಾಡುವದು. 2 ಅಥವಾ 3 ಮಕ್ಕಳು ಈ ಕಾರ್ಯಗಳ ಮಾಡುವದನ್ನು ನೀವು

ನೋಡುವಾಗ ಅವರನ್ನು ಅಭಿನಂದಿಸಿರಿ. ಅವರನ್ನು ಶ್ಲಾಘಿಸಲು ಪ್ರತಿಯೊಬ್ಬರನ್ನೂ ಆಹ್ವಾನಿಸಿರಿ. ಅವರ ಸಹಾಯ ಕಾರ್ಯಗಳನ್ನು ಮಾಡುವ ಅವರ ಜವಾಬ್ದಾರಿಕೆಯನ್ನು ತೋರಿಸುತ್ತದೆ ಎಂಬದನ್ನು ಹೇಳಿರಿ. ಅವರು ತಮ್ಮ ಮನೆಯಲ್ಲಿ ಅಥವಾ ಶಾಲೆಯಲ್ಲಿ ನೋಡುವಂಥ ಕಾರ್ಯಗಳ ಬಗ್ಗೆ ಯೋಚಿಸಲು ಹಾಗೂ ಅವರಿಂದ ಸಹಾಯ ಮಾಡಲು ಸಾಧ್ಯವಾಗುವ ಒಂದು ಕಾರ್ಯವನ್ನು ಬರೆಯವಂತೆ ಹೇಳಿರಿ ಮತ್ತು ಮುಂದಿನ ವಾರ ಅದು ಏನೆಂದು ಕೇಳಿರಿ.


## ಟೈಮ್ ಲೈನ್

ಪ್ರಶ್ನೆಗಳಲ್ಲಿ ಸಿಗುವ ಮಾಹಿತಿಯೊಂದಿಗೆ, ಎಲೀಷನನ್ನು ಟೈಮ್ ಲೈನ್ ಗೆ ಸೇರಿಸಿರಿ.

ಎಲೀಷನು ಎಲೀಯನ ಸ್ಥಾನವನ್ನು ಯಾವ ವರ್ಷದಲ್ಲಿ ತೆಗೆದುಕೊಂಡನು? ಉತ್ತರ: ಸುಮಾರು ಕ್ರಿ.ಪೂ. 850 ರಲ್ಲಿ.

ಎಲೀಷನು ಯಾವ ವರ್ಷದಲ್ಲಿ ಮೃತಪಟ್ಟನು? ಉತ್ತರ: ಸುಮಾರು ಕ್ರಿ.ಪೂ 798 ರಲ್ಲಿ.

## ಒಗಟಿನ ಉತ್ತರಗಳು




| | | | | | | | | | | |
|---|---|---|---|---|---|---|---|---|---|---|
| ವೆ | ಸೇ | ಕಂ | ರ | ಬೆಂ | ಆ | ರಾ | ಧ | ನೆ | ಉ | ಜ್ಞ |
| ಕೆ | ಯ | ಲೀ | ಎ | ತ್ರ | ಕಿ | ಉ | ದ್ದಿ | ಆ | ರ | ನೆ |
| ಪೇ | ಜ್ಞ | ಜ್ಞ | ಲೀ | ಬೆಂ | ಷ | ಮೆ | ಧ | ಕಂ | ತ್ತು | ಎ |
| ಕಂ | ವೇ | ನೆ | ಉ | ಆ | ಜ್ಞ | ಳಿ | ಕಿ | ತ್ರ | ಎ | ಲೀ |
| ದ್ದಿ | ದಿ | ಬೆಂ | ಕೆ | ಎ | ತ್ತು | ಉ | ಬಿ | ದ್ದಿ | ಧ | ಷ |
| ನ | ತ್ರ | ಪೇ | ಜ್ಞ | ಬಿ | ಕೆ | ದ್ದಿ | ಸು | ಯ | ನೆ | ಲೀ |
| ಉ | ರ | ಎ | ದ್ದಿ | ತ್ತು | ನಂ | ಕಿ | ಆ | ಕಂ | ಮೆ | ಳಿ |
| ಪೇ | ಧ | ರು | ವ | ದೇ | ಲೀ | ಧ | ಉ | ತ್ರ | ಬ | ಷ |
| ನೆ | ತ್ರ | ಕಂ | ಆ | ಜ್ಞ | ಬೆಂ | ರ | ದ್ದಿ | ಕಂ | ಪೇ | ರ |



## ಪ್ರಶ್ನೆಗಳು ಮತ್ತು ಉತ್ತರಗಳು

**(ಹಿರಿಯ ವಿದ್ಯಾರ್ಥಿಗಳಿಗೆ)**

1. ಒಳ್ಳೆಯ ಕೆಲಸವನ್ನು ಪ್ರಾರಂಭಿಸುವ ಮೊದಲು ದೇವರು ನಿಮ್ಮನ್ನು ಕರೆಯುವ ತನಕ ಕಾಯುವದು ಅವಶ್ಯವಾಗಿದೆಯೇ? ಒಂದುವೇಳೆ ಇಲ್ಲ ಎಂದರೆ ಯಾಕೆ? ಮಕ್ಕಳೇ ಈ ವಿಷಯಗಳನ್ನು ಚರ್ಚೆ ಮಾಡಲಿ. ನಿರ್ದಿಷ್ಟವಾದ ಕರೆ ಇಲ್ಲದೆಯೇ ನೀವು ಮಿಷನರಿಯಾಗುವಿರೇ? ದೇವರು ನಮಗೆ ಹೇಳದೆ ಇದ್ದರೂ ನಾವು ಬಡವನಿಗೆ ಕುಡಿಯಲು ಒಂದು ಲೋಟ ನೀರು ಕೊಡುತ್ತೇವೆಯೇ? ದೇವರ ವಿಷಯಗಳಲ್ಲಿ ನಾವು ಎಷ್ಟರ ಮಟ್ಟಿಗೆ ಜವಾಬ್ದಾರಿಕೆಗಳನ್ನು ತೆಗೆದುಕೊಳ್ಳುತ್ತೇವೆ? ನೀವು ನಿಮ್ಮ ಕಾರ್ ಮಾರಿ ಎಲ್ಲವನ್ನೂ ದೇವರ ಸೇವೆಗೆ ಕೊಡುವಿರೋ? ನೀವು ನಿಮ್ಮ ಮನೆಯನ್ನು ಮಾರಿ ಯಾವುದೇ ನಿರ್ದಿಷ್ಟವಾದ ಕರೆ ಇಲ್ಲದಿದ್ದರೂ ಸೇವೆ ಮಾಡಲು ಬೇರೊಂದು ದೇಶಕ್ಕೆ ಹೋಗುವಿರೋ?

2. ಸತ್ಯವೇದದಲ್ಲಿರುವ ದೇವರ ವಾಕ್ಯಗಳಿಗೆ ವಿಧೇಯರಾಗುವದರಂದ ದೊರೆಯುವ ಆಶೀರ್ವಾದಗಳು ಯಾವುವು? ಸತ್ಯವೇದದ್ಲಿ ಬರೆಯಲ್ಪಟ್ಟಿರುವ ವಿಷಯಗಳನ್ನು ಹೊರತುಪಡಿಸಿ ದೇವರ ಕರೆಯನ್ನು ಹೊಂದುವದು ಯಾವಾಗ ಪ್ರಾಮುಖ್ಯವಾಗಿರುತ್ತದೆ?

   ಒಂದು ಕಡೆ, ನಾವು ಸತ್ಯವೇದದಿಂದ ಕಲಿಯುವಾಗ ದೇವರು ನಮಗೆ ಏನನ್ನು ಮಾಡಲು ಹೇಳುತ್ತಾನೋ ಅದನ್ನು ತಪ್ಪದೆ ಯಾವಾಗಲೂ ಮಾಡಬೇಕು. ಕಾರ್ ಪಾರ್ಕ್ ಮಾಡಿರುವ ಸಮಯಕ್ಕಿಂತ ಅದು ಚಲಿಸುವ ಸಮಯದಲ್ಲಿ ಅದರ ದಿಕ್ಕನ್ನು ಬದಲಿಸುವದು ಬಹಳ ಸುಲಭ ಎಂಬ ಹೇಳಿಕೆಯಿದೆ. ಪ್ರಾರಂಭಿಸುವದು ಮತ್ತು ದೇವರಿಗಾಗಿ ಏನಾದರೂ ಮಾಡುವದು ಉತ್ತಮವಾಗಿದೆ, ಅಲ್ಲಿಂದ ದೇವರು ನಮ್ಮನ್ನು ಮುನ್ನಡೆಸುತ್ತಾನೆ. ಮತ್ತೊಂದು ಕಡೆ, ನಾವು ಪ್ರಬುದ್ಧತೆಯುಳ್ಳ ಕ್ರೈಸ್ತರಾಗಿ ಬೆಳೆಯುವಾಗ, ಆತನು ನಮಗೆ ಏನೇ ಮಾಡಲು ಅಥವಾ ಮಾಡದಿರಲು ಹೇಳುವಾಗ ಅವುಗಳಿಗೆ ವಿಧೇಯರಾಗುವದು ಬಹಳ ಪ್ರಾಮುಖ್ಯವಾಗಿದೆ. ಯಾವುದೋ ಒಳ್ಳೆಯ ಆಲೋಚನೆಯಾಗಿ ತೋರಬಹುದು, ಆದರೆ ಅದನ್ನು ಬೇರೆಯವರು ಮಾಡಬೇಕೆಂಬದು ದೇವರ ಬಯಕೆಯಾಗಿರಬಹುದು ಮತ್ತು ನಿಮ್ಮ ವಿಷಯದಲ್ಲಿ ಬೇರೆ ಯೋಚನೆಯುಳ್ಳವನಾಗಿರಬಹುದು. ನೀವು ಬೆಳೆಯುವಾಗ, ನೀವಾಗಿಯೇ ಮುಂದೆ ಹೆಜ್ಜೆಯಿಡುವ ತೀರ್ಮಾನ ತೆಗೆದುಕೊಳ್ಳ ಬೇಕೇ ಅಥವಾ ದೇವರ ಸೂಚನೆಗಳಿಗಾಗಿ ಕಾಯಬೇಕೇ ಎಂಬದನ್ನು ವಿವೇಚಿಸುವ ಅಭ್ಯಾಸ ಮಾಡಿಕೊಳ್ಳಿರಿ.

3. ದೇವರು ಯಾವ ರೀತಿಯ ಜವಾಬ್ದಾರಿಕೆಗಳನ್ನು ಇಷ್ಟಪಡುತ್ತಾನೆ?

   ಲೋಕದಲ್ಲಿ ದೊಡ್ಡ  ಕಂಪನಿಗಳ ಬಾಸ್ ಗಳು ಜವಾಬ್ದಾರಿಕೆ ತೆಗೆದುಕೊಳ್ಳಬೇಕೆಂದು ಬಯಸುತ್ತವೆ. ಇದರ ಅರ್ಥ ಅವರು ತಮ್ಮ ಸ್ಥಾನದ ವಿಷಯದಲ್ಲಿ ಜವಾಬ್ದಾರಿಕೆಯನ್ನು ತೆಗೆದುಕೊಳ್ಳಬೇಕು ಮತ್ತು ಏನು ಮಾಡಬೇಕೆಂದು ಇತರರು ಅವರಿಗೆ ಹೇಳುವ ತನಕ ಅವರು ಕಾಯುವದಿಲ್ಲ. ತಮ್ಮ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸಲು ಅವರು ಹೊಸ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ತಮಗೆ ಹೇಳಿರುವ ಕಾರ್ಯಗಳನ್ನು ಮಾತ್ರವೇ ಮಾಡುವ ಮತ್ತು ಹೆಚ್ಚಿನದಾಗಿ ಯಾವುದೇ ಕಾರ್ಯವನ್ನು ಮಾಡದಿರುವ ಅಥವಾ ಜವಬ್ದಾರಿಕೆಯನ್ನು ತೆಗೆದುಕೊಳ್ಳದಿರುವ ಕಾರ್ಮಿಕರು ಕೆಳಮಟ್ಟದಲ್ಲಿಯೇ ಇರುತ್ತಾರೆ ಮತ್ತು ಉನ್ನತ ಸ್ಥಾನಕ್ಕೆ ಬರುವದೇ ಇಲ್ಲ. ದೇವರ ವಿಷಯದಲ್ಲಿಯೂ ಇದು ಸಾಬೀತಾಗುತ್ತದೆಯೇ? ಪೆಪ್ಸಿ ಕಂಪನಿಯ ಹಾಗೆ ದೇವರು ನೌಕರರನ್ನು ಎದುರುನೋಡುತ್ತಾನೆಯೇ, ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿಕೆಗನುಸಾರ ವಿವಿಧ ಹಂತಗಳನ್ನು ಆತುಕೊಳ್ಳುತ್ತಾನೆಯೇ?


## ಆಟ

ಬಲೂನ್ ಪಾಪ್

ಸಿದ್ಧಮಾಡುವ ಸಲುವಾಗಿ, ಬಲೂನ್ ಗಳೊಳಗೆ ಸಣ್ಣ ಪೇಪರ್ ಚೀಟಿಗಳನ್ನು ಹಾಕಿರಿ ಮತ್ತು ಬಲೂನ್ ಗಳಿಗೆ ಗಾಳಿ ತುಂಬಿಸಿರಿ. ಮೂರು ಬಣ್ಣದ ಪೇಪರ್ ಉಪಯೋಗಿಸಿರಿ ಬಿಳಿ ಹಾಳೆಗೆ 2 ಅಂಕಗಳು, ಹಸಿರು ಹಾಳೆಗೆ 4 ಅಂಕಗಳು ಮತ್ತು ನೀಲಿ ಹಾಳೆಗೆ 6 ಅಂಕಗಳೆಂದು ನಿಗದಿಪಡಿಸಿರಿ. ಆಟ ಆಡುವ ಸಲುವಾಗಿ, ತರಗತಿಯನ್ನು ತಂಡಗಳಾಗಿ ವಿಭಾಗಿಸಿರಿ. ನೀವು ಸಿಗ್ನಲ್ ಕೊಡುವಾಗ, ಮಕ್ಕಳು ಬಲೂನ್ ಗಳನ್ನು ಒಡೆಯುತ್ತಾ ಹಾಳೆಗಳನ್ನು ತೆಗೆದುಕೊಳ್ಳಬೇಕು. ಯಾವ ತಂಡದವರಿಗೆ ಹೆಚ್ಚು ಅಂಕಗಳು ಸಿಗುತ್ತವೆಯೋ ಅವರು ಗೆಲ್ಲುತ್ತಾರೆ. ಗೆಲ್ಲುವ ತಂಡದವರಿಗೆ ಬಹುಮಾನ ಕೊಟ್ಟು ಸನ್ಮಾನಿಸಿರಿ.



## ಹಾಜರಾತಿ




ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:
ಎಲೀಷ

## ಹೋಮ್ ವರ್ಕ್

ಈ ವಾರ ಒಬ್ಬ ವಯಸ್ಕನನ್ನು ಆಯ್ಕೆ ಮಾಡಿಕೊಂಡು ಆತನಿಂದ ಕಲಿತುಕೊಳ್ಳಿರಿ ಮತ್ತು ಏನೂ ಕೇಳದೆ ಅವರಿಗೆ ಸಹಾಯ ಮಾಡಲು ಮುಂದಾಗಿರಿ. ಅದು ಸಭಾಪಾಲಕನಾಗಿರಬಹುದು, ಶಿಕ್ಷಕನಾಗಿರಬಹುದು, ಪೋಷಕನಾಗಿರಬಹುದು ಅಥವಾ ದೇವರನ್ನು ಹಿಂಬಾಲಿಸಲು ನಿಮಗೆ ಸಹಾಯ ಮಾಡುವವರನ್ನು ಗುರುತಿಸಿಕೊಳ್ಳಿರಿ. ನೀವು ಈ ಕಾರ್ಯ ಮಾಡುವದಾಗಿ ನಿಮ್ಮ ಜೊತೆಯಲ್ಲಿರುವವರಿಗೆ ಹೇಳಬೇಡಿರಿ, ಹಾಗೇ ಸುಮ್ಮನೆ ಮಾಡಿರಿ.

**ಓದಿರಿ**

ದಿನ 1: 2 ಅರಸುಗಳು 4:8-13
ದಿನ 2: 2 ಅರಸುಗಳು 4:14-19
ದಿನ 3: 2 ಅರಸುಗಳು 4:20-26
ದಿನ 4: 2 ಅರಸುಗಳು 4:27-31
ದಿನ 5: 2 ಅರಸುಗಳು 4:32-37

# 2. ಆಶೀರ್ವಾದವನ್ನು ಹೊಂದಿಕೊಳ್ಳಿರಿ



ಸತ್ಯವೇದ ಕಥೆ: ಶೂನೇಮ್ಯ ಸ್ತ್ರೀ

2 ಅರಸು 4:8-37, 8:1-6

## ಕಂಠಪಾಠ ವಚನ

ಎಫೆಸಿಯರಿಗೆ **3:20** ನಮ್ಮಲ್ಲಿ ಕಾರ್ಯಸಾಧಿಸುವ ಹಾಗೂ ನಮ್ಮ ಆಶೆ-ಆಕಾಂಕ್ಷೆಗಿಂತಲೂ ಬೇಡಿಕೆ-ಕೋರಿಕೆಗಿಂತಲೂ ಅಧಿಕವಾದುದನ್ನು ಮಾಡಲು ದೇವರು ಶಕ್ತರು. ಅವರಿಗೆ ಧರ್ಮಸಭೆಯಲ್ಲೂ ಕ್ರಿಸ್ತಯೇಸುವಿನಲ್ಲೂ ಯುಗಯುಗಾಂತರಕ್ಕೂ ತಲತಲಾಂತರಕ್ಕೂ ಮಹಿಮೆ ಸಲ್ಲಲಿ! ಆಮೆನ್.

## ಕಥೆಯ ಅವಶ್ಯಕತೆ

ರಾಣಿ ಲ್ಯಾಬರೇಟರಿ ಸಾಧನಗಳಿಗಾಗಿ ಪ್ರಾರ್ಥನೆ ಮಾಡುತ್ತಿದ್ದಳು. ಒಂದುದಿನ ಆಕೆಯ ಪಕ್ಕದ ಮನೆಯವರಾದ ಒಬ್ಬ ವೃದ್ಧನು ಮನೆಯ ಎದುರಿನ ತೋಟವನ್ನು ಶುಚಿ ಮಾಡುತ್ತಿದ್ದರು. ತೋಟದಲ್ಲಿ ಬಹಳ ಕಳೆಗಳು ಬೆಳೆದಿದ್ದವು, ಆ ವೃದ್ಧನೊಬ್ಬನಿಂದ ಅಷ್ಟೊಂದು ಕಳೆಯನ್ನು ತೆಗೆಯಲು ಆಗುವದಿಲ್ಲ ಎಂಬದಾಗಿ ರಾಣಿ ಯೋಚಿಸಿದಳು; ಆದ್ದರಿಂದ ಆಕೆ ಹೊರಗೆ ಹೋಗಿ ಆತನಿಗೆ ಸಹಾಯ ಮಾಡಲು ಮುಂದಾದಳು, ಆತನೂ ಒಪ್ಪಿಕೊಂಡನು. ಅವರು ಇಡೀ ದಿನ ಕಳೆ ಕೀಳುತ್ತಾ ಇದ್ದರು, ಕೆಲಸವನ್ನೆಲ್ಲಾ ಮಾಡಿ ಮುಗಿಸಿದ ನಂತರ, ಆ ವೃದ್ಧನು ರಾಣಿಗೆ ನಿನಗೆ ಏನೆಂದರೆ ಬಹಳ ಇಷ್ಟ ಎಂದು ಕೇಳಿದನು. ನನಗೆ ವಿಜ್ಞಾನದ ಸಂಶೋಧನೆಗಳನ್ನು ಮಾಡುವದೆಂದರೆ ಬಹಳ ಇಷ್ಟ ಎಂದು ಹೇಳಿದಳು.

## ಮುಖ್ಯ ಪಾಠ

ನಂಬಿಕೆಯ ವೀರರಿಗೆ ಮತ್ತೊಮ್ಮೆ ಸ್ವಾಗತ! ಇಂದು ನಾವು ದೇವರ ಮಗನಾದ ಎಲೀಷನಿಗೆ ಅತಿಥಿ ಸತ್ಕಾರ ಮಾಡಿದವ ವ್ಯಕ್ತಿಯ ಕುರಿತು ನೋಡಿಕೊಳ್ಳೋಣ. ಒಬ್ಬ ಶೂನೇಮ್ಯ ಸ್ತ್ರೀ ಮತ್ತು ಆಕೆಯ ಗಂಡ ಪ್ರತಿದಿನ ತಮ್ಮ ಮನೆಯ ಎದುರು ಹಾದುಹೋಗುತ್ತಿದ್ದ ಎಲೀಷನನ್ನು ತಮ್ಮ ಮನೆಗೆ ಕರೆಯುತ್ತಿದ್ದರು, ಮತ್ತು ಆತನಿಗಾಗಿಯೇ ಒಂದು ಕೋಣೆಯನ್ನು ಸಿದ್ಧಮಾಡಿದ್ದರು. ಎಲೀಷನಿಗೆ ಅಂಥ ವ್ಯವಸ್ಥೆಯನ್ನು ಮಾಡಲು ಅವರಿಗೆ ಸಮಯ, ಹಣ ಮತ್ತು ಪರಿಶ್ರಮ ಎಲ್ಲವೂ ಹಿಡಿದಿತ್ತು. ನಾನು ನನ್ನ ಜನರನ್ನು ಪ್ರೀತಿಸುತ್ತೇನೆ ಎಂಬದನ್ನು ಯೇಸು ಕ್ರಿಸ್ತನು ಸ್ಪಷ್ಟಪಡಿಸಿದ್ದಾನೆ ಮತ್ತು ನಾವು ಆತನ ಜನರಿಗೆ ಏನೇ ಮಾಡಿದರೂ, ಅದನ್ನು ಆತನಿಗೇ ಮಾಡಿರುವದಾಗಿ ಆತನು ಪರಿಗಣಿಸುತ್ತಾನೆ **(**ಮತ್ತಾಯ 10:40-42**)**. ಆದರೆ ನಾವು ಎಂದಿಗೂ ದೇವರನ್ನು ಆಶೀರ್ವಾದ ಮಾಡಲು ಆಗುವದಿಲ್ಲ! ನೀವು ಇತರರಿಗೆ ಏನೇ ಒಳ್ಳೆ ಕೆಲಸ ಮಾಡಿದರೂ, ದೇವರು ನಿಮಗಾಗಿ ಕೆಲವು ಭೂಲೋಕದಲ್ಲಿ ಮತ್ತು ಕೆಲವು ಪರಲೋಕದಲ್ಲಿ ನಿಮಗಾಗಿ ದೊಡ್ಡ ಕಾರ್ಯಗಳನ್ನು ಮಾಡುತ್ತಾನೆ. ಅವರು ಎಲೀಷನಿಗಾಗಿ ಒಂದು ಕೋಣೆಯನ್ನು ನಿರ್ಮಿಸಿದರು, ಇದು ಬಹುತೇಕ ಜನರು ಮಾಡುವ ಕಾರ್ಯಕ್ಕಿಂತಲೂ ಮಿಗಿಲಾದದ್ದಾಗಿದೆ, ಆದರೆ ದೇವರು ಶೂನೇಮ್ಯ ಸ್ತ್ರೀಯನ್ನು ಆಶೀರ್ವದಿಸಿದ್ದಕ್ಕೆ ಹೋಲಿಸಿದರೆ ಇದು ಬಹಳ ಕಡಿಮೆಯಾಗಿದೆ. ಎಲೀಷನು ಬಹಳ ಕೃತಜ್ಞತೆಯುಳ್ಳವನಾದ್ದರಿಂದ ನಿನಗೆ ಒಬ್ಬ ಮಗನು ಹುಟ್ಟುವನು ಎಂದು ಪ್ರವಾದಿಸಿದನು. ನನ್ನ ಜೀವಿತದಲ್ಲಿ ಇದು ಸಾಧ್ಯ ಎಂದು ನಂಬಲು ಮತ್ತು ಆಶೀರ್ವಾದವನ್ನು ಅಂಗೀಕರಿಸಿಕೊಳ್ಳಲು ಆಕೆ ನಿರಾಕರಿಸಿದಳು. ದೇವರು ನಮ್ಮನ್ನು ಆಶೀರ್ವದಿಸುವಾಗ, ಅದು ಎಷ್ಟು ಮಹದಾಗಿರುತ್ತದೆ ಎಂದರೆ ಅದನ್ನು ಅಂಗೀಕರಿಸಿಕೊಳ್ಳಲು ಬಹಳ ಕಷ್ಟವಾಗುತ್ತದೆ. ಆದರೆ ದೇವರು ನಿಮ್ಮನ್ನು ಆಶೀರ್ವದಿಸುವ ಆಯ್ಕೆ ಮಾಡಿಕೊಳ್ಳುವಾಗ, ದೇವರನ್ನು ನಂಬಿರಿ ಮತ್ತು ಅದನ್ನು ಅಂಗೀಕರಿಸಿಕೊಳ್ಳಿರಿ. ದೇವರು ನಿಮ್ಮನ್ನು ಎಷ್ಟು ಪ್ರೀತಿ ಮಾಡುತ್ತಾನೆ ಎಂಬದನ್ನು ವ್ಯಕ್ತಪಡಿಸಿಕೊಳ್ಳಲು ಆತನಿಗೆ ಅನುಮತಿಸಿರಿ; ಆತನು ನಿಮ್ಮನ್ನು ಬಹಳ ಬಹಳ ಪ್ರೀತಿಸುತ್ತಾನೆ.

ಕೆಲವು ವರ್ಷಗಳಾದ ನಂತರ ಒಂದು ದಿನ ಮಗು ಸತ್ತು ಹೋಯಿತು. ಆಕೆ ಅಲ್ಲಿಯೇ ಆಗಲೇ ಬಹಳವಾಗಿ ದುಃಖಿಸ ಬಹುದಾಗಿತ್ತು. ಆ ಕ್ಷಣದಲ್ಲಿ ತನಗಾದ ವೇದನೆಯನ್ನು ನೆನೆಸಿಕೊಂಡು ಆಕೆ ದೇವರ ಮೇಲೆ ಕೋಪಿಸಿಕೊಳ್ಳಬಹುದಾಗಿತ್ತು. ಆಕೆ ತನ್ನ ಗಂಡನ ಬಳಿ ಗೋಳಾಡಬಹುದಾಗಿತ್ತು. ಆದರ ಇವುಗಳಲ್ಲಿ ಯಾವುದನ್ನೂ ಮಾಡದೆ, ಆಕೆ ನೇರವಾಗಿ ಎಲೀಷನ ಬಳಿಗೆ ಹೋದಳು ಮತ್ತು ದೇವರ ಸಹಾಯವನ್ನು ಬೇಡಿಕೊಂಡಳು. ಎಲೀಷ ಅವಳೊಂದಿಗೆ ಹೋದನು ಮತ್ತು ದೇವರಿಗೆ ಪ್ರಾರ್ಥನೆ ಮಾಡಿದನು. ಮಗು ಬದುಕಿಕೊಂಡಿತು! ದೇವರು ನಿಮಗೆ ಕೊಟ್ಟಿರುವ ಆಶೀರ್ವಾದಗಳ ವಿಷಯದಲ್ಲಿ ನಿಮ್ಮನ್ನು ನಡೆಸುತ್ತಾನೆ ಎಂಬ ಭರವಸೆ ನಿಮಗಿದೆಯೇ? ಕೆಟ್ಟ ಕಾರ್ಯಗಳು ನಡೆಯುವಾಗ, ನೀವು ಸಹಾಯಕ್ಕಾಗಿ ದೇವರನ್ನು ಬೇಡಿಕೊಳ್ಳುವಿರೋ? ಆತನು ನಿಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆ! ಆತನು ನಿಮ್ಮ ವಿಷಯದಲ್ಲಿ ಚಿಂತಿಸುತ್ತಾನೆ ಮತ್ತು ಒಳ್ಳೆಯ ಹಾಗೂ ಕೆಟ್ಟ ಸಮಯಗಳಲ್ಲಿ ನಿಮ್ಮನ್ನು ಆಶೀರ್ವದಿಸಲು ಬಯಸುತ್ತಾನೆ. ಶೂನೇಮ್ಯಳ ಹಾಗೆ ಮೊದಲು ದೇವರ ಬಳಿಗೆ ಹೋಗಿರಿ ಮತ್ತು ಸಹಾಯವನ್ನು ಬೇಡಿಕೊಳ್ಳಿರಿ.

ಎಲೀಷನು ಶೂನೇಮ್ಯ ಸ್ತ್ರೀಗೆ ಬರಗಾಲವಿರುವದರಿಂದ ಏಳು ವರ್ಷ ದೇಶವನ್ನು ಬಿಟ್ಟು ಬೇರೆ ಕಡೆಗೆ ಹೋಗಬೇಕೆಂದು ಹೇಳಿದನು. ಅವರು ಹಿಂದಿರುಗಿ ಬಂದು ತನ್ನ ಭೂಮಿಯನ್ನು ಪಡೆಯಲು ಅರಸನ ಬಳಿಗೆ ಹೋದಾಗ, ಅದ್ಭುತಕಾರ್ಯವೊಂದು ನಡೆಯಿತು. ಅವರು ಒಳಗೆ ಬರುತ್ತಿರುವಾಗ ಎಲೀಷನ ಸೇವಕನು ಎಲೀಷನ ಕುರಿತಾದ ಕಥೆಗಳನ್ನು ಹೇಳುತ್ತಿದ್ದನು, ಶೂನೇಮ್ಯಳ ಮಗಳನ್ನು ಬದುಕಿಸಿದ್ದನ್ನು ಸಹ ಹೇಳಿದನು. ಆಕೆಯ ಜೀವಿತದಲ್ಲಿ ಆಶೀರ್ವಾದದ ಕಾರ್ಯವನ್ನು ಮುಂದುವರೆಸಲು ದೇವರು ಸಂಭವಿಸಿದ ಕೆಟ್ಟ ಕಾರ್ಯವನ್ನೂ ಆತನ ಒಳಿತಿಗಾಗಿಯೇ ಉಪಯೋಗಿಸಿದನು. ಒಂದುವೇಳೆ ಆ ಹುಡುಗನು ಸಾಯದೆ ಹೋಗಿದ್ದರೆ ಮತ್ತು ಬದುಕಿಕೊಳ್ಳದೆ ಹೋಗಿದ್ದರೆ, ಅದ್ಭುತವಾದ ಕಥೆ ಹೇಳಲು ಸಿಗುತ್ತಾ ಇರಲಿಲ್ಲ. ಅರಸನು ಅದರ ಬಗ್ಗೆ ಕೇಳಿದನು ನಂತರ ಆಕೆಯ ಕುಟುಂಬದವರಿಗೆ ಭೂಮಿ ಹಿಂದಕ್ಕೆ ಸಿಗುವದು ಮಾತ್ರವಲ್ಲ ಏಳು ವರ್ಷ ಆ ಭೂಮಿಯ ಬೆಳೆಯಿಂದ ದೊರೆಯಬೇಕಾದ ಹಣವೂ ದೊರೆಯಿತು! ದೇವರಿಗೆ ನಿಮ್ಮ ಮೇಲಿರುವ ಪ್ರೀತಿಯಲ್ಲಿ ಭರವಸೆಯನ್ನಿಡ ಬಹುದು ಮತ್ತು ನಿಮಗಾಗಿ ಆತನು ಇಟ್ಟಿರುವ ಆತನ ಆಶೀರ್ವಾದಗಳನ್ನು ಅಂಗೀಕರಿಸಿಕೊಳ್ಳಬಹುದು.

ನಾನು ಇತರರಿಗೆ ಹಿತವನ್ನು ಮಾಡುವ ಆಯ್ಕೆ ಮಾಡಿಕೊಳ್ಳುತ್ತೇನೆ ಮತ್ತು ದೇವರು ನನಗೆ ಕೊಡುವ ಪ್ರೀತಿ ಹಾಗೂ ಆಶೀರ್ವಾದವನ್ನು ಅಂಗೀಕರಿಸಿಕೊಳ್ಳುತ್ತೇನೆ.

### ವಿಶ್ಲೇಷಣೆ



ಮಾರಣೆಯ ದಿನ ರಾಣಿಯ ಪಕ್ಕದ ಮನೆಯವರು ಆಕೆಯ ಮನೆಗೆ ಒಂದು ಡಬ್ಬಿಯನ್ನು ತೆಗೆದುಕೊಂಡು ಬಂದು ಹೇಳಿದ್ದೇನೆಂದರೆ, "ಇದು ನಿನಗಾಗಿ ತಂದಿದ್ದೇವೆ. ತೆಗೆದು ನೋಡು." ರಾಣಿ ಡಬ್ಬಿಯನ್ನು ತೆಗೆದು ನೋಡಿದಾಗ ಅದರೊಳಗೆ ಹೊಸ ಲ್ಯಾಬರೇಟರಿ ವಸ್ತುಗಳು ಇದ್ದವು. ಆಗ ಆಕೆ, "ಬೇಡ, ಇದನ್ನು ನಾನು ತೆಗೆದುಕೊಳ್ಳುವದಿಲ್ಲ" ಎಂದು ಹೇಳಿದಳು. ಅದಕ್ಕೆ ಪಕ್ಕದ ಮನೆಯವರು ಹೇಳಿದ್ದೇನೆಂದರೆ, "ನೀನು ನನಗೆ ಮಾಡಿದ ಸಹಾಯಕ್ಕೆ ಪ್ರತಿಯಾಗಿ ನಿನಗೆ ಇದನ್ನು ಬಹುಮಾನವಾಗಿ ಕೊಡಬೇಕೆಂದು ದೇವರೇ ನನಗೆ ಹೇಳಿದ್ದಾನೆ." ಆಗ ರಾಣಿ ಹೇಳಿದ್ದೇನೆಂದರೆ, "ಅದರೆ ಇದು ಬಹಳ ಜಾಸ್ತಿ ಆಯಿತು!" ಅದಕ್ಕೆ ಆ ಪಕ್ಕದ ಮನೆಯವನು, "ಇದು ನಿನ್ನದು, ಇದನ್ನು ನಿನಗೆ ಕೊಡುತ್ತಿದ್ದೇನೆ."



### ಚಟುವಟಿಕೆ

ಅತಿಥಿ ಸತ್ಕಾರ ಮಾಡುವ ಕರಗಳು


ನಿಮ್ಮ ಎರಡೂ ಕೈಗಳನ್ನು ಹಾಳೆಯ ಮೇಲೆ ಬರೆಯಿರಿ. ಅವು ಅತಿಕ್ರಮಿಸುವಂತೆ ನೋಡಿಕೊಳ್ಳಿರಿ. ಕೈಗಳ ಹೊರನೋಟವನ್ನು ಕತ್ತರಿಸಿರಿ ಮತ್ತು ಅದನ್ನು ಕಿರುಪುಸ್ತಕವಾಗಿ ಮಡಚಿರಿ. ಕಿರು ಪುಸ್ತಕದ ಹೊರ ಭಾಗದಲ್ಲಿ, ಮಕ್ಕಳು ತಮ್ಮ ಹೆಸರು ಬರೆಯಬೇಕು. ಒಳಗಡೆ, ಶೂನೇಮ್ಯ ಸ್ತ್ರೀ ಎಲೀಷನಿಗೆ ಅತಿಥಿ ಸತ್ಕಾರ ಮಾಡಿದಂತೆ ನೀವು ಮಾಡುವದಕ್ಕೆ ಸಹಕರಿಸುವ ಆಲೋಚನೆಗಳನ್ನು ಬರೆಯಿರಿ.


### ಟೈಮ್ ಲೈನ್

ಶೂನೇಮ್ಯ ಸ್ತ್ರೀ ಮತ್ತು ಎಲೀಷನ ನಡುವೆಯ ಘಟನೆಗಳು ಯಾವ ವರ್ಷದಲ್ಲಿ ನಡೆದವು? ಉತ್ತರ: ಬಹುಶಃ ಕ್ರಿ.ಶ. 847 ರಲ್ಲಿ.

### ಒಗಟಿನ ಉತ್ತರಗಳು

| | | | | | | | | | | |
|---|---|---|---|---|---|---|---|---|---|---|
| ಗು | ಸು | ಯ | ಹಾ | ಸ | ಜೀ | ಬ | ನು | ದ | ದಿ | ಹೊಂ |
| ಮ | ನು | ಲ | ಣೆ | ರ | ದುಃ | ತಿ | ಧಿ | ಖ | ವಾರ್ | ಶೀ |
| ಶೀ | ದ್ಭು | ತ್ತ | ಬ | ಸು | ಖ | ದ್ಭು | ಗು | ಲ | ಶೀ | ದುಃ |
| ದುಃ | ಗು | ಜೀ | ಸ | ದಿ | ತಿ | ಪ್ರೀ | ತಿ | ಹಾ | ಆ | ತಿ |
| ರಾ | ಬ | ಖ | ತ್ಕಾ | ಣೆ | ಪ್ರೀ | ದ್ಭು | ಶೀ | ಸು | ರ | ಯ್ರ್ |
| ಭ | ರ | ವ | ಸೆ | ಲ | ಬ | ಜೀ | ಧಿ | ಣೆ | ಬ | ರಾ |
| ಧಿ | ಗಾ | ಸು | ರ | ಶೀ | ವ | ಹಾ | ತ್ಕಾ | ರಾ | ಕೋ | ತ |
| ಬ | ಲ | ದಿ | ದೇ | ಖ | ದ್ಭು | ಗು | ದುಃ | ಬ | ಜೀ | ದ್ಭು |
| ಣೆ | ಹಾ | ವ | ಪ್ರೀ | ಸು | ರ | ತ್ಕಾ | ಸ | ಧಿ | ತಿ | ಅ |
| ತಿ | ರು | ಬ | ಗ್ಗಿ | ದಿ | ರಾ | ಷ | ಲೀ | ಎ | ಣೆ | ದ್ಭು |





### ಪ್ರಶ್ನೆಗಳು ಮತ್ತು ಉತ್ತರಗಳು 2

**(ಹಿರಿಯ ವಿದ್ಯಾರ್ಥಿಗಳಿಗೆ)**


1. **ಯಾವ ಕಾರ್ಯಗಳು ಅಥವಾ ಪರಿಸ್ಥಿತಿಗಳು ನಿರಾಸೆಯ ಸಮಯದಲ್ಲಿ ಆಶೀರ್ವಾದವಾಗಿರುತ್ತವೆ?**
   ನಾವು ಸಹಜವಾಗಿ ದೇವರಿಂದ ಆಶೀರ್ವಾದಗಳನ್ನು ಅಂಗೀಕರಿಸಿಕೊಳ್ಳಲು ಸಿದ್ಧರಾಗಿರುವದಿಲ್ಲ ಯಾಕಂದರೆ ನಾವು ಕೆಲವು ಕಾರ್ಯಗಳನ್ನು ಆಶೀರ್ವಾದವೆಂದು ನಂಬುವದಿಲ್ಲ. ಉದಾಹರಣೆಗೆ, ಒಂದುವೇಳೆ ನಮ್ಮ ತಂದೆತಾಯಿಗಳು ನಾವು ಬೇರೊಂದು ಪಟ್ಟಣಕ್ಕೆ ಹೋಗಬೇಕೆಂದು ತೀರ್ಮಾನಿಸಿದರೆ, ಹೊಸ ಸ್ಥಳದಲ್ಲಿ ಕೆಲವು ದಿನಗಳ ತನಕ ನಮಗೆ ಹೊಂದಿಕೊಳ್ಳಲು ಕಷ್ಟವಾಗುತ್ತದೆ. ಆದರೆ ನೀವು ನಿಮ್ಮ ಭವಿಷ್ಯದ ಬಾಳ ಸಂಗಾತಿಯನ್ನು ಹೊಸ ಪಟ್ಟಣದಲ್ಲಿ ಭೇಟಿಯಾದರೆ ಏನು ಮಾಡುವಿರಿ?
2. **ದೇವರು ಯಾವುದಕ್ಕೆ ಹೆಚ್ಚಿನ ಬೆಲೆಯನ್ನು ಕೊಡುತ್ತಾನೆ, ನಮ್ಮ ಆತ್ಮೀಕ ಜೀವಿತಕ್ಕೋ ಅಥವಾ ಶಾರೀರಿಕ ಜೀವಿತಕ್ಕೋ? ದೇವರು ಯಾವ ರೀತಿಯ ಆಶೀರ್ವಾದವನ್ನು ಹೆಚ್ಚಾಗಿ ಕೊಡುತ್ತಾನೆ, ಆತ್ಮೀಕವೋ ಅಥವಾ ಶಾರೀರಿಕವೋ?**
   ಶೂನೇಮ್ಯ ಸ್ತ್ರೀಗೆ, ದೇವರು ಶಾರೀರಿಕ ಆಶೀರ್ವಾದದ ಉದಾಹರಣೆಯನ್ನು ಕೊಟ್ಟನು. ಆದರೆ ನಮ್ಮ ಆತ್ಮೀಕ ಜೀವಿತಗಳು ಶಾರೀರಿಕ ಜೀವಿತಗಳಿಗಿಂತ ಪ್ರಾಮುಖ್ಯವಾಗಿವೆ. ಉತ್ತಮವಾದ ಆಶೀರ್ವಾದಗಳು ವ್ಯಕ್ತಿಗತವಾಗಿ ನಿಮಗೆ ಇರುತ್ತವೆ,

ಆದರೆ ನಿಮ್ಮ ಹೊಟ್ಟೆ ತುಂಬಲು ಅವು ಅವಶ್ಯವಾಗಿರುವದಿಲ್ಲ. ಉದಾಹರಣೆಗೆ, ಅಧಿಕವಾದ ಗರ್ವವು ಭವಿಷ್ಯದಲ್ಲಿ ನಮ್ಮ ಕೆಲಸವನ್ನು ಹಾಳು ಮಾಡುತ್ತದೆ.

3. ದೇವರು ನಮ್ಮನ್ನು ತಗ್ಗಿಸುವದು ಆಶೀರ್ವಾದವಾಗಿದೆಯೇ? ಹೌದು!!!

### ಆಟ

ಬಲೂನ್ ವಾಲಿಬಾಲ್



ಮಕ್ಕಳೆಲ್ಲರನ್ನು ನೆಲದ ಮೇಲೆ ಕೂರಿಸಿರಿ. ನಿಮ್ಮನ್ನು ನೆಲಕ್ಕೆ ಅಂಟಿಸಲಾಗಿದೆ ಆದ್ದರಿಂದ ನೀವು ನಿಮ್ಮ ಸೊಂಟ ಮತ್ತು ಕೈಗಳನ್ನು ಮಾತ್ರವೇ ಅಲ್ಲಾಡಿಸಬೇಕು ಎಂಬದಾಗಿ ಮಕ್ಕಳಿಗೆ ಹೇಳಿರಿ. ಗಾಳಿ ತುಂಬಿಸಿರುವ ಬಲೂನ್ ಅನ್ನು ವೃತ್ತದ ಮಧ್ಯದಲ್ಲಿ ಹಾಕಿರಿ. ಮಕ್ಕಳು ಬಲೂನನ್ನು ಒಬ್ಬರಿಂದ ಮತ್ತೊಬ್ಬರಿಗೆ ವಾಲಿಬಾಲ್ ಆಡುವ ರೀತಿಯಲ್ಲಿ ಪಾಸ್ ಮಾಡಬೇಕು. ಒಂದುವೇಳೆ ಭಾಗವಹಿಸುವವರಲ್ಲಿ ಯಾರಾದರೂ ಬಲೂನ್ ಕೆಳಗೆ ಬೀಳಿಸಿದರೆ, ಅವರು ಒಂದು ಕೈ ಉಪಯೋಗಿಸಬಾರದು, ನಂತರ ಇನ್ನೊಂದು, ನಂತರ ಸೊಂಟ, ನಂತರ ತಮ್ಮ ತಲೆ ಹೀಗೆ ಸಂಪೂರ್ಣ ಏನೂ ಚಲನೆಯಿಲ್ಲದವರಾದ ನಂತರ ಆಟದಿಂದ ಹೊರಗೆ ಬರಬೇಕು.

### ಹಾಜರಾತಿ




ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಸಣ್ಣ ಪ್ರವಾದಿಗಳು

### ಹೋಮ್ ವರ್ಕ್

ಈ ವಾರದಲ್ಲಿ ಯಾರಿಗಾದರೂ ಹಿತವನ್ನು ಮಾಡುವ ಮಾರ್ಗವನ್ನು ಹುಡುಕಿರಿ, ಅಂದರೆ ಮನೆಗೆ ಅತಿಥಿಗಳು ಬರುವಾಗ ಅವರಿಗೆ ಉಪಚರಿಸಲು ನಿಮ್ಮ ತಾಯಿಗೆ ಸಹಾಯ ಮಾಡುವದು ಅಥವಾ ನಿಮ್ಮ ಆಟದ ಗೊಂಬೆಗಳನ್ನು ಕೊಡುವದು ಇತ್ಯಾದಿ ಕಾರ್ಯಗಳು. ಹಾಗೆಯೇ, ಈ ವಾರ ದೇವರು ನಿಮ್ಮ ಜೀವಿತದಲ್ಲಿ ಏನದರೂ ಹಿತ ಮಾಡುತ್ತಾನೆಯೇ ಎಂಬದನ್ನು ಎದುರುನೋಡಿರಿ. ಒಂದುವೇಳೆ, ಈ ವಾರ ಯಾರಾದರೂ ನಿಮಗೆ ಹಿತವನ್ನು ಮಾಡಿದರೆ ಸೂಕ್ತವಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿರಿ, ನಂತರ ಪ್ರತ್ಯೇಕವಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿರಿ ಯಾಕಂದರೆ ನಮ್ಮ ಜೀವಿತದಲ್ಲಿ ಎಲ್ಲಾ ಒಳ್ಳೆಯ ಕಾರ್ಯಗಳಿಗೆ ಆತನೇ ಮೂಲಾಧಾರನಾಗಿದ್ದಾನೆ.

ಓದಿರಿ

ದಿನ 1: 2 ಅರಸು 5:1-6

ದಿನ 2: 2 ಅರಸು 5:7-10

ದಿನ 3: 2 ಅರಸು 5:11-14

ದಿನ 4: 2 ಅರಸು 5:15-20

ದಿನ 5: 2 ಅರಸು 5:21-27

# 3. ಬುದ್ಧಿ ಉಪಯೋಗಿಸದೆ ವಿಧೇಯರಾಗಿರಿ



ಸತ್ಯವೇದ ಕಥೆ: ನಾಮಾನನು

2 ಅರಸು 5

### ಕಂಠಪಾಠ ವಚನ

**ಜ್ಞಾನೋಕ್ತಿಗಳು 3:5 ನಿನ್ನ ಸ್ವಂತ ಬುದ್ಧಿಯನ್ನೇ ನೆಚ್ಚಿಕೊಂಡಿರದಿರು; ಪೂರ್ಣ ಮನಸ್ಸಿನಿಂದ ಸರ್ವೇಶ್ವರನಲ್ಲಿ ನಂಬಿಕೆಯಿಡು.**

### ಕಥೆಯ ಅವಶ್ಯಕತೆ



ರಾಜುವನ್ನು ಪಪ್ಪೆಟ್ ಶೋಗೆ ಆಹ್ವಾನಿಸಲಾಗಿತ್ತು, ಅದು ಬಹಳ ಸಂತೋಷದ ಕಾರ್ಯವಾಗಿತ್ತು! ಆತನ ಸ್ನೇಹಿತರೆಲ್ಲರೂ ಅಲ್ಲಿಗೆ ಬರುತ್ತಿದ್ದರು. ಪ್ರದರ್ಶನದ ದಿನ, ದೂರದರ್ಶನದಲ್ಲಿ ರಾಜುವಿನ ಮೆಚ್ಚಿನ ಸಿನಿಮಾ ಬಾಂಬೆಯೊಂದಿಗೆ ಇನ್ನೂ ಅನೇಕ ಚಲನಚಿತ್ರಗಳನ್ನು ಹಾಕುವುದಾಗಿ ಪ್ರಕಟಿಸುತ್ತಿದ್ದರು. ಆಗ ಅವನು, "ನಾನು ಈ ಚಲನಚಿತ್ರಗಳನ್ನು ನೋಡಲೇಬೇಕು, ಪಪ್ಪೆಟ್ ಶೋಗೆ ಹೋಗದಿದ್ದರೂ ಪರವಾಗಿಲ್ಲ" ಎಂಬದಾಗಿ ಅಂದುಕೊಂಡನು. ಪ್ರದರ್ಶನಕ್ಕೆ ಹೋಗುವ ಸಮಯ ಬಂದಾಗ ರಾಜುವಿನ ಸ್ನೇಹಿತರು ಅವನ ಮನೆಗೆ ಬಂದರು.

### ಮುಖ್ಯ ಪಾಠ

ವೀರರಿಗೆ ಸ್ವಾಗತ! ಇಂದು ನಾವು ತನ್ನನ್ನು ತಗ್ಗಿಸಿಕೊಳ್ಳುವದನ್ನು ಕಲಿತುಕೊಂಡ ಮತ್ತು ಕಾರ್ಯಗಳನ್ನು ತೀರ್ಮಾನಿಸುವ ವಿಷಯವನ್ನು ದೇವರಿಗೆ ಒಪ್ಪಿಸಿದ ಮಹಾ ವ್ಯಕ್ತಿಯ ಬಗ್ಗೆ ಕಲಿತುಕೊಳ್ಳೋಣ. ನಾಮಾನನು ಅರಾಮ್ಯರ ಸೈನ್ಯದ ಸೇನಾಪತಿಯಾಗಿದ್ದನು ಮತ್ತು ಎಲ್ಲರ ಗೌರವಕ್ಕೆ ಪಾತ್ರನಾಗಿದ್ದನು. ಅವನು ಪ್ರಸಿದ್ಧನಾಗಿದ್ದನು ಮತ್ತು ಪರಾಕ್ರಮಿಯಾಗಿದ್ದನು. ನೀವು ಪ್ರಸಿದ್ಧರು ಮತ್ತು ಪರಾಕ್ರಮಿಯಾಗಿರುವಾಗ, ದೇವರೂ ನಿಮ್ಮನ್ನು ಪ್ರಸಿದ್ಧ ವ್ಯಕ್ತಿಯನ್ನಾಗಿಯೇ ನೋಡಬೇಕೆಂದು ಬಯಸುವದು ಬಹಳ ಸುಲಭವಾಗಿರುತ್ತದೆ, ಆದರೆ ದೇವರು ಪಕ್ಷಪಾತ ಮಾಡುವದಿಲ್ಲ. ನಾಮಾನನು ದೇವರ ವಿಷಯದಲ್ಲಿ ಸರಿಯಾದ ತೀರ್ಮಾನಗಳನ್ನು ತೆಗೆದುಕೊಂಡನು, ಆತನನ್ನು ಹಿಂಬಾಲಿಸಲು ತನ್ನ ಎಲ್ಲಾ ನಿರೀಕ್ಷೆಗಳನ್ನು ಬದಿಗಿಟ್ಟನು. ನಾಮಾನನಿಗೆ ಘೋರವಾದ ಚರ್ಮರೋಗವಾಗಿರುವ ಕುಷ್ಠರೋಗ ಇತ್ತು. ಅವನ ಹೆಂಡತಿಯ ಸೇವಕಿಯಾಗಿದ್ದ ಒಬ್ಬ ಚಿಕ್ಕ ಹುಡುಗಿ ನೀವು ಇಸ್ರಾಯೇಲಿನಲ್ಲಿರುವ ದೇವರ ಪ್ರವಾದಿಯ ಬಳಿಗೆ ಹೋಗಬೇಕು ಎಂದು ಹೇಳಿದನು. ನಾಮಾನನು ಆ ಹುಡುಗಿಯ ಮಾತುಗಳನ್ನು ಕಡೆಗಣಿಸಿರಬಹುದಾಗಿತ್ತು, ಆದರೆ ಅವನು ಹಾಗೆ ಮಾಡದೆ ಆಕೆಯ ಸಲಹೆಯಂತೆ ನಡೆದುಕೊಳ್ಳಲು ತೀರ್ಮಾನಿಸಿದನು. ದೇವರು ಎಲ್ಲಾ ರೀತಿಯ ಜನರ ಮೂಲಕ ಮಾತನಾಡುತ್ತಾನೆ, ಆದರೆ ಸಣ್ಣವರು ಮತ್ತು ದುರ್ಬಲರು ಎಂದು ಲೋಕವು ಯಾರ ಬಗ್ಗೆ ಹೇಳುತ್ತದೆಯೋ (ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರಾಗಿದ್ದೇವೆ) ಅವರ ಮಾತುಗಳನ್ನು ನಾವು ಕೇಳದೆ ಹೋದರೆ, ದೇವರು ನಮಗಾಗಿ ಇಟ್ಟಿರುವದನ್ನು ಅನುಭವಿಸಲು ಆಗುವದಿಲ್ಲ. ನಾಮಾನನು ಆಕೆಯ ಮಾತುಗಳನ್ನು ಕೇಳಿದನು ಮತ್ತು ದೇವರ ಸಹಾಯಕ್ಕಾಗಿ ಇಸ್ರಾಯೇಲಿಗೆ ಹೋದನು. ಮತ್ತೊಮ್ಮೆ ಪ್ರವಾದಿಯ ಮನೆಯ ಹತ್ತಿರ ತನ್ನನ್ನು ಉನ್ನತವಾಗಿ ಗೌರವಿಸಬೇಕೆಂದು ಬಯಸಿದನು. ಆದರೆ ಪ್ರವಾದಿಯಾದ ಎಲೀಷನು, ತನ್ನ ಸೇವಕನ ಮೂಲಕ ಯೊರ್ದನ್ ಹೊಳೆಯಲ್ಲಿ ಏಳು ಸಾರಿ ಮುಳುಗಬೇಕು ಎಂಬದಾಗಿ ಅವನಿಗೆ ಹೇಳಿಸಿದನು. ನಾಮಾನನು ಬಹಳ ಕೋಪಿಸಿಕೊಂಡನು, ಆದರೆ ಅವನ ಸೇವಕರು ಮನವಿ ಮಾಡಿಕೊಂಡಾಗ, ಅವನು ಅವರ ಮಾತುಗಳನ್ನು ಕೇಳಿ ವಿಧೇಯನಾದನು. ದೇವರ ಕಾರ್ಯಗಳು

ನಿಮಗೆ ಅರ್ಥವಾಗದೆ ಇದ್ದರೂ ಆತನ ಕಾರ್ಯಗಳಿಗೆ ನಿಮ್ಮ ಗರ್ವವು ಅಡ್ಡಿಪಡಿಸದಂತೆ ನೋಡಿಕೊಳ್ಳಿರಿ. ನಾವು ನಮ್ಮ ಬುದ್ಧಿಗನುಸಾರ ನಡೆದುಕೊಳ್ಳದೆ ದೇವರಲ್ಲಿ ಭರವಸೆಯನ್ನಿಡಬೇಕೆಂದು ಜ್ಞಾನೋಕ್ತಿಗಳಲ್ಲಿ ಓದುತ್ತೇವೆ (ಜ್ಞಾನೋಕ್ತಿಗಳು 3:5). ಯೊರ್ದನ್ ಹೊಳೆ ಬಹಳ ಕೊಳಕಾಗಿತ್ತು. ನಾಮಾನನು ಅದರೊಳಗೆ ನಿಂತಿರುವದನ್ನು, ಬೆಳ್ಳಿ ಬಂಗಾರವನ್ನು ಹೊತ್ತುಕೊಂಡಿರುವ ಅವನ ಒಂಟೆಗಳು ಮತ್ತು ಅವನ ಸೇವಕರಲ್ಲರೂ ದಡದ ಮೇಲೆ ನಿಂತಿರುವದನ್ನು ಊಹಿಸಿಕೊಳ್ಳಿರಿ. ಐದು ಅಥವಾ ಆರು ಸಲ ಮುಳುಗಿದ ನಂತರ ಒಂದುವೇಳೆ ಇನ್ನು ಸಾಕು ಎಂಬ ಆಲೋಚನೆ ಅವನಿಗೆ ಬಂದಿರಬಹುದು. ಆದರೆ ಅವನು ಹಾಗೆ ಮಾಡದೆ, ಪ್ರವಾದಿಯ ಮಾತುಗಳಿಗೆ ವಿಧೇಯನಾಗಿ ಏಳು ಸಲ ನೀರಿನೊಳಗ ಮುಳುಗಿದನು. ಆಗ ಅವನಿಗೆ ಗುಣವಾಯಿತು. ಅವನಿ ಬಹಳ ಖುಷಿಯಾಯಿತು ಆದ್ದರಿಂದ ಸಾಧಾರಣ ಎಂಬದಾಗಿ ಅನ್ನಿಸಿದ ಯಾವ ವಿಷಯಗಳೂ ಅವನನ್ನು ಬಾಧಿಸಲಿಲ್ಲ. ಹಾಗೆಯೇ ದೇವರು ನಿಮ್ಮ ವಿಧೇಯತಯಗೆ ಫಲವನ್ನು ಕೊಡುವಾಗ ಅನಾವಶ್ಯಕವಾಗಿರುವ ಇತರೆ ಸಂಗತಿಗಳು ನಮ್ಮ ನೆನಪಿನಲ್ಲಿಯೇ ಇರುವದಿಲ್ಲ. ನಾಮಾನನು ಎಲೀಷನಿಗೆ ಕೃತಜ್ಞತೆ ಸಲ್ಲಿಸಲು ಮತ್ತು ತಾನು ತಂದಿದ್ದ ಕಾಣಿಕೆಗಳನ್ನು ಕೊಡಲು ಅವನ ಬಳಿಗೆ ಹೋದನು. ಆದರ ಎಲೀಷನೂ ದೀನತೆಯುಳ್ಳವನಾಗಿ ನಡೆದುಕೊಂಡನು ಮತ್ತು ಯಾವುದೇ ಕಾಣಿಕೆಗಳನ್ನೂ ತೆಗೆದುಕೊಳ್ಳಲಿಲ್ಲ. ಎಲೀಷನ ಸೇವಕ ಗೇಹಜಿ ದೀನತೆಯನ್ನು ಆಯ್ಕೆ ಮಾಡಿಕೊಳ್ಳಲಿಲ್ಲ ಬದಲಾಗಿ ಕಾಣಿಕೆಗಳ ಹಿಂದೆ ಹೋದನು. ಹೆಚ್ಚಿನ ಕಾಣಿಕೆಗಳಿಂದ ಸಂತೋಷವಾಗಿ ಜೀವಿಸುವ ಬದಲು ಗೇಹಜಿ ತನ್ನ ಜೀವನ ಪರ್ಯಂತರ ಕುಷ್ಠರೋಗಿಯಾಗಿ ಜೀವಿಸಿದನು. ನಿಮ್ಮನ್ನು ನೀವು ತಗ್ಗಿಸಕೊಳ್ಳಿರಿ ತಕ್ಕ ಸಮಯದಲ್ಲಿ ದೇವರು ನಿಮ್ಮನ್ನು ಮೇಲಕ್ಕೆ ಎತ್ತುವನು ಎಂಬದಾಗಿ ಯೇಸು ಕ್ರಿಸ್ತನು ಹೇಳಿದ್ದಾನೆ (ಲೂಕ 14:11). ನಾಮಾನನು ಅರಾಮ್ಯ ಸೈನ್ಯದಲ್ಲಿ ಕೆಲವು ವರ್ಷಗಳ ತನಕ ಮಾತ್ರವೇ ಪ್ರಸಿದ್ಧನಾಗಿದ್ದನು ಆದರ ದೇವರಿಗೆ ವಿಧೇಯನಾದ್ದರಂದ ಲೋಕದಾದ್ಯಂತ ಸಾವಿರಾರು ವರ್ಷಗಳ ತನಕ ಪ್ರಸದ್ಧನಾಗಿದ್ದಾನೆ.

ನನ್ನ ಬುದ್ಧಿಗೆ ಅರ್ಥವಾಗದೆ ಇದ್ದರೂ ನಾನು ದೇವರ ಮಾತುಗಳನ್ನು ಕೇಳುವ ಮತ್ತು ಆತನಿಗೆ ವಿಧೇಯನಾಗುವ ಆಯ್ಕೆಯನ್ನು ಮಾಡಿಕೊಳ್ಳುತ್ತೇನೆ.

### ವಿಶ್ಲೇಷಣೆ

ರಾಜು ಅವರಿಗೆ ನಾನು ನಿಮ್ಮ ಜೊತೆ ಬರುವದಿಲ್ಲ, ನಾನು ತಪ್ಪದೆ ಚಲನಚಿತ್ರಗಳನ್ನು ನೋಡಬೇಕು ಎಂದು ಹೇಳಿದನು. ಆತನ ಸ್ನೇಹಿತರು ಬಹಳ ಒತ್ತಾಯ ಮಾಡಿದ ನಂತರ ಅವನು ಒಪ್ಪಿಕೊಂಡನು. ಆ ಕಾರ್ಯಕ್ರಮದಲ್ಲಿ ರಾಜು ಮತ್ತು ಅವನ ಸ್ನೇಹಿತರು ಯೇಸು ಕ್ರಿಸ್ತನನ್ನು ತಮ್ಮ ಹೃದಯದಲ್ಲಿ ಅಂಗೀಕರಿಸಿಕೊಂಡರು, ಆಗ ಅವರ ಜೀವಿತಗಳು ಬದಲಾದವು! ಈಗ ನಡೆದ ಘಟನೆಗಳೆಲ್ಲವೂ ಅವನನ್ನು ಬಹಳವಾಗಿ ಗುಣಪಡಿಸಿದವು.



### ಚಟುವಟಿಕೆ

ನಾನು ಮಾಡುವ ಕಾರ್ಯವನ್ನಲ್ಲ, ಹೇಳುವ ಕಾರ್ಯವನ್ನು ಮಾಡಿರಿ

ವಿದ್ಯಾರ್ಥಿಗಳೆಲ್ಲರೂ ಗುಂಪಿನಲ್ಲಿ ಎದ್ದುನಿಲ್ಲಬೇಕು, ಅವರ ಶಿಕ್ಷಕನು ಮುಂದೆ ನಿಂತುಕೊಳ್ಳಬೇಕು. ಶಿಕ್ಷಕನು ತನ್ನ ದೇಹದವಿವಿಧ ಅಂಗಗಳನ್ನು ಮುಟ್ಟಿ ತೋರಿಸುವ ಮೂಲಕ ಅಂದರೆ ಮೂಗು, ಮಂಡಿ, ಕೂದಲು ಇತ್ಯಾದಿಗಳನ್ನು ಮುಟ್ಟುವಂತೆ ಅವರಿಗೆ ಮೌಖಿಕ ಸೂಚನೆಗಳನ್ನು ಕೊಡಬೇಕು. ಉದಾಹರಣೆಗೆ, ಶಿಕ್ಷಕನು ತನ್ನ ಮಂಡಿಯನ್ನು ಮುಟ್ಟುತ್ತಾ ಮಕ್ಕಳಿಗೆ ನಿಮ್ಮ ತಲೆಯನ್ನು ಮುಟ್ಟಿರಿ ಎಂದು ಹೇಳಬೇಕು. ಯಾವ ಮಕ್ಕಳು ಗೊಂದಲ ಮಾಡಿಕೊಳ್ಳುತ್ತಾರೆಯೋ ಅವರು ಆಟದಿಂದ ಹೊರಗೆ ಹೋಗಬೇಕು ಮತ್ತು ಕೆಳಗೆ ಕುಳಿತುಕೊಳ್ಳಬೇಕು.




## ಟೈಮ್ ಲೈನ್

ನಾಮಾನನ ಕುಷ್ಠರೋಗ ಯಾವ ವರ್ಷದಲ್ಲಿ ಗುಣವಾಯಿತು? ಉತ್ತರ: ಸುಮಾರು ಕ್ರಿ.ಶ 830ರಲ್ಲಿ.

## ಒಟಗಿನ ಉತ್ತರಗಳು

| | | | | | | | | | | |
|---|---|---|---|---|---|---|---|---|---|---|
| ರ್ಕ | ಪ | ಷ | ದೀ | ಸ್ನಾ | ಜಿ | ಸ್ನಾ | ರೆ | ಷ್ಠ | ಳ್ಳು | ರು |
| ರ್ದ | ಲೀ | ನಾ | ಮಾ | ನ | ನು | ತೆ | ಬಿ | ರ್ವ | ಎ | ಷ್ಠ |
| ಎ | ಳ್ಳು | ಎ | ಕ್ಕ | ಷ್ಠ | ತೆ | ಕೆ | ನಂ | ಪ | ಗ | ರೋ |
| ವಿ | ಗ | ಯೊ | ನು | ನಂ | ದೀ | ರ್ದ | ಗಿ | ನಾ | ಪ | ಗ |
| ಧೇ | ರ್ವ | ನಾ | ರ್ದ | ಧೇ | ಸ್ನಾ | ಲೆ | ವಿ | ಳು | ನು | ಕೋ |
| ಯ | ತೆ | ಳ್ಳು | ದೀ | ನ್ | ಎ | ಯಿ | ಏ | ಕೆ | ನಂ | ಗ್ಯ |
| ತೆ | ಕೆ | ಸು | ಗ | ಕ್ಕ | ಪ | ಕಾ | ಜಿ | ಷ್ಠ | ಗೇ | ರೋ |
| ನಂ | ರ್ವ | ಜಿ | ರ್ವ | ನಾ | ಗಿ | ಳ್ಳು | ತೆ | ಹ | ಕ್ಕ | ನಾ |
| ಗ | ಷ್ಠ | ಚಿ | ಕ್ಕ | ಹು | ಡು | ಗಿ | ಜಿ | ಎ | ಸ್ನಾ | ಅ |





## ಪ್ರಶ್ನೆಗಳು ಮತ್ತು ಉತ್ತರಗಳು

**(ಹಿರಿಯ ವಿದ್ಯಾರ್ಥಿಗಳಿಗೆ)**

1. **ನಾವು ಭೂಲೋಕದಲ್ಲಿ ಮಾಡುವ ಕಾರ್ಯಗಳಿಗೆ ದೇವರು ನಿಜವಾಗಿಯೂ ನಮಗೆ ಬಹುಮಾನ ಕೊಡುತ್ತಾನೆಯೇ?**

   ಕೆಲವೊಮ್ಮೆ ನಂಬಿಕೆ ಕಡಿಮೆಯಿದ್ದರೆ, ದೇವರ ವಾಗ್ದಾನಗಳ ವಿಷಯದಲ್ಲಿ ನಾವು ಸೋಮಾರಿಗಳಾಗುತ್ತೇವೆ. ಲೋಕವು ಅನ್ಯಾಯದಿಂದ ತುಂಬಿದೆ ಎಂಬದಾಗಿ ನಾವು ಹೇಳುತ್ತೇವೆ ಮತ್ತು ಪರಲೋಕವು ಹಾಗೆಯೇ ಇರುತ್ತದೆ ಎಂಬದಾಗಿ ಅಂದುಕೊಳ್ಳುತ್ತೇವೆ ಹಾಗೂ ಭೂಲೋಕದಲ್ಲಿ ನಾವು ಮಾಡುವ ಕೆಲಸಗಳ ಮೇಲಿನ ಗಮನವನ್ನು ಕಳೆದುಕೊಳ್ಳುತ್ತೇವೆ.

2. **ಹೊಸ ಫೋನ್ ತೆಗೆದುಕೊಳ್ಳಲು ನೀವು ಏನು ಮಾಡುವಿರಿ?**

   ತಮಾಷೆಗಾಗಿ, ನೀವೇನು ಕಾರ್ಯಮಾಡುವಿರಿ ಎಂಬದನ್ನು ಚರ್ಚಿಸಿರಿ. ದೇವರು ನಮಗೆ ತಂತ್ರಜ್ಞಾನದ ಬಹುಮಾನಗಳನ್ನು ಕೊಡುತ್ತಾನೆ ಎಂಬದಾಗಿಯೂ ಅವರು ಆಲೋಚಿಸುವಂತೆ ಹೇಳಿರಿ. ಪರಲೋಕ ಮತ್ತು ಭೂಲೋಕ ನಾವು ಊಹಿಸಿಕೊಳ್ಳುವದಕ್ಕಿಂತ ಹೆಚ್ಚು ಉತ್ತಮವಾದದ್ದು ಎಂದು ದೇವರು ಹೇಳಿದ್ದಾನೆ . . . ಆದ್ದರಿಂದ ದೇವರು ನಮಗೆ ತಂತ್ರಜ್ಞಾನದ ಬಹುಮಾನಗಳ ಮೂಲಕ ಆಶ್ಚರ್ಯಪಡಿಸುತ್ತಾನೆ. ಉದಾಹರಣೆಗೆ, ಗುಟೆಮಾಲದಲ್ಲಿ ಇತ್ತೀಚೆಗಿನ ಐಪ್ಯಾಡ್ ಗೆಲ್ಲುವ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಭಾಗವಹಿಸುವವರು ಬಹುಮಾನ ಗೆಲ್ಲವು ಅಸಾಧಾರಣವಾದ ಕಾರ್ಯಗಳನ್ನು ಮಾಡಬೇಕಾಗಿತ್ತು. ಒಬ್ಬ ಹುಡುಗಿ ಜೀವಂತ ಹುಳುವನ್ನು ತಿಂದಳು ಮತ್ತು ಬಹುಮಾನವನ್ನು ಗೆದ್ದುಕೊಂಡಳು. ಅಯ್ಯೋ!!! ದೇವರಿಗಾಗಿ ನೀವೇನು ಮಾಡುವಿರಿ?

3. ನಿಮಗೆ ಮಾಡಲು ಇಷ್ಟವಿಲ್ಲದಿರುವ ಕಾರ್ಯವನ್ನು ಮಾಡುವಂತೆ ದೇವರು ನಿಮಗೆ ಹೇಳಿದರೆ ನೀವೇನು ಮಾಡುವಿರಿ? ಅದಕ್ಕೆ ಬಹುಮಾನ ಸಿಗುತ್ತದೆಯೇ?
ಯೊರ್ದನ್ ಹೊಳೆಯಲ್ಲಿ ಮುಳುಗಲು ಪ್ರವಾದಿಯು ನಾಮಾನನನ್ನು ಕಳುಹಿಸಿದಾಗ ಅವನು ಹೇಗೆ ಕೋಪಗೊಂಡನು ಎಂಬದನ್ನು ನೆನಪು ಮಾಡಿಕೊಳ್ಳಿರಿ. ಆ ಸಮಯದಲ್ಲಿ ಅವನಿಗೆ ತನ್ನ ಕುಷ್ಠರೋಗ ಗುಣವಾಗುವದೆಂದು ಗೊತ್ತಿರಲಿಲ್ಲ. ನಿಮಗೆ ಮಾಡಲು ಇಷ್ಟವಿಲ್ಲದಿರುವ ಕೆಲಸಗಳನ್ನು ಒಂದೆ ಕಡೆ ಬರೆಯಿರಿ, ನಿಮಗೆ ಮಾಡಲು ಇಷ್ಟವಿರುವ ಕೆಲಸಗಳನ್ನು ಒಂದು ಕಡೆ ಬರೆಯಿರಿ, ಹೊಸ ಫೋನ್ ಅಥವಾ ನಿಮ್ಮ ಕುಟುಂಬದಲ್ಲಿ ಸಮಾಧಾನ. ನಿಮಗೆ ಬೇಕಾಗಿರುವ ಬಹುಮಾನ ಸಿಗುವದಾದರೆ, ನಿಮಗೆ ಇಷ್ಟವಿಲ್ಲದ ಕೆಲಸಗಳನ್ನು ಮಾಡಲು ನೀವು ಮುಂದಾಗುತ್ತೀರೋ?

## ಆಟ

ಬಹುಮಾನಗಳನ್ನು ಹುಡುಕುವುದು

ತರಗತಿಯನ್ನು ತಂಡಗಳಾಗಿ ವಿಭಾಗಿಸಿರಿ ಮತ್ತು ಒಬ್ಬನ್ನು ಮುಂದೆ ಬಂದು ಆಡುವಾಗ ಉಳಿದವರು ತಂಡದ ಆಟಗಾರನಿಗೆ ಪ್ರೋತ್ಸಾಹಪಡಿಸಬೇಕು. ಪ್ರತಿಯೊಂದು ತಂಡಕ್ಕಾಗಿ, ಒಂದು ಬಟ್ಟಲು ಅಥವಾ ಬಕೆಟ್ ತುಂಬಾ ಮಣ್ಣು ತೆಗೆದುಕೊಳ್ಳಿರಿ. ಮಣ್ಣಿನೊಳಗೆ ಮಕ್ಕಳಿಗೆ ಗಾಯಮಾಡುವಂಥ ಚೂಪಾದ ವಸ್ತುಗಳು ಇರದಂತೆ ನೋಡಿಕೊಳ್ಳಿರಿ. ಮಣ್ಣು ತುಂಬಿರುವ ಬಕೆಟ್ ನೊಳಗೆ ಪ್ರತಿಯೊಂದರಲ್ಲಿಯೂ ಪೇಪರ್ ಕ್ಲಿಪ್ ಅಥವಾ ಇತರೆ ಸಣ್ಣ ವಸ್ತುಗಳನ್ನು "ಬಹುಮಾನಗಳಾಗಿ" ಮತ್ತು ಕಲ್ಲುಗಳನ್ನು ಇಡಿರಿ. ನೀವು "ಶುರು ಮಾಡಿರಿ" ಎಂದು ಹೇಳುವಾಗ ಪ್ರತಿಯೊಬ್ಬ ಆಟಗಾರನು ತಮ್ಮ ಕೈಗಳನ್ನು ಬಕೆಟ್ ನೊಳಗೆ ಇಟ್ಟು 30 ಸೆಕೆಂಡ್ ಗಳಲ್ಲಿ ಎಲ್ಲಾ ಪೇಪರ್ ಕ್ಲಿಪ್ ಗಳನ್ನು ಹುಡುಕಬೇಕು. ಚಿಕ್ಕ ಮಕ್ಕಳಿಗೆ ಹೆಚ್ಚು ಸಮಯವನ್ನು ಕೊಡಿರಿ. ಮಣ್ಣು ಕಠಿಣವಾದ ಪರಿಸ್ಥಿತಿಗಳನ್ನು ಪ್ರತಿನಿಧಿಸುತ್ತದೆ, ಹೊಳೆಯುವ ಪೇಪರ್ ಕ್ಲಿಪ್ ಗಳು ದೇವರೊಂದಿಗಿರುವ ನಿಕಟವಾದ ಸಂಬಂಧವನ್ನು ಪ್ರತಿನಿಧಿಸುತ್ತದೆ ಮತ್ತು ಕಲ್ಲುಗಳು ಜನರ ಕಠಿಣ ಹೃದಯಗಳನ್ನು ಪ್ರತಿನಿಧಿಸುತ್ತವೆ ಎಂಬದಾಗಿ ಹೇಳಿರಿ. ಬಹುಮಾನಗಳನ್ನು ಹುಡುಕುವದು ಪ್ರತಿಯೊಬ್ಬರ ಜವಾಬ್ದಾರಿಕೆಯಾಗಿದೆ, ಈ ಸಮಯದಲ್ಲಿ ಯಾರೂ ಜಗಳವಾಡದಂತೆ ನೋಡಿಕೊಳ್ಳಿರಿ.

## ಹಾಜರಾತಿ




ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:
ಕುಷ್ಠರೋಗ

## ಹೋಮ್ ವರ್ಕ್

ನಿಮ್ಮ ಸಣ್ಣ ತಮ್ಮ ತಂಗಿಯರು, ನಿಮ್ಮ ಸ್ನೇಹಿತರ ತಮ್ಮ ತಂಗಿಯರು ಅಥವಾ ನೀವು ಸಹಜವಾಗಿ ಯಾರ ಕಡೆಗೆ ಗಮನ ಕೊಡುವದಿಲ್ಲವೋ ಅವರ ಮಾತುಗಳನ್ನು ಕೇಳಿಸಿಕೊಳ್ಳಿರಿ. ಅವರ ಆಲೋಚನೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿರಿ. ಒಂದುವೇಳೆ ಅವರು ನೀವು ಮಾಡುತ್ತಿರುವ ತಪ್ಪುಗಳನ್ನು ಹೇಳಿದರೆ ಅಥವಾ ಅವರಿಗೆ ಅನಾನುಕೂಲವಾಗುವಂಥ ನಿಮ್ಮ ಕಾರ್ಯಗಳ ಬಗ್ಗೆ ನಿಮಗೆ ತಿಳಿಸಿದರೆ ಅವರ ಮಾತುಗಳನ್ನು ಕೇಳಿಸಿಕೊಳ್ಳಿರಿ ಹಾಗೂ ನಿಮ್ಮ ನಡವಳಿಕೆಯನ್ನು ಬದಲಾಯಿಸಿಕೊಳ್ಳಿರಿ.

ಓದಿರಿ

ದಿನ 1: 2 ಅರಸು 18:1-9

ದಿನ 2: 2 ಅರಸು 20:1-6

ದಿನ 3: 2 ಅರಸು 20:7-11

ದಿನ 4: ನೆಹೆಮಿಯ 1:1-6,11

ದಿನ 5: ನೆಹಮಿಯ 2:1-5

# 4. ಅದರ ವಿಷಯದಲ್ಲಿ ಏನಾದರು ಮಾಡಿರಿ



ಸತ್ಯವೇದ ಕಥೆ: ಹಿಜ್ಕೀಯ ಮತ್ತು ನೆಹೆಮಿಯ

2 ಅರಸು 18:1-8, 20:1-11, 2 ಪೂರ್ವಕಾಲವೃತ್ತಾಂತ 29:1-19, 29:35-36, ನೆಹೆಮಿಯ 1:1-2:5

## ಕಂಠಪಾಠ ವಚನ

ಯೊವಾನ್ನ **15:15** ನಾನಿನ್ನು ನಿಮ್ಮನ್ನು ದಾಸರೆಂದು ಕರೆಯುವುದಿಲ್ಲ. ಧಣಿಯ ಕೆಲಸಕಾರ್ಯಗಳು ದಾಸನಿಗೆ ತಿಳಿಯವು. ನಾನಾದರೋ ಪಿತನಿಂದ ಕೇಳಿಸಿಕೊಂಡದ್ದನ್ನೆಲ್ಲಾ ನಿಮಗೆ ತಿಳಿಸಿದ್ದೇನೆ. ಈ ಕಾರಣ ನಿಮ್ಮನ್ನು ಗೆಳೆಯರೆಂದು ಕರೆದಿದ್ದೇನೆ.

## ಕಥೆಯ ಅವಶ್ಯಕತೆ



ಲೂಕನ ಮನೆಯ ಎದುರಿಗಿದ್ದ ರಸ್ತೆ ಹಾಳಾಗಿತ್ತು, ಜೋರಾಗಿ ಮಳೆ ಬಂದದ್ದರಿಂದ ಎಲ್ಲಾ ಕಡೆಗಳಲ್ಲಿಯೂ ಹಳ್ಳಗಳಾಗಿದ್ದವು. ಹಳ್ಳದಲ್ಲಿ ಬೀಳದಂತೆ ರಸ್ತೆಯಲ್ಲಿ ಸೈಕಲ್ ತುಳಿಯಲು ಅವನಿಗೆ ಬಹಳ ಕಷ್ಟವಾಗುತ್ತಾ ಇತ್ತು. ಆದ್ದರಿಂದ ಅವನು ರಸ್ತೆ ದುರಸ್ಥಿ ಕಾರ್ಯ ಮಾಡಲು ಎಲ್ಲಾ ಹಳ್ಳಗಳನ್ನು ಕಲ್ಲು ಹಾಗು ಮಣ್ಣಿನಿಂದ ಮುಚ್ಚಲು ಪ್ರಾರಂಭಿಸಿದನು. ಅ ಕೆಲಸ ಬಹಳ ಕಷ್ಟವಾಗಿದ್ದರಿಂದ ಅವನ ತಲೆ ಕೂದಲು ಮತ್ತು ಬಟ್ಟೆ ಕೊಳಕಾದವು. ಅವನು ಹಾಗಿರುವದನ್ನು ನೋಡಿ ಅವನ ಪಕ್ಕದ ಮನೆಯ ಹುಡುಗರು ಗೇಲಿ ಮಾಡಲು ಹಾಗು ತಮಾಷೆ ಮಾಡಲು ಪ್ರಾರಂಭಿಸಿದರು.

## ಮುಖ್ಯ ಪಾಠ

ಇಂದು ನಾವು ನಂಬಿಕೆಯ ಇಬ್ಬರು ವೀರರನ್ನು ನೋಡಿಕೊಳ್ಳೋಣ. ಇಲ್ಲಿಯ ತನಕ ನಾವು ಬಹುತೇಕ ದೇವರಿಗೆ ವಿಧೇಯರಾಗುವದು ಮತ್ತು ಆತನ ಮುನ್ನಡೆಸುವಿಕೆಯನ್ನು ಅನುಸರಿಸುವದು ಹೇಗೆ ಎಂಬದನ್ನು ಕಲಿತುಕೊಂಡಿದ್ದೇವೆ. ಇವುಗಳು ಅತ್ಯಂತ ಸುಂದರವಾದ ಕಾರ್ಯಗಳಾಗಿರುವದರಿಂದ ನಾವು ನಮ್ಮ ಜೀವನ ಪರ್ಯಂತರ ಅವುಗಳನ್ನು ಮಾಡಬೇಕು. ಎಲ್ಲಾ ಸಮಯಗಳಲ್ಲಿಯೂ ಏನು ಮಾಡಬೇಕೆಂದು ದೇವರು ಹೇಳುವ ತನಕ ನಾವು ಕಾಯಬೇಕು ಎಂಬದು ಆತನಿಗೆ ಇಷ್ಟವಿಲ್ಲ (ಕೀರ್ತನೆ 32:9). ಇಂದು ನಾವು ನೋಡುವ ಇಬ್ಬರು ವೀರರು ದೇವರ ಸ್ವರವನ್ನೂ ಕೇಳಿಸಿಕೊಳ್ಳಲಿಲ್ಲ, ಅವರಿಗೆ ಏನು ಮಾಡಬೇಕೆಂಬದಾಗಿಯೂ ಹೇಳಲಾಗಲಿಲ್ಲ. ಇಬ್ಬರೂ ಅವಶ್ಯಕತೆಯನ್ನು ನೋಡಿದರು ಮತ್ತು ಅದಕ್ಕನುಸಾರ ಕಾರ್ಯವನ್ನು ಮಾಡಿದರು. ಹಿಜ್ಕೀಯನು 25 ನೇ ವಯಸ್ಸಿನಲ್ಲಿ ಅರಸನಾದನು ಮತ್ತು ಇಸ್ರಾಯೇಲ್ಯರು ದೇವರನ್ನು ನಿರಾಕರಿಸಿರುವದನ್ನು ಮತ್ತು ದೇವಾಲಯವನ್ನು ಹಾಳು ಮಾಡಿರುವದನ್ನು ನೋಡಿದನು. ಇವು ಅವನಿಗೆ ತೊಂದರೆ ಮಾಡಿದವು, ಆದ್ದರಿಂದ ಅವನು ದೇವಾಲಯವನ್ನು ಶುಚಿಗೊಳಿಸಲು ಮತ್ತು ಕಾರ್ಯಗಳನ್ನು ಸರಿಪಡಿಸಲು ಜನರನ್ನು ಮುನ್ನಡೆಸುವ ತೀರ್ಮಾನ ತೆಗೆದುಕೊಂಡನು. ಅವನು ದೇಶದಾದ್ಯಂತ ಪ್ರಯಾಣಿಸಿದನು ಮತ್ತು ಎಲ್ಲಾ ವಿಗ್ರಹಗಳನ್ನು ಹಾಳು ಮಾಡಿ, ಒಬ್ಬನೇ ನಿಜವಾದ ದೇವರನ್ನು ಆರಾಧಿಸಿರಿ ಎಂದು ಜನರಿಗೆ ಹೇಳಿದನು. ಇದೇ ಪ್ರಕಾರ, ಅನೇಕ ವರ್ಷಗಳ ನಂತರ ಇಸ್ರಾಯೇಲ್ಯರು ಸುದೀರ್ಘಕಾಲ ಸೆರೆಯಲ್ಲಿದ್ದಾಗ, ಯೆರೂಸಲೇಮಿನ ಗೋಡೆಗಳು ಹಾಳು ಬಿದ್ದಿವೆ ಮತ್ತು ಜನರು ದಿಕ್ಕಿಲ್ಲದವರಾಗಿದ್ದಾರೆ ಎಂಬ ಸುದ್ದಿಯನ್ನು ನೆಹೆಮಿಯನು ಕೇಳಿಸಿಕೊಂಡನು. ಮೂಲತಃ ಅವನು ನಾಯಕನಾಗಿರಲಿಲ್ಲ, ಆದರೆ ಅವನಲ್ಲಿ ಏನೋ ಕಳವಳ ಕಾಣಿಸಿಕೊಂಡಿತು ಆದ್ದರಿಂದ ಅವನು ಒಂದು ತೀರ್ಮಾನ ತೆಗೆದುಕೊಂಡನು. ಉಪವಾಸವಿದ್ದು ಪ್ರಾರ್ಥನೆ ಮಾಡಿ, ದೇವರನ್ನು

ಬೇಡಿಕೊಂಡ ನಂತರ ಅವನು ಯೆರೂಸಲೇಮಿಗೆ ಹೋಗಿ ಅದರ ಗೋಡೆಗಳನ್ನು ಸರಿಪಡಿಸಲು  ಪಾರಸಿಯ ಅರಸನಿಂದ ಅನುಮತಿ ಹಾಗೂ ಸೌಕರ್ಯಗಳನ್ನು ಬೇಡಿಕೊಂಡನು. ಯೆರೂಸಲೇಮಿನಲ್ಲಿ ಜೀವಿಸುತ್ತಿದ್ದ ಎಲ್ಲಾ ಇಸ್ರಾಯೇಲ್ಯರನ್ನು ಅವನು ಒಟ್ಟುಗೂಡಿಸಿದನು ಮತ್ತು ಸುತ್ತಮುತ್ತಲ ಜನರಿಂದ ವಿರೋಧಗಳು ಎದುರಾಗುತ್ತಾ ಇದ್ದರೂ ಪುನರ್ ನಿರ್ಮಾಣದ ಕಾರ್ಯವನ್ನು ಆಯೋಜಿಸಿದನು.

ಯೇಸು ಕ್ರಿಸ್ತನು ಹೇಳಿರುವದೇನೆಂದರ ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕು ಮತ್ತು ಸ್ನೇಹತರ ಹಾಗೆ ಆತನ ಕಾರ್ಯಗಳನ್ನು ತಿಳಿದುಕೊಳ್ಳಬೇಕು, ನಾವು ಇತರರ ಹಿತವನ್ನು ಬಯಸಬೇಕು (ಯೋಹಾನ 15:12-17). ಮುಂದೊಂದು ದಿನ, ಒಂದುವೇಳೆ ಈಗಲ್ಲದಿದ್ದರೂ, ಕನಸು ಕಾಣಲು ನೀವು ಪ್ರಾರಂಭಿಸಬಹುದು. ಲೋಕದಲ್ಲಿ ಏನಾದರೂ ಅನ್ಯಾಯ ನಡೆಯುತ್ತಾ ಇರಬಹುದು, ಸಭೆಯಲ್ಲಿ ಏನೋ ಕಡಿಮೆಯಾಗಿರಬಹುದು, ಜನರು ಬೀದಿಗಳಲ್ಲಿ ಜಗಳವಾಡುತ್ತಾ ಇರಬಹುದು, ಮನೆಗಳು, ಕುಟುಂಬಗಳು ಇಲ್ಲದೆ ಮಕ್ಕಳು ಕಷ್ಟಪಡುತ್ತಾ ಇರಬಹುದು, ಜನರು ನಮ್ಮ ಪ್ರೀತಿಯುಳ್ಳ, ಮಹನಾದ ದೇವರ ಬಗ್ಗೆ  ಕೇಳದೆಯೇ ಇರಬಹುದು ಅಥವಾ ಜನರಿಗೆ ಸಹಾಯದ ಅವಶ್ಯಕತೆ ಇರಬಹುದು. ನಿಮ್ಮನ್ನು ಯಾವುದು ಬಾಧಿಸುತ್ತಾ ಇದೆ? ನಿಮಗೆ ಕಣ್ಣೀರು ಬರುವಂತೆ ಯಾವುದು ಕಾರಣವಾಗುತ್ತಿದೆ ಅಥವಾ ರಾತ್ರಿಯೆಲ್ಲಾ ನಿದ್ದೆ ಮಾಡಲು ಆಗದಂತೆ ತೊಂದರೆ ಕೊಡುತ್ತಾ ಇದೆ? ಬಹುಶಃ ಇದು ನಿಮಗೆ ಚಿಂತೆ ಉಂಟು ಮಾಡದೆ ಇರಬಹುದು, ಆದರ ಇದು ದೇವರಿಗೆ ಚಿಂತೆ ಉಂಟು ಮಾಡುತ್ತಾ ಇದೆ ಆದ್ದರಿಂದಲೇ ಆತನು ನಿಮ್ಮನ್ನು ತನ್ನೊಂದಿಗೆ ಸೇರಿಕೊಳ್ಳುವಂತೆ ಆಹ್ವಾನಿಸುತ್ತಾ ಇದ್ದಾನೆ. ಕಾಯಿರಿ ಎಂದು ದೇವರು ಒಂದುವೇಳೆ ನಿಮಗೆ ಹೇಳುವದಾದರ ನೀವು ವಿಧೇಯರಾಗಬೇಕು ಆದರೂ ಸುಮ್ಮನೆ ಸೂಚನೆಗಳಿಗಾಗಿ ಕಾಯುತ್ತಾ ಇರಬೇಡಿರಿ. ಇಲ್ಲವಾದರೆ, ಅದರ ಬಗ್ಗೆ ಪ್ರಾರ್ಥನೆ ಮಾಡಲು ಪ್ರಾರಂಭಿಸಿರಿ. ನಿಮಗೆ ಬೇಕಾಗಿರುವ ತರಬೇತಿ ಮತ್ತು ಸಹಾಯ ಹಾಗೂ ಯೋಜನೆಯ ಕುರಿತಾದ ಮಾರ್ಗದರ್ಶನಕ್ಕಾಗಿ ಆತನನ್ನು ಕೇಳಿಕೊಳ್ಳಿರಿ. ಅದರ ಬಗ್ಗೆ ಏನಾದರು ಮಾಡುವ ಜನರನ್ನು ಗುರುತಿಸಿಕೊಳ್ಳಿರಿ ಮತ್ತು ಅವರೊಂದಿಗೆ ಸೇರಿಕೊಳ್ಳಲು ಸಹಾಯವಾಗುವ ಮಾರ್ಗಗಳನ್ನು ತಿಳಿದುಕೊಳ್ಳಿರಿ. ಒಂದುವೇಳೆ ಅದರ ಬಗ್ಗೆ ಯಾರೂ ಏನೂ ಮಾಡದೆ ಇರುವದಾದರೆ, ನೀವೇ ಮಾರ್ಗವನ್ನು ಮುನ್ನಡೆಸಿರಿ! ನಿಮ್ಮಲ್ಲಿ ಆ ಭಾವನೆ ಹುಟ್ಟುವ ತನಕ ಕಾಯುತ್ತಾ ಇರಬೇಡಿರಿ ಯಾಕಂದರೆ ನಿಮ್ಮಲ್ಲಿ ಸಂಪೂರ್ಣವಾದ ಭಾವನೆ ಕೆಲವೊಮ್ಮೆ ಬರುವದೇ ಇಲ್ಲ. ನಾನು ಈಗ ಚಿಕ್ಕವನಾಗಿದ್ದೇನೆ ದೇವರು ನನ್ನನ್ನು ಉಪಯೋಗಿಸಿಕೊಳ್ಳಲಾರನು ಎಂದು ಯೋಚಿಸಬೇಡಿರಿ (1 ತಿಮೊಥೆ 4:12). ನಿಮ್ಮಿಂದ ಮಾಡಲು ಆಗದೆ ಇರುವ ಕಾರ್ಯಗಳ ಬಗ್ಗೆ ಯೋಚಿಸಬೇಡಿರಿ; ನೀವೇನು ಮಾಡಬಹುದು ಎಂಬುದರ ಬಗ್ಗೆ ಯೋಚಿಸಿರಿ ಮತ್ತು ಕೂಡಲೇ ಅದನ್ನು ಮಾಡಿರಿ!

ನನಗೆ ಸಹಾಯ ಮಾಡುವಂತೆ ನಾನು ದೇವರನ್ನು ಬೇಡಿಕೊಳ್ಳುತ್ತೇನೆ ನಂತರ ಲೋಕದಲ್ಲಿ ನನಗೆ ಚಿಂತೆಯನ್ನುಂಟು ಮಾಡುವ ವಿಷಯದ ಬಗ್ಗೆ ಕಾರ್ಯ ಮಾಡುತ್ತೇನೆ.

## ವಿಶ್ಲೇಷಣೆ



ಅಕ್ಕಪಕ್ಕದ ಮನೆಯವರು ಗೇಲಿ ಮಾಡುತ್ತಾ ಇದ್ದರೂ ಅದರ ಬಗ್ಗೆ ಚಿಂತಿಸದೆ ಲೂಕನು ರಸ್ತೆಯಲ್ಲಿ ಕೆಲಸ ಮಾಡುವದನ್ನು ಮುಂದುವರೆಸಿದನು. ಈಗ ಅವನು ಮಾತ್ರವಲ್ಲ ಬದಲಾಗಿ ಅಕ್ಕಪಕ್ಕದ ಮನೆಯವರೆಲ್ಲರೂ ಯಾವುದೇ ತೊಂದರೆಯಿಲ್ಲದೆ ರಸ್ತೆಯನ್ನು ಉಪಯೋಗಿಸಬಹುದಾಗಿದೆ.

## ಚಟುವಟಿಕೆ

ಅನ್ಯಾಯಗಳು

ಎಲ್ಲರನ್ನು ವೃತ್ತಾಕಾರದಲ್ಲಿ ಕೂರಿಸಿರಿ ಮತ್ತು ಶಾಲೆಯಲ್ಲಿ ನಡೆದಿರುವ ಅನ್ಯಾಯಗಳು, ಯಾರಾದರೂ ಮಕ್ಕಳು ಇತರರಿಗೆ ತೊಂದರೆ ಕೊಡುತ್ತಾ ಇರುವದಾದರೆ ಅವರ ಬಗ್ಗೆ ಅಥವಾ ಜನರು ನಿಮ್ಮಿಂದ ಅನುಮತಿ ಪಡೆಯದೆ ನಿಮ್ಮ ವಸ್ತುಗಳನ್ನು ತೆಗೆದುಕೊಳ್ಳುತ್ತಾ

ಇರುವದಾದರೆ ಅವುಗಳ ಬಗ್ಗೆ ಚಿಂತಿಸಿರಿ. ಹಿಂದಿನವರು ಹೇಳಿದ್ದನ್ನೇ ಹೇಳಿದರೂ ಪರವಾಗಿಲ್ಲ ಪ್ರತಿಯೊಬ್ಬರೂ ಏನಾದರು ಹೇಳಬೇಕು. ಈಗ ಅದರ ವಿಷಯದಲ್ಲಿ ಏನು ಮಾಡಬೇಕೆಂದು ಯೋಚಿಸಿರಿ ಅಂದರೆ ಶಿಕ್ಷಕರಿಗೆ ಅಥವಾ ತಂದೆತಾಯಿಗಳಿಗೆ ಹೇಳುವದು, ಸಹಾಯಕ್ಕಾಗಿ ದೇವರಿಗೆ ಪ್ರಾರ್ಥನೆ ಮಾಡುವದು ಅಥವಾ ಪಾಪಿಗಳಾಗಿದ್ದ ನಮ್ಮನ್ನು ಕ್ಷಮಿಸಿ ದೇವರು ನಮಗೆ ಕರುಣೆಯನ್ನು ತೋರಿರುವ ಹಾಗೆ ಇತರರಿಗೆ ಕರುಣೆ ತೋರಿಸುವದು ಇವುಗಳ ಬಗ್ಗೆ ಚರ್ಚಿಸಿರಿ.

## ಟೈಮ್ ಲೈನ್

ಹಿಜ್ಕೀಯನು ಯಾವ ವರ್ಷದಲ್ಲಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದನು? ಉತ್ತರ: ಬಹುಶಃ ಕ್ರಿ.ಶ. 715 ರಲ್ಲಿ.
ಹಿಜ್ಕೀಯನು ಯಾವ ವರ್ಷದಲ್ಲಿ ಮೃತಪಟ್ಟನು? ಉತ್ತರ: ಬಹುಶಃ ಕ್ರಿ.ಶ. 686 ರಲ್ಲಿ.
ನೆಹೆಮಿಯನು ಯಾವ ವರ್ಷದಲ್ಲಿ ಯೆರೂಸಲೇಮಿನ ಗೋಡೆಯನ್ನು ಮತ್ತೆ ಕಟ್ಟಲು ಪ್ರಾರಂಭಿಸಿದನು? ಉತ್ತರ: ಬಹುಶಃ ಕ್ರಿ.ಶ. 444 ರಲ್ಲಿ.

## ಒಗಟಿನ ಉತ್ತರಗಳು



| | | | | | | | | | | |
|---|---|---|---|---|---|---|---|---|---|---|
| ಪು | ನ | ರ್ | ನಿ | ಮಾರ್ | ಣ | ಗೋ | ವೀ | ಪಾ | ಧ | ಳು |
| ಕೆ | ತಿ | ಇ | ಧ | ಡು | ಹೆ | ದ್ವಾ | ಇ | ಯೇ | ಪಾ | ಹಾ |
| ದೇ | ಳು | ಪಾ | ವೀ | ರ | ಸ | ಗೋ | ಸ | ದೇ | ಇ | ಳು |
| ಸ | ದ್ವಾ | ತಿ | ಗೋ | ರ | ದ್ವಾ | ಹೋರ್ | ಜೇ | ಪಾ | ಧ | ಕೆ |
| ತಿ | ಮ | ನು | ಅ | ತಿ | ರು | ಲ್ಯ | ಯೇ | ಸ್ರಾ | ಇ | ಗೋ |
| ಹೆ | ಧ | ಹೆ | ಪಾ | ದೇ | ಯೇ | ಕೆ | ಯೇ | ದ್ವಾ | ಸ | ಡೆ |
| ದೇ | ವಾ | ಲ | ಯ | ವೀ | ಏ | ಪಾರ್ | ಡು | ಗೋ | ತಿ | ಗೋ |
| ಕೆ | ಯೇ | ಧ | ದೇ | ಸ | ದ್ವಾ | ನಾ | ಯ | ಕ | ಸ | ದ್ವಾ |
| ಇ | ವೀ | ಕೆ | ಇ | ಧ | ರೋ | ವಿ | ಹೆ | ಮಿ | ತಿ | ಇ |
| ಯೇ | ಬಿ | ಳು | ದೇ | ಸ | ವೀ | ಧ | ದೇ | ಹೆ | ಹೆ | ಳು |
| ನಂ | ಗೋ | ವೀ | ರ್ಯ | ಕ | ಸೌ | ಹೆ | ತಿ | ಕೆ | ದ್ವಾ | ನೆ |



ಸರಿ ಅಥವಾ ತಪ್ಪು

ಉತ್ತರ ಸರಿಯಾಗಿದ್ದರೆ ಸರಿ ಎಂಬದಾಗಿ ಬರೆಯಿರಿ,
ತಪ್ಪಾಗಿದ್ದರೆ ತಪ್ಪು ಎಂಬದಾಗಿ ಬರೆಯಿರಿ.

1. ಹಿಜ್ಕೀಯನು 20ನೇ ವಯಸ್ಸಿನಲ್ಲಿ ಅರಸನಾದನು.
2. ನೆಹೆಮಿಯ ಒಬ್ಬನೇ ಯೆರೂಸಲೇಮ್ ಗೋಡೆಯನ್ನು ಕಟ್ಟಿದನು.
3. ನಿಮಗೆ ಯಾರೂ ಹೇಳದೆ ಇದ್ದರೂ ನೀವು ಜವಾಬ್ದಾರಿಕೆ ತೆಗೆದುಕೊಳ್ಳಬಹುದು.
4. ಹಿಜ್ಕೀಯನು ಇಸ್ರಾಯೇಲ್ ಜನರ ಮೇಲೆ ಆಳ್ವಿಕೆ ಮಾಡಿದನು.
5. ನೆಹೆಮಿಯನಿಗೆ ಯೆರೂಸಲೇಮಿನ ಗೋಡೆ ಹಾಳಾಗಿರುವ ಸುದ್ದಿ ಮುಟ್ಟಿದಾಗ, ಅವನು ಪಾರಸಿಯದಲ್ಲಿ ಜೀವಿಸುತ್ತಿದ್ದನು.



## ಸರಿ ಅಥವಾ ತಪ್ಪು

ಉತ್ತರ ಸರಿಯಾಗಿದ್ದರೆ ವೃತ್ತವನ್ನು ಹಾಕಿರಿ ಮತ್ತು ಉತ್ತರ ತಪ್ಪಾಗಿದ್ದರೆ ಈ ಗುರುತನ್ನು ಹಾಕಿರಿ:

1. ಹಿಜ್ಕೀಯನು ತನ್ನ ಇಪ್ಪತ್ತನೇ ವಯಸ್ಸಿನಲ್ಲಿ ಅರಸನಾದನು.


2. ನೆಹೆಮಿಯನು ಒಬ್ಬನೇ ಯೆರೂಸಲೇಮಿನ ಗೋಡೆಯನ್ನು ಪುನರ್ ಸ್ಥಾಪಿಸಿದನು.
3. ಒಂದುವೇಳೆ ನಿಮಗೆ ಯಾರು ಏನೇ ಹೇಳದಿದ್ದರೂ ನೀವು ಜವಾಬ್ದಾರಿಕೆಯನ್ನು ತೆಗೆದುಕೊಳ್ಳಬಹುದು.
4. ಹಿಜ್ಕೀಯನು ಇಸ್ರಾಯೇಲ್ ಜನರ ಮೇಲೆ ಆಳ್ವಿಕೆ ಮಾಡಿದನು.
5. ನೆಹೆಮಿಯನು ಪಾರಸಿಯ ದೇಶದಲ್ಲಿ ಜೀವಿಸುತ್ತಿದ್ದಾಗ ಯೆರೂಸಲೇಮಿನ ಗೋಡೆ ಹಾಳಾಗಿರುವದನ್ನು ಕೇಳಿ ಬಹಳವಾಗಿ ವ್ಯಥೆಪಟ್ಟನು.

## ಪ್ರಶ್ನೆಗಳು ಮತ್ತು ಉತ್ತರಗಳು

**(ಹಿರಿಯ ವಿದ್ಯಾರ್ಥಿಗಳಿಗೆ)**

1. ನಿಮ್ಮ ಸಮುದಾಯದಲ್ಲಿ ಅಥವಾ ಶಾಲೆಯಲ್ಲಿ ಏನಾದರೂ ತಪ್ಪು ನಡೆಯುತ್ತಿರುವದನ್ನು ನೀವು ಗಮನಿಸುತ್ತಿದ್ದೀರೋ? ಅದರ ವಿಷಯದಲ್ಲಿ ಏನು ಮಾಡುವಿರಿ? (ಇಲ್ಲಿನ ಉದ್ದೇಶ ಅವರ ಸುತ್ತಮುತ್ತಲು ನಡೆಯುವ ಅನ್ಯಾಯಗಳ ಕುರಿತು ಮಾತನಾಡುವದಾಗಿದೆ ಮತ್ತು ಪರಿಸ್ಥಿತಿಗಳನ್ನು ಸರಿಪಡಿಸಲು ಅವರು ಏನು ಮಾಡಬಹುದು ಎಂಬದನ್ನು ತಿಳಿಸುವದಾಗಿದೆ). ಶಾಲೆಯಲ್ಲಿ ಪ್ರತಿದಿನ ಅವಮಾನವನ್ನು ಅನುಭವಿಸುವ ಹುಡುಗ, ಎಂದಿಗೂ ಊಟವನ್ನೇ ತಾರದಿರುವ ಒಬ್ಬ ಹುಡುಗಿ ಅಥವಾ ತನ್ನ ಮಗನನ್ನು ಪ್ರತಿದಿನ ಹೊಡೆಯುವ ತಂದೆ. ಇವುಗಳನ್ನು ಬಗೆಹರಿಸಲು ಅವರು ಏನು ಮಾಡಬಹುದು ಎಂಬದರ ಬಗ್ಗೆ ಮಾತನಾಡಿರಿ.
2. ಹಿಜ್ಕೀಯ ಮತ್ತು ನೆಹೆಮಿಯ ಜವಾಬ್ದಾರಿಕೆಗಳನ್ನು ತೆಗೆದುಕೊಂಡರೋ ಅಥವಾ ಸುಮ್ಮನೆ ದೇವರ ಮಾತುಗಳಿಗೆ ವಿಧೇಯರಾದರೋ?
   ಚರ್ಚೆಯನ್ನು ನಡೆಸಲು ಪ್ರಯತ್ನಿಸಿರಿ ಸುಮ್ಮನೆ ಹೌದು ಅಥವಾ ಇಲ್ಲ ಎಂದು ಹೇಳಿ ಮುಗಿಸಬೇಡಿರಿ. ಪಾಠದಲ್ಲಿ ಬರುವ ಎರಡು ಪರಿಸ್ಥಿತಿಗಳಲ್ಲಿಯೂ, ಅವರು ತಮ್ಮ ಸ್ವಂತ ಕಣ್ಣುಗಳಿಂದ ಸಮಸ್ಯೆಗಳನ್ನು ನೋಡಿದರು ಮತ್ತು ಅವುಗಳಲ್ಲಿ ಸರಿಪಡಿಸಲು ತಮ್ಮಿಂದಾಗುವ ಕಾರ್ಯವನ್ನು ಮಾಡಲು ಮುಂದಾದರು. ಇವರಿಬ್ಬರಲ್ಲಿ ಯಾರೂ ದೇವರಿಂದ ಆಜ್ಞೆಯನ್ನು ಪಡೆಯಲಿಲ್ಲ, ಬದಲಾಗಿ ಸತ್ಯವೇದದಲ್ಲಿ ಈಗಾಗಲೇ ಬರೆದಿರುವಂತೆ ನಡೆದುಕೊಂಡರು. ಅವರು ಜವಾಬ್ದಾರಿಕೆಯನ್ನು ತೆಗೆದುಕೊಂಡರು ಮತ್ತು ದೇವರಿಗಾಗಿ ಮಹತ್ಕಾರ್ಯವನ್ನು ಮಾಡಿದರು.
3. ಆದರೆ ನಾನು ಬೇರೆಯವರ ಕೆಲಸಗಳು ಮತ್ತು ಸಮಸ್ಯೆಗಳಲ್ಲಿ ತಲೆ ಇಡಬೇಕೇ?
   ನಾವು ನಮ್ಮ ಸಮಸ್ಯೆಯನ್ನು ಮಾತ್ರವೇ ನೋಡುವವರಾಗಿರದೆ ಜವಾಬ್ದಾರಿಯುಳ್ಳ ವ್ಯಕ್ತಿಯಾಗಿರುವದೆಂದರೆ ಏನು ಎಂಬದರ ಬಗ್ಗೆ ಮಾತನಾಡಿರಿ. ಸಮಾರ್ಯದವರು ಹಾಗೇ ಸುಮ್ಮನೆ ಹೋಗದೆ ಸಹಾಯ ಮಾಡಲು ನಿಂತುಕೊಂಡ ಉದಾಹರಣೆಯನ್ನು ನೀವು ಕೊಡಬಹುದು.

## ಆಟ



ಮನೆಯಲ್ಲಿ ವಾಸಿಸುವದು

ಮಕ್ಕಳನ್ನು ಮೂರು ಗುಂಪುಗಳಾಗಿ ವಿಭಾಗಿಸಿರಿ. ಪ್ರತಿಯೊಂದು ಗುಂಪಿನಲ್ಲಿರುವ ಇಬ್ಬರು ಮಕ್ಕಳು ತಮ್ಮ ದೇಹಗಳಿಂದ ಎರಡು ಗೋಡೆಗಳನ್ನು ನಿರ್ಮಿಸಬೇಕು ಮತ್ತು ತಮ್ಮ ಕೈಗಳನ್ನು ಮೇಲೆತ್ತಿ ಜೋಡಿಸುವ ಮೂಲಕ ಮೇಲ್ಛಾವಣಿಯನ್ನು ನಿರ್ಮಿಸಬೇಕು. ಮೂರನೆಯ ಮಗು ಮನೆಯೊಳಗೆ ಹೋಗಬೇಕು ಮತ್ತು ಅದರಲ್ಲಿ ಜೀವಿಸಬೇಕು. ಶಿಕ್ಷಕರು "ಮನೆಯೊಳಗೆ ಇರುವವರೇ" ಎಂದು ಕೂಗುವಾಗ, ಒಳಗಿರುವವರು ಹೊರಗೆ ಓಡಿ ಬರಬೇಕು ಮತ್ತು ಬೇರೆ ಮನೆಯನ್ನು ಹುಡುಕಿಕೊಳ್ಳಬೇಕು. ಶಿಕ್ಷಕ "ಮನೆ" ಎಂದು ಕೂಗುವಾಗ, ಮನೆಯನ್ನು ನಿರ್ಮಿಸಿರುವ ಇಬ್ಬರೂ ಓಡಿ ಹೋಗಬೇಕು ಮತ್ತು ಬೇರೆಯವರಿಗಾಗಿ ಮನೆಯನ್ನು ನಿರ್ಮಿಸಬೇಕು.

## ಹಾಜರಾತಿ




ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

**ನೆಹೆಮಿಯ**

## ಹೋಮ್ ವರ್ಕ್

ಈ ವಾರ ಲೋಕದ ಸುತ್ತಲೂ ನೋಡಿರಿ ಮತ್ತು ನಿಮಗೆ ತೊಂದರೆ ಮಾಡುವ ಕಾರ್ಯವನ್ನು ತಿಳಿದುಕೊಳ್ಳಿರಿ. ಅದರಲ್ಲಿ ಭಾಗಿಯಾಗಿರುವ ಜನರಿಗೆ ಸಹಾಯ ಮಾಡುವಂತೆ, ನ್ಯಾಯ, ಸಮಾಧಾನ ಮತ್ತು ಪ್ರೀತಿ ನೆಲೆಯಾಗಿರುವಂತೆ ಪ್ರಾರ್ಥನೆ ಮಾಡಿರಿ. ನಂತರ ನಿಮ್ಮಿಂದಾಗುವ ಸಹಾಯ ಮಾಡಲು ಮುಂದಾಗಿರಿ ಅಂದರೆ ಇತ್ತೀಚೆಗೆ ದೇವರು ನಿಮ್ಮ ಜೀವಿತದಲ್ಲಿ ಮಾಡಿರುವ ಕಾರ್ಯದ ಬಗ್ಗೆ ಹೇಳುವದು, ನಿಮ್ಮ ಹಣವನ್ನು ಕಾಣಿಕೆಯಾಗಿ ಕೊಡುವದು, ನಿಮ್ಮ ಆಸ್ತಿಯಲ್ಲಿ ಏನಾದರೂ ಕೊಡುವದು ಅಥವಾ ಆಟದ ಮೈದಾನದಲ್ಲಿ ಯಾರನ್ನಾದರೂ ಸಮರ್ಥಿಸಿಕೊಳ್ಳುವದು.

ಓದಿರಿ

ದಿನ 1: ಎಸ್ತೇರಳು 2:17-23

ದಿನ 2: ಎಸ್ತೇರಳು 3:1-9

ದಿನ 3: ಎಸ್ತೇರಳು 4:1-3, 12-17

ದಿನ 4: ಎಸ್ತೇರಳು 5:1-8

ದಿನ 5: ಎಸ್ತೇರಳು 5:9-14

# 5. ಅಪಾಯಗಳನ್ನು ಎದುರಿಸಿರಿ



ಸತ್ಯವೇದ ಕಥೆ: ಎಸ್ತೇರಳು

ಎಸ್ತೇರಳು 2-8

### ಕಂಠಪಾಠ ವಚನ

೧ ಕೊರಿಂಥಿಯರಿಗೆ **15:58** ನನ್ನ ಪ್ರಿಯ ಸಹೋದರರೇ, ಸ್ಥಿರಚಿತ್ತರಾಗಿರಿ; ನಿಶ್ಚಲರಾಗಿರಿ. ಪ್ರಭುವಿನ ಸೇವೆಯಲ್ಲಿ ನೀವು ಪಡುವ ಪ್ರಯಾಸ ಎಂದಿಗೂ ನಿಷ್ಫಲವಾಗದು. ಆದ್ದರಿಂದ ಅವರ ಸೇವೆಯಲ್ಲಿ ನಿರಂತರ ಶ್ರದ್ಧೆಯುಳ್ಳವರಾಗಿರಿ.

### ಕಥೆಯ ಅವಶ್ಯಕತೆ



ಮಾರ್ಥಾ ಈಗ ತಂಡದ ನಾಯಕಿಯಾಗಿದ್ದಾಳೆ, ತರಗತಿಯಲ್ಲಿ ಹೆಚ್ಚು ಪ್ರಸಿದ್ಧಳಾಗಿದ್ದು ಆಕೆಯ ಸುತ್ತಲು ಯಾವಾಗಲೂ ಸ್ನೇಹಿತೆಯರು ಇರುತ್ತಾರೆ. ಆಕೆ ಎಲ್ಲರೊಂದಿಗೆ ಬೆರಳು ಮತ್ತು ಅವರಿಗೆ ಸಹಾಯ ಮಾಡಲು ಬಯಸುತ್ತಾಳೆ. ಒಂದುದಿನ ಆಕೆಯ ಸ್ನೇಹಿತೆಯರು ನೀನು ಕೆಲವು ಮಕ್ಕಳೊಂದಿಗೆ ಸೇರಬಾರದು ಎಂದು ಅವಳಿಗೆ ಹೇಳಿದರು. ನೀನು ಬಹಳ ವಿಶೇಷವಾದವಳು ಆದ್ದರಿಂದ ಬೇಡವಾದರ ಜೊತೆ ಸೇರಬಾರದೆಂದು ಅವರು ಒತ್ತಾಯಪಡಿಸಿದರು. ಈ ಮಾತುಗಳನ್ನು ಕೇಳಿ ಮಾರ್ಥ ಸ್ನೇಹಿತೆಯರಲ್ಲಿ ಒಬ್ಬಳಾದ ಮರಿಯಳಿಗೆ ಬಹಳ ಬೇಸರವಾಯಿತು. ಅಲ್ಲದೆ ಆಕೆ ಉಳಿದವರಿಗೆ ಹೇಳಿದ್ದೇನೆಂದರೆ ಮಾರ್ಥ ಎಲ್ಲರ ಜೊತೆ ಸೇರುತ್ತಾಳೆ, ಯಾಕಂದರೆ ಅವಳು ಎಲ್ಲರಿಗೆ ಸಹಾಯ ಮಾಡಲು ಬಯಸುತ್ತಾಳೆ. ಆದರೆ ಉಳಿದವರು ನೀನು ನಮ್ಮ ಜೊತೆ ಇರಬೇಕು ಅಥವಾ ಅವರ ಜೊತೆ ಇರಬೇಕು, ಇಬ್ಬರ ಜೊತೆಯಲ್ಲಿಯೂ ಇರಲು ಆಗುವದಿಲ್ಲ ಎಂದು ಹೇಳಿದರು.

### ಮುಖ್ಯ ಪಾಠ

ಇಂದು ನಾವು ತನ್ನ ಜನರನ್ನು ರಕ್ಷಿಸುವ ಸಲುವಾಗಿ ಅಪಾಯಗಳನ್ನು ಎದುರಿಸಿದ ಧೈರ್ಯವಂತ ಸ್ತ್ರೀಯ ಬಗ್ಗೆ ಕಲಿತು ಕೊಳ್ಳೋಣ. ಯೆಹೂದ್ಯರು (ಇಸ್ರಾಯೇಲ್ಯರು) ದೇವರನ್ನು ತೊರದು ಬಿಟ್ಟಿದ್ದರು ಅದ್ದರಿಂದ ಸೆರೆಯಾಗಿದ್ದರು. ಆದರೆ ಸೆರೆಯಲ್ಲಿರುವಾಗಲೂ, ದೇವರು ಅವರಿಗೆ ಕರುಣೆಯನ್ನು ತೋರಿಸಿದನು. ಪಾರಸಿಯ ಅರಸನಾದ ಅಹಷ್ವೇರೋಷನು ರಾಣಿ ತನ್ನ ಮಾತಿಗೆ ಅವಿಧೇಯಳಾಗುವ ಮೂಲಕ ಎಲ್ಲರ ಮೂಲಕ ತನ್ನನ್ನು ಅವಮಾನಪಡಿಸಿದ್ದರಿಂದ ಆಕೆಯನ್ನು ನಿರಾಕರಿಸಿದನು. ನಂತರ ಅವನು ಹೊಸ ರಾಣಿಯನ್ನು ಹುಡುಕುತ್ತಿದ್ದನು, ಆಗ ಯೌವನಸ್ಥಳಾಗಿದ್ದ ಎಸ್ತೇರಳೆಂಬ ಯೆಹೂದ್ಯಳು ಆತನ ಮೆಚ್ಚಿಕೆಗೆ ಪಾತ್ರಳಾಗಿ ರಾಣಿಯಾದಳು. ಅದೇ ಸಮಯದಲ್ಲಿ ಹಾಮಾನನೆಂಬವನು ಅಧಿಕಾರಕ್ಕೆ ಬಂದು ಅರಸನಿಗೆ ಬಲಗೈ ಬಂಟನಾದನು. ಹಾಮಾನನು, ಎಸ್ತೇರಳನ್ನು ಬೆಳೆಸಿದ್ದ ಅವಳ ಚಿಕ್ಕಪ್ಪನಾದ ಮೊರ್ದೆಕೈಯನ್ನು ದ್ವೇಷಿಸುತ್ತಿದ್ದನು. ಇದಲ್ಲದೆ ಅವನು ದೇಶದಲ್ಲಿದ್ದ ಯೆಹೂದ್ಯರನ್ನೆಲ್ಲಾ ದ್ವೇಷಿಸುತ್ತಿದ್ದನು. ಅರಸನ ಅನುಮತಿಯೊಂದಿಗೆ, ವರ್ಷದ ಒಂದು ನಿಗದಿತ ದಿನದಲ್ಲಿ ಎಲ್ಲಾ ಯೆಹೂದ್ಯರನ್ನು ಕೊಲ್ಲಬೇಕೆಂದ ಆಜ್ಞೆಯನ್ನು ಹೊರಡಿಸಿದನು. ಯೆಹೂದ್ಯರೆಲ್ಲರೂ ಅಪಾಯದಲ್ಲಿದ್ದರು! ಸಹಾಯಕ್ಕಾಗಿ ಅವರು ದೇವರನ್ನು ಬೇಡಿಕೊಂಡರು. ಮೊರ್ದೆಕೈ ಎಸ್ತೇರಳಿಗೆ ನೀನು ಅರಸನ ಮುಂದೆ ಹೋಗಿ ನಿನ್ನ ಜನರ ಪರವಾಗಿ ಮಾತನಾಡು ಎಂಬದಾಗಿ ಹೇಳಿದನು. ಯೌವನಸ್ಥಳಾಗಿದ್ದ ಎಸ್ತೇರಳು ಬಹಳವಾಗಿ ಹೆದರಿಕೊಂಡಳು, ಯಾಕಂದರೆ ಅರಸನು ಕರೆಯದೆ ಯಾರಾದರೂ ಆತನ ಮುಂದೆ ಹೋದರೆ ಅವರಿಗೆ ಮರಣ ದಂಡನೆ ವಿಧಿಸಲಾಗುತಿತ್ತು.

ಕಳೆದ ವಾರ ನಾವು ನಿಮ್ಮನ್ನು ಯಾವುದು ಬಾಧಿಸುತ್ತದೆ ಮತ್ತು ದೇವರ ಜನರ ಹಿತಕ್ಕಾಗಿ ನೀವು ಹೇಗೆ ಕ್ರಿಯೆ ಮಾಡಬಹುದು ಎಂಬದರ ಕುರಿತು ನಾವು ನೋಡಿಕೊಂಡೆವು. ಆದರೆ ಒಂದುವೇಳೆ ಅದು ಅಪಾಯಕಾರಿಯಾಗಿದ್ದರೆ ಮತ್ತು ತಪ್ಪಾಗುವ ಸಾಧ್ಯತೆಗಳಿದ್ದರ ಅಥವಾ ನಿಮಗೆ ಕೇಡು ಸಂಭವಿಸುವ ಹಾಗಿದ್ದರೆ ಏನು ಮಾಡಬೇಕು? ಎಸ್ತೇರಳು ತನ್ನ ಜನರನ್ನು ಕಾಪಾಡುವ ಸಲುವಾಗಿ ಮರಣದ ಅಪಾಯವನ್ನೂ ಎದುರಿಸಿದಳು. ಆಕೆ ಎಲ್ಲಾ ಯೆಹೂದ್ಯರಿಗೆ ತನ್ನೊಂದಿಗೆ ಮತ್ತು ತನ್ನ ಸೇವಕಿಯರೊಂದಿಗೆ ಉಪವಾಸ ಮಾಡುವಂತೆ ಹೇಳಿದಳು. ಆಕೆ ಅರಸನ ಪ್ರಸನ್ನತೆಗೆ ಬಂದಾಗ, ಆಕೆ ಬಹುಶಃ ಅರಸನ ಸೇವಕರ ಚೂಪಾದ ಖಡ್ಗಗಳನ್ನು ನೋಡಿರಬಹುದು. ಎಷ್ಟು ಹೆದರಿಕೆಯಾಗಿರಬಹುದು! ಆದರೆ ಆಕೆ ತನ್ನ ಜನರಿಗಾಗಿ ಅರಸನ ಮುಂದೆ ಹೋಗಲು ತೀರ್ಮಾನಿಸಿದ್ದಳು. ನೀವು ಹೆದರಿಕೊಳ್ಳುವಾಗ ಸಹಾಯಕ್ಕಾಗಿ ದೇವರನ್ನು ಬೇಡಿಕೊಳ್ಳಬಹುದು. ಅಪಾಯಗಳನ್ನು ಎದುರಿಸುವಾಗ ಒಳ್ಳೆಯ ಫಲಿತಾಂಶ ದೊರೆಯುತ್ತದೆ ಎಂಬ ನಿರೀಕ್ಷೆಯೊಂದಿಗೆ, ಕೆಟ್ಟ ಫಲಿತಾಂಶಗಳನ್ನು ನಿರೀಕ್ಷಿಸದೆ ಒಳ್ಳೆಯ ಫಲಿತಾಂಶಗಳನ್ನು ನಿರೀಕ್ಷಿಸುವ ಆಯ್ಕೆಯನ್ನು ನೀವು ಮಾಡಿಕೊಳ್ಳಬಹುದು. ಅರಸನು ಆಕೆಗೆ ದಯೆ ತೋರಿಸಿದನು ಮತ್ತು ಆಕೆ ಸಿದ್ಧಪಡಿಸಿದ್ದ ಔತಣಕ್ಕೆ ಬಂದನು. ಆಕೆ ಅರಸನಿಗೆ ಹಾಮಾನನ ಒಳಸಂಚಿನ ಬಗ್ಗೆ ತಿಳಿಸಿದಳು ಮತ್ತು ಅರಸನು ಹಾಮಾನನನ್ನು ಕೊಲ್ಲಿಸಿದನು. ಆದರೆ ಅವರಿಗೊಂದು ಸಮಸ್ಯೆ ಇತ್ತು! ದೇಶದಲ್ಲಿದ್ದ ಯೆಹೂದ್ಯರನ್ನೆಲ್ಲಾ ಕೊಲ್ಲಲು ದಿನವನ್ನು ನಿಗದಿಪಡಿಸಲಾಗಿತ್ತು. ನೀವು ಅಪಾಯವನ್ನು ಎದುರಿಸುವಾಗ, ಒಂದುವೇಳೆ ನೀವಂದುಕೊಂಡ ಹಾಗೆ ಆಗದೆ ಇದ್ದರೆ ಆಗ ಏನಾಗುವದು? ಒಂದುವೇಳೆ ಎಸ್ತೇರಳು ಸೋಲು ಒಪ್ಪಿಕೊಂಡಿದ್ದರೆ, ಯೆಹೂದ್ಯರು ಆಗಲೂ ಸಾಯುತ್ತಿದ್ದರು. ಆಕೆ ಧೈರ್ಯದಿಂದ ಮತ್ತೊಮ್ಮೆ ಅರಸನ ಬಳಿಗೆ ಹೋದಳು ಮತ್ತು ಆತನು ಎರಡನೆಯ ಆಜ್ಞೆಯನ್ನು ಹೊರಡಿಸಿದ್ದರಿಂದ ಯೆಹೂದ್ಯರೆಲ್ಲರೂ ಬದುಕಿಕೊಂಡರು.

ಅಪಾಯಗಳು ಭಯಾನಕವಾಗಿರುತ್ತವೆ ಯಾಕಂದರೆ ಏನಾಗುವದೆಂದು ನಮಗೆ ಸ್ಪಷ್ಟವಾಗಿ ಗೊತ್ತಿರುವದಿಲ್ಲ. ನೀವಂದು ಕೊಂಡ ಹಾಗೆಯೇ ಎಲ್ಲವೂ ಆಗುವದಿಲ್ಲ. ಆದರೆ ಯಾವುದೇ ವಿಷಯ ಎಷ್ಟೇ ಭಯಾನಕವಾಗಿದ್ದರೂ, ಈ ವಿಷಯಗಳನ್ನು ತಿಳಿದುಕೊಳ್ಳಿರಿ: ಏನೇ ಆದರೂ ದೇವರು ನಿಮ್ಮೊಂದಿಗೆ ಇರುವನು (ಧರ್ಮೋಪದೇಶಕಾಂಡ 31:6, ಮತ್ತಾಯ 28:18-20). ಯೇಸು ಕ್ರಿಸ್ತನು ಈಗಾಗಲೇ ಜಯಿಸಿದ್ದಾನೆ (ಯೋಹಾನ 16:33). ದೇವರು ಅನಾನುಕೂಲತೆಗಳನ್ನೂ ಅನುಕೂಲತೆಗಳನ್ನಾಗಿ ಬದಲಾಯಿಸುತ್ತಾನೆ (ರೋಮಾ 8:28). ಮತ್ತು ದೇವರು ಖಂಡಿತವಾಗಿಯೂ ನಿಮಗೆ ಬಹುಮಾನ ಕೊಡುವನು (1 ಕೊರಿಂಥ 15:58, ಆದಿಕಾಂಡ 15:1).

ನಾನು ಅಪಾಯಗಳನ್ನು ಎದುರಿಸುವ ಆಯ್ಕೆ ಮಾಡಿಕೊಳ್ಳುತ್ತೇನೆ ಮತ್ತು ಆತನ ಜನರ ಹಿತವನ್ನು ಬಯಸುತ್ತೇನೆ.

### ವಿಶ್ಲೇಷಣೆ



ಪ್ರಸಿದ್ಧಿಗಿಂತ ಇತರರ ಹಿತವನ್ನು ಚಿಂತಿಸುವದೇ ಪ್ರಾಮುಖ್ಯ ಎಂದು ಮಾರ್ಥಳು ತೀರ್ಮಾನಿಸಿದಳು. ನನ್ನ ಪ್ರಸಿದ್ಧಿ ನಷ್ಟವಾದರೂ ಪರವಾಗಿಲ್ಲ ನಾನು ಇತರರಿಗಾಗಿ ಚಿಂತಿಸುವದನ್ನು ಮುಂದುವರೆಸುತ್ತೇನೆ ಎಂದು ಆಕೆ ತನ್ನ ಸ್ನೇಹಿತೆಯರಿಗೆ ಹೇಳಿದಳು.

### ಚಟುವಟಿಕೆ

ಬಣ್ಣದ ಆನೆ

ಕೋಣೆಯ ಒಂದು ಕಡೆಯಲ್ಲಿ ಒಬ್ಬ ಆಟಗಾರನು ಬೇಟೆಗಾರನ ಪಾತ್ರ ನಿರ್ವಹಿಸಬೇಕು. ಕೋಣೆಯ ಮತ್ತೊಂದು ಕಡೆಯಲ್ಲಿ, ವಿವಿಧ ಬಣ್ಣದ ವಸ್ತುಗಳನ್ನು ಇಡಿರಿ. ಬೇಟೆಗಾರನು ಒಂದು ಬಣ್ಣದ ಹೆಸರನ್ನು ಹೇಳುವನು ಆಗ ಇತರೆ ವಿದ್ಯಾರ್ಥಿಗಳೆಲ್ಲರೂ ಆ ಬಣ್ಣವಿರುವ ವಸ್ತುವನ್ನು ಮುಟ್ಟಲು ಓಡಬೇಕು. ಆ ಬಣ್ಣದ




ವಸ್ತುವನ್ನು ಐದು ಸೆಕೆಂಡ್ ಗಳಲ್ಲಿ ಯಾವ ಆಟಗಾರನಾದರೂ ಮುಟ್ಟದೆ ಇದ್ದರೆ ಅವನು "ಬಂಧಿಸಲ್ಪಡುವನು" ಮತ್ತು ಬೇಟೆಗಾರನ ಪಕ್ಕದಲ್ಲಿ ಕುಳಿತುಕೊಳ್ಳುವನು. ಬೇಟೆಗಾರನ ಗುರಿ ವಿದ್ಯಾರ್ಥಿಗಳನ್ನು ಬಂಧಿಸುವದಾಗಿದೆ. ಮೊದಲನೆಯ ಸುತ್ತಿನಲ್ಲಿ ಶಿಕ್ಷಕನೇ ಬೇಟೆಗಾರನಾಗಬೇಕು, ನಂತರ ಉಳಿದ ವಿದ್ಯಾರ್ಥಿಗಳಿಗೆ ಸರದಿಯ ಪ್ರಕಾರ ಬೇಟೆಗಾರನಾಗುವ ಅವಕಾಶವನ್ನು ಕೊಡಬೇಕು.

### ಟೈಮ್ ಲೈನ್

**ಎಸ್ತೇರಳು ಯಾವ ವರ್ಷದಲ್ಲಿ ರಾಣಿಯಾದಳು? ಉತ್ತರ: ಬಹುಶಃ ಕ್ರಿ.ಶ. 478 ರಲ್ಲಿ.**

### ಒಗಟಿನ ಉತ್ತರಗಳು



| | | | | | | | | | | |
|---|---|---|---|---|---|---|---|---|---|---|
| ಎ | ಯಿ | ರ್ದೆ | ಸಂ | ಚು | ರಿ | ಬ | ಕು | ಎ | ರ್ದೆ | ರಾ |
| ರ್ದೆ | ಹಾ | ರಿ | ರ್ಯ | ಮಾ | ಹು | ಗ | ಕೆ | ಮಾ | ನ | ಣಿ |
| ಪಾ | ರಿ | ಮಾ | ರ | ಮಾ | ನ | ಣಿ | ಧೈ | ರ್ಯ | ಗ | ಚು |
| ಚು | ತೂ | ಮಾ | ನ | ಗ | ಕು | ರ | ಯಿ | ರ್ದೆ | ರಿ | ಔ |
| ಕು | ಪಾ | ಗ | ಕು | ಖ | ರ್ದೆ | ಹಾ | ರ | ಳಿ | ಮಾ | ತ |
| ಎ | ಳು | ಗ | ನೇ | ಯಿ | ಚು | ಭ | ಯ | ತೂ | ಪಾ | ಚು |
| ಮೊ | ರ್ದೆ | ಕೈ | ಳಿ | ಕು | ತೂ | ಕು | ಪಾ | ಕು | ಣಿ | ಕು |
| ಹಾ | ತೂ | ರ್ದೆ | ಳು | ಗ | ಯ | ಪಾ | ಅ | ತೂ | ಎ | ಹಾ |
| ದೇ | ವ | ರ | ನ್ನು | ತಿ | ಳಿ | ಯಿ | ರಿ | ರ್ಯ | ಣಿ | ಣ |
| ರ್ದೆ | ಸ್ತೇ | ಕು | ರ್ಯ | ಎ | ಚು | ತೂ | ಎ | ಕು | ತ | ಯಿ |
| ಎ | ತೂ | ಗು | ಹಾ | ಕು | ವ | ದು | ಣಿ | ಔ | ರ್ದೆ | ಪಾ |



### ಪ್ರಶ್ನೆಗಳು ಮತ್ತು ಉತ್ತರಗಳು


**(ಹಿರಿಯ ವಿದ್ಯಾರ್ಥಿಗಳಿಗೆ)**

1. ದೇವರ ರಾಜ್ಯಕ್ಕಾಗಿ ನಾವು ಎಷ್ಟು ದೊಡ್ಡ ಅಪಾಯವನ್ನು ಎದುರಿಸುವವರಾಗಬೇಕು? ಶಾಲೆಯಲ್ಲಿ ಸ್ಕಾಲರ್ ಶಿಫ್ ತೆಗೆದುಕೊಳ್ಳದೆ ಹಿಂಜರಿಯಬಹುದೇ? ನಾವು ನಮ್ಮ ಕೆಲಸವನ್ನು ಅಥವಾ ನಮ್ಮ ಪ್ರಾಣವನ್ನು ಕಳೆದುಕೊಳ್ಳುವ ಅಪಾಯವನ್ನು ಎದುರಿಸಬಹುದೇ? ಒಂದುವೇಳೆ ಒಬ್ಬ ಸಹೋದರನು ಪಟ್ಟಣದಲ್ಲಿ ಹೊಸದಾಗಿ ಸಭೆಯನ್ನು ಸ್ಥಾಪಿಸಿದಾಗ ಕೆಲವ ತಿಂಗಳುಗಳಲ್ಲಿ ಸಭೆಗೆ 400 ಜನ ಬರಲಾರಂಭಿಸುವರ. ಆಗ ಸಭಾಪಾಲಕನು ಮತ್ತೊಂದು ಪಟ್ಟಣದಲ್ಲಿ ಹೊಸದಾಗಿ ಇನ್ನೊಂದು ಸಭೆಯನ್ನು ಕಟ್ಟಲು ಬ್ಯಾಂಕ್ ನಿಂದ ಹಣ ಪಡೆಯಲು ಮುಂದಾಗುವನು. ಒಂದುವೇಳೆ ಅದು ಸಫಲವಾದರೆ ಅವನಿಗೆ ಎರಡು ಒಳ್ಳೆಯ ಸಭೆಗಳಿರುತ್ತವೆ. ಒಂದುವೇಳೆ ಅದು ಸಫಲವಾಗದೆ ಹೋದರೆ, ಈಗಾಗಲೇ ಆತನಿಗಿರುವ ಒಂದು ಕಟ್ಟಡವನ್ನು ಸಹ ಕಳೆದುಕೊಳ್ಳುವ ಅಪಾಯ ಆತನಿಗೆ ಎದುರಾಗುತ್ತದೆ. ಹೀಗಿರುವಾಗ ಈ ರೀತಿ ದೇವರ ರಾಜ್ಯಕ್ಕಾಗಿ ಅಪಾಯಗಳನ್ನು ಎದುರಿಸಲು ಮುಂದಾಗುವದು ಸರಿಯೋ ಅಥವಾ ತಪ್ಪೋ?
   ಸರಿಯಾದ ಪ್ರತಿಕ್ರಿಯೆ ಕೊಡಲು ಮಕ್ಕಳಿಗೆ ಅನುಮತಿಸಬೇಡಿರಿ. ಪ್ರಾಮುಖ್ಯವಾದ ಸಂಗತಿ ಏನೆಂದರೆ ಜೀವನದಲ್ಲಿ ಅನೇಕ ಅಪಾಯಗಳು ಎದುರಾಗುತ್ತವೆ ಎಂದು ಅವರು ಚರ್ಚಿಸಬೇಕು ಮತ್ತು ಕೆಲವೊಮ್ಮೆ ಅವು ಅತ್ಯಂತ ಕಷ್ಟಕರವಾಗಿರುತ್ತವೆ ಎಂದು ಅವರು ಮಾತನಾಡಿಕೊಳ್ಳಬೇಕು.
2. ನಾವೆಲ್ಲರೂ ನಮ್ಮ ಜೀವಿತದಲ್ಲಿ ಅಪಾಯಗಳನ್ನು ಎದುರಿಸಬೇಕೇ?
   ಹೌದು! ದೇವರು ಲೋಕವನ್ನು ಉಂಟುಮಾಡಿದನು ಮತ್ತು ಅಪಾಯಗಳಿಂದ ಕೂಡಿರುವ ಕ್ರೈಸ್ತ ಜೀವಿತವು ಅದರ ಅತ್ಯಂತ ಪ್ರಾಮುಖ್ಯ ಭಾಗ ಎಂಬದನ್ನು ಮಕ್ಕಳು ಅರ್ಥಮಾಡಿಕೊಳ್ಳಬೇಕು. ಇದಕ್ಕೆ ಕಾರಣವೇನೆಂದರೆ ದೇವರಿಗೆ ನಂಬಿಕೆ ಬಹಳ ಪ್ರಾಮುಖ್ಯವಾಗಿದೆ. ಕಟ್ಟಡಕ್ಕೆ ಕೊಡುವ ಬೆಲೆಗಿಂತ ದೇವರು ನಮಗೆ ಏನನ್ನು ಮಾಡಲು ಹೇಳುತ್ತಾನೋ ಅದರಲ್ಲಿ ನಾವು ನಂಬಿಕೆಯಿಡುವದು ದೇವರಿಗೆ ಬಹಳ ಪ್ರಾಮುಖ್ಯವಾಗಿದೆ. ನಾವೆಲ್ಲರೂ ದೇವರಿಗಾಗಿ ಅಪಾಯಗಳನ್ನು ಎದುರಿಸಬೇಕು.
3. ನೀವು ಎಂಥ ಅಪಾಯಗಳನ್ನು ಎದುರಿಸಿದ್ದೀರಿ?
   ಅವರು ತಮ್ಮ ವೈಯಕ್ತಿಕ ಜೀವಿತಗಳ ಬಗ್ಗೆ ಆಲೋಚಿಸಲು ಮತ್ತು ಸಾಕ್ಷಿ ಹೇಳಲು ಅವರಿಗೆ ಸಮಯ ಕೊಡಿರಿ. ಅದು ಸಣ್ಣದ್ದೋ ಅಥವಾ ದೊಡ್ಡದ್ದೋ ಎಂಬದು ಮುಖ್ಯವಲ್ಲ. ನಾವೆಲ್ಲರೂ ಸಣ್ಣದ್ದರಿಂದಲೇ ಪ್ರಾರಂಭಿಸಬೇಕು.

## ಆಟ

ಸ್ಪಿಟ್ ಬಾಲ್ ಸ್ಪರ್ಧೆ

ದೊಡ್ಡ ಹಾಳೆಯ ಮೇಲೆ, ಮೂರು ವೃತ್ತಗಳಿರುವ ಗುರಿಯನ್ನು ಬರೆಯಿರಿ. ಮೊದಲನೆಯ ವೃತ್ತಕ್ಕೆ ಹೊಡೆದರೆ 100 ಅಂಕಗಳು, ಎರಡನೆಯ ಹಾಗೂ ಮೂರನೆಯ ವೃತ್ತಕ್ಕೆ ಹೊಡೆದರೆ 50 ಮತ್ತು 10 ಅಂಕಗಳು. ಮಕ್ಕಳು ಹಾಳೆಯನ್ನು ಮಡಚಿ ಸಣ್ಣ ಚೆಂಡುಗಳನ್ನು ಮಾಡಬೇಕು ಮತ್ತು ಚೆಂಡುಗಳನ್ನು ತಮ್ಮ ಬಾಯೊಳಗೆ ಹಾಕಿ ವೃತ್ತಗಳನ್ನು ಹೊಡೆಯಲು ಪ್ರಯತ್ನಿಸಬೇಕು. ಹಾಗೆಯೇ ನೀರು ಕುಡಿಯುವ ಸ್ಟ್ರಾ ಮೂಲಕವೂ ಹೊಡೆಯಲು ಅವರಿಗೆ ಅವಕಾಶ ಕೊಡಿರಿ.



## ಹಾಜರಾತಿ 5

ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಎಸ್ತೇರಳು

## ಹೋಮ್ ವರ್ಕ್




ಈ ವಾರದಲ್ಲಿ ದೇವರಿಗಾಗಿ ಏನಾದರೂ ಅಂದರೆ ಯಾರಿಗಾದರೂ ಯೇಸು ಕ್ರಿಸ್ತನ ಬಗ್ಗೆ ಹೇಳುವದು, ಗುಂಪಿನಲ್ಲಿ ಜೋರಾಗಿ ಪ್ರಾರ್ಥನೆ ಮಾಡುವದು ಅಥವಾ ಯಾರಾದರೂ ಹೊಸಬರೊಂದಿಗೆ ಮಾತನಾಡುವಂಥ ಕಾರ್ಯಗಳನ್ನು ಮಾಡಲು ಅವಕಾಶ ಕೊಡುವಂತೆ ದೇವರನ್ನು ಬೇಡಿಕೊಳ್ಳಿರಿ. ಅವಕಾಶ ದೊರೆಯುವಾಗ, ಒಂದುವೇಳೆ ಇವುಗಳನ್ನು ಮಾಡಲು ನಿಮಗೆ ಹೆದರಿಕೆಯಾದರೆ, ಅದರಿಂದ ಬೇರೆಯವರಿಗೆ ಹೇಗೆ ಆಶೀರ್ವಾದ ಸಿಗುತ್ತದೆ ಎಂಬದರ ಬಗ್ಗೆ ಯೋಚಿಸಿರಿ ಮತ್ತು ಅದನ್ನು ಹೇಗಾದರು ಮಾಡಲು ಪ್ರಯತ್ನಿಸಿರಿ. ಮೊದಲನೆಯ ಸಲ ನೀವು ಯಶಸ್ವಿಯಾಗದಿದ್ದರೆ ಪರವಾಗಿಲ್ಲ. ಸಹಾಯಕ್ಕಾಗಿ ದೇವರನ್ನು ಬೇಡಿಕೊಳ್ಳಿರಿ ಮತ್ತು ನೀವು ಯಶಸ್ವಿಯಾಗುವ ತನಕ ಮತ್ತೆ ಮತ್ತೆ ಮಾಡಿರಿ.

ಓದಿರಿ

ದಿನ 1: ಯೋಬ 1:1-5

ದಿನ 2: ಯೋಬ 1:6-12

ದಿನ 3: ಯೋಬ 1:13-22

ದಿನ 4: ಯೋಬ 2:1-10

ದಿನ 5: ಯೋಬ 2:11-3:4

# 6. ಅಡಗಿರುವ ಆಶೀರ್ವಾದ



**ಸತ್ಯವೇದ ಕಥೆ: ಯೋಬ**

**ಯೋಬ** 1:1-3:4, 40:1-14,42

## ಕಂಠಪಾಠ ವಚನ

**ಪ್ರವಾದಿ ಯೆಶಾಯನ ಗ್ರಂಥ 55:9 "ಎಷ್ಟೋ ಉನ್ನತ ಆಕಾಶವು ಭೂಮಿಯಿಂದ ಅಷ್ಟೂ ಉನ್ನತ ನನ್ನ ಮಾರ್ಗ ನಿಮ್ಮ ಮಾರ್ಗಗಳಿಗಿಂತ, ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಿಗಿಂತ.**

## ಕಥೆಯ ಅವಶ್ಯಕತೆ



**ಯೋಹಾನನಿಗೆ ಸಭೆಯಲ್ಲಿ ದೇವರ ಸೇವೆ ಮಾಡುವದೆಂದರೆ ಬಹಳ ಪ್ರೀತಿ, ಅವನು ಶಾಲೆಯಲ್ಲಿಯೂ ದೇವರ ಬಗ್ಗೆ ಮಾತನಾಡುತ್ತಾ ಇದ್ದನು ಮತ್ತು ದೇವರ ಹಾಡುಗಳನ್ನು ಹಾಡುತ್ತಾ ಇದ್ದನು. ಆದರೆ ಅವನ ತರಗತಿಯಲ್ಲಿದ್ದ ಇತರರಿಗೆ ಅವನ ಈ ನಡವಳಿಗೆ ಇಷ್ಟವಾಗುತ್ತಾ ಇರಲಿಲ್ಲ ಆದ್ದರಿಂದ ಅವರು ಅವನನ್ನು ಯಾವಾಗಲೂ ರೇಗಿಸುತ್ತಾ ಇದ್ದರು. ಅವರು ಅವನ ಪೆನ್ಸಿಲ್, ಪುಸ್ತಕಗಳನ್ನು ತೆಗೆದುಕೊಳ್ಳುತ್ತಿದ್ದರು, ಒಂದುದಿನ ಅವನ ಬ್ಯಾಗ್ ಅನ್ನೇ ಯಾರೋ ಕದ್ದುಕೊಂಡಿದ್ದರು. ಅವರು ಯಾವುದೇ ತಪ್ಪು ಮಾಡದೇ ಇದ್ದರೂ ಅವನ ಮೇಲೆ ಆರೋಪ ಮಾಡುತ್ತಿದ್ದರು. ಶಾಲೆಯ ಪ್ರಾಂಶುಪಾಲರು ಅವನನ್ನು ಕರೆದು ಶಿಕ್ಷಿಸುತ್ತಿದ್ದರು.**

## ಮುಖ್ಯ ಪಾಠ

**ಇಂದು ನಾವು ಅಡಗಿರುವ ಕೆಲವು ಆಶೀರ್ವಾದಗಳ ಬಗ್ಗೆ ತಿಳಿದುಕೊಳ್ಳೋಣ ಯಾಕಂದರೆ ಬಹುತೇಕ ಜನರು ಅವುಗಳನ್ನು ಪಡೆಯಲು ಪ್ರಯತ್ನಿಸುವದಿಲ್ಲ. ಇಂದಿನ ನಂಬಿಕೆಯ ವೀರನಾಗಿರುವ ಯೋಬನು ನೀತಿವಂತನಾಗಿದ್ದರಿಂದ ದೇವರು ಸೈತಾನನಿಗೆ ಅವನ ಬಗ್ಗೆ ಹೇಳಿದನು. ದೇವರು ನಿಮ್ಮ ಬಗ್ಗೆ, "ಎಲ್ಲರೂ ನೋಡಿರಿ ನನ್ನ ಮಗ/ಮಗಳು ಎಷ್ಟು ನೀತಿವಂತರಾಗಿದ್ದಾರೆ" ಎಂದು ಹೇಳುವಾಗ ನಿಮಗೆ ಸಂತೋಷವಾಗುತ್ತದೆ ಅಲ್ಲವೇ? ನೀನು ಕೊಟ್ಟಿರುವ ಆಶೀರ್ವಾದಗಳಿಂದಲೇ ಅವನು ನೀತಿವಂತನಾಗಿದ್ದಾನೆ ಎಂದು ಸೈತಾನನು ದೇವರಿಗೆ ಹೇಳಿದನು. ದೇವರು ಸೈತಾನನಿಗೆ ನೀನು ಅವನ ಎಲ್ಲಾ ಐಶ್ವರ್ಯ ಮತ್ತು ಅವನ ಪುತ್ರರನ್ನು ಹಾಗೂ ಪುತ್ರಿಯರನ್ನು ತೆಗೆದುಕೊಳ್ಳುವ ಮೂಲಕ ಅವನನ್ನು ಪರೀಕ್ಷಿಸು ಎಂಬದಾಗಿ ಅವನಿಗೆ ಅನುಮತಿಯನ್ನು ಕೊಟ್ಟನು. ದೇವರಿಗೆ ಲೋಕದ ಮೇಲೆ ಎಲ್ಲಾ ರೀತಿಯ ಅಧಿಕಾರಗಳು ಇರುವದರಿಂದ ಸೈತಾನನು ಸಹ ದೇವರ ಅನುಮತಿಯಿಂದಲೇ ಕಾರ್ಯವನ್ನು ಮಾಡಬೇಕು. ಯೋಬನು ನೀತಿವಂತನಾಗಿಯೇ ಪ್ರತಿಕ್ರಿಯಿಸಿದನು, ಆದರೆ ಸೈತಾನನು ಅನುಮತಿಯಿದ್ದರಿಂದ ಅವನಿಗೆ ವೇದನೆಯುಳ್ಳ ಅನಾರೋಗ್ಯವನ್ನು ಕೊಟ್ಟನು. ಈ ಕಥೆಯಲ್ಲಿ, ನಮಗೆ ದೇವರನ್ನು ಪರಲೋಕದಲ್ಲಿರುವ ಹಿಂದಿನ ಪರದೆಯಿಂದ ತೋರಿಸಲಾಗಿದೆ.**

**ಯೋಬನ ಸ್ನೇಹಿತರು ಅವನ ಬಳಿಗೆ ಬಂದು ನಿನ್ನ ದುಷ್ಟತನದಿಂದಲೇ ನಿನಗೆ ಇಂತಹ ಪರಿಸ್ಥಿತಿ ಬಂದಿದೆ ಎಂದು ಅವನಿಗೆ ಹೇಳಿದರು. ನಾನು ನೀತಿವಂತನಾಗಿದ್ದೇನೆ ಮತ್ತು ನನಗೆದುರಾಗುವ ವೇದನೆಯು ಅನ್ಯಾಯವಾಗಿದೆ ಎಂದು ಯೋಬನು ಹೇಳಿದನು. ಇದೇ ಪ್ರಕಾರ, ಒಬ್ಬ ವ್ಯಕ್ತಿ ದೇವರನ್ನು ಹಿಂಬಾಲಿಸುವಾಗ, ಅವನಿಗೆ ಎಲ್ಲಾ ಸಮಯಗಳಲ್ಲಿಯೂ ಸಂತೋಷದ ಜೀವನ ಸಿಗಬೇಕು ಎಂಬದು ಸಾಮಾನ್ಯವಾಗಿ ಜನರ ಭಾವನೆಯಾಗಿದೆ. ಕಥೆಯ ಕೊನೆಯಲ್ಲಿ, ಯೋಬನಿಗೆ ದೊರೆತ**

ಆಶೀರ್ವಾದವನ್ನು ನಾವು ನೋಡಬಹುದು. ದೇವರು ತಾನೇ ಯೋಬನ ಜೊತೆ ನೇರವಾಗಿ ಮಾತನಾಡಿದನು! ಯೋಬನು ದೇವರನ್ನು ಅಕ್ಷರಾರ್ಥವಾಗಿ ನೋಡಿರಬಹುದು ಅಥವಾ ಸುಮ್ಮನೆ ಅರ್ಥಮಾಡಿಕೊಂಡಿರಬಹುದು, ಅವನು ಬಹಳವಾಗಿ ಅಶ್ಚರ್ಯಪಟ್ಟನು. ದೇವರು ಇಡೀ ಭೂಲೋಕವನ್ನು ನಡೆಸುತ್ತಾನೆ: ನಕ್ಷತ್ರಗಳು ಮತ್ತು ಎಲ್ಲಾ ಜೀವಿಗಳು, ದೊಡ್ಡ ಸಿಡಿಲುಗಳು ನಮ್ಮ ಸುತ್ತಮುತ್ತಲಿನಲ್ಲಿರುವ ಎಲ್ಲವೂ ಆತನ ಮಾತು ಕೇಳುತ್ತವೆ ಎಂಬದನ್ನು ತಿಳಿದುಕೊಂಡನು. ಅವನು ತನ್ನನ್ನು ತಗ್ಗಿಸಿ ಕೊಂಡನು ಮತ್ತು ದೇವರ ಜ್ಞಾನ ನಮ್ಮ ಜ್ಞಾನಕ್ಕಿಂತ ದೊಡ್ಡದು ಎಂಬದಾಗಿ ಒಪ್ಪಿಕೊಂಡನು. ಅದಾದ ನಂತರ, ದೇವರು ಯೋಬನಿಗೆ ಅಧಿಕ ಆಶೀರ್ವಾದವನ್ನು ಕೊಟ್ಟನು ಮತ್ತು ಅವನ ಪುತ್ರ ಹಾಗೂ ಪುತ್ರಿಯರು ಬದುಕಿ ಬಂದರು, ಆದರೆ ಈ ಸಲ ಯೋಬನ ಹೃದಯ ಬದಲಾಯಿತು ಮತ್ತು ದೇವರ ಬಗ್ಗೆ ಹೆಚ್ಚಿನ ತಿಳುವಳಿಕೆ ಅವನಿಗೆ ಬಂದಿತು.

ಈ ಲೋಕದಲ್ಲಿ ನಮಗೆ ವೇದನೆಯಿದೆ. ಕೆಲವೊಮ್ಮೆ ಯೋಬನ ಹಾಗೆ ನಮ್ಮನ್ನು ಪರೀಕ್ಷಿಸಲು ಸೈತಾನನು ದೇವರಿಂದ ಅನುಮತಿಯನ್ನು ಪಡೆದುಕೊಳ್ಳುತ್ತಾನೆ. ಕೆಲವೊಮ್ಮೆ ಲೋಕವು ಪಾಪದಿಂದ ಭ್ರಷ್ಟವಾಗಿರುವದರಿಂದ ಕೆಟ್ಟ ಕಾರ್ಯಗಳು ನಡೆಯುತ್ತವೆ. ಕೆಲವೊಮ್ಮೆ ದೇವರು ನಮಗೆ ಕೆಲವು ಕಾಲ ವೇದನೆಯಾಗುವಂಥ ಕಾರ್ಯಗಳನ್ನು ಮಾಡುವಂತೆ ಹೇಳುತ್ತಾನೆ. ದೇವರು ತನ್ನ ಒಬ್ಬನೇ ಮಗನಾದ ಯೇಸು ಕ್ರಿಸ್ತನಿಗೆ ಶಿಲುಬೆಯ ಮರಣವನ್ನು ಅನುಭವಿಸುವಂತೆ ಹೇಳಿದನು. ಮತ್ತೊಮ್ಮೆ, ದೇವರು ನಮಗೆ ಪರದೆಯ ಹಿಂದೆ ಕಾಣಿಸಿಕೊಂಡನು. ಯೇಸು ಕ್ರಿಸ್ತನು ಶಿಲುಬೆಗೆ ಹಾಕಲ್ಪಡುವ ಹಿಂದಿನ ರಾತ್ರಿ, ಆತನು ತನ್ನ ತಂದೆಗೆ ಬೇರೆ ಯಾವುದಾದರು ಮಾರ್ಗ ಇದೆಯೇ ಎಂದು ಕೇಳಿದನು; ಆದರೂ ಆತನು ತನ್ನ ತಂದೆಯ ಚಿತ್ತಕ್ಕೆ ಒಪ್ಪಿಸಿದನು (ಮತ್ತಾಯ 36-39). ನಾವು ಏನನ್ನು ಅನುಭವಿಸುತಿದ್ದೇವೆ ಎಂಬದು ಯೇಸು ಕ್ರಿಸ್ತನು ಬಲ್ಲವನಾಗಿದ್ದಾನೆ (2 ಕೊರಿಂಥ 1:5). ನೋವು ಹೇಗೆ ಬರುತ್ತದೆ ಎಂಬದು ಪ್ರಾಮುಖ್ಯವಲ್ಲ, ನಾವು ಅದರ ಮಧ್ಯದಲ್ಲಿ ದೇವರನ್ನು ಹುಡುಕಬಹುದು ಮತ್ತು ನಮಗೆ ಅರ್ಥವಾಗದಿದ್ದರೂ ದೇವರ ಜ್ಞಾನವು ನಮಗಿಂತ ದೊಡ್ಡದು ಎಂಬದನ್ನು ನಾವು ಒಪ್ಪಿಕೊಳ್ಳಬೇಕು (ಯೆಶಾಯ 55:9). ಲೋಕವನ್ನು ಕಾಪಾಡುವ ಸಲುವಾಗಿ ದೇವರು ಯೇಸು ಕ್ರಿಸ್ತನ ವೇದನೆಯನ್ನು ಉಪಯೋಗಿಸಿಕೊಂಡ ಹಾಗೆಯೇ, ದೇವರು ಅನೇಕರನ್ನು ಆಶೀರ್ವದಿಸಲು ಮತ್ತು ನಿಮ್ಮ ಸುತ್ತಮುತ್ತಲಿನಲ್ಲಿರುವ ಜನರನ್ನು ಹೇಗಾದರೂ ಬಿಡಿಸಲು ನಿಮ್ಮ ವೇದನೆಯನ್ನು ಉಪಯೋಗಿಸಿಕೊಳ್ಳುತ್ತಾನೆ. ಆದರೆ ಈಗಲೇ ನೀವು ದೊಡ್ಡ ಆಶೀರ್ವಾದವನ್ನು ನಿಮ್ಮದಾಗಿಸಿಕೊಳ್ಳಬಹುದು. ದೇವರು ಮುರಿದ ಹೃದಯವುಳ್ಳವರಿಗೆ ಹತ್ತಿರವಾಗಿರುತ್ತಾನೆ (ಕೀರ್ತನೆ 34:18), ಮತ್ತು ನೀವು ನಿಮ್ಮ ವೇದನೆಯಲ್ಲಿಯೂ ನಿಮ್ಮನ್ನು ಆತನಿಗೆ ಒಪ್ಪಿಸಿಕೊಡುವಾಗ, ಆತನು ನಿಮಗೆ ಬಹಳ ಹತ್ತಿರವಾಗಿಯೇ ಇರುತ್ತಾನೆ. ವೇದನೆಯು ತಾತ್ಕಾಲಿಕವಾಗಿರುತ್ತದೆಯಾದರೂ, ಇಡೀ ಲೋಕದಲ್ಲಿರುವ ದೊಡ್ಡ ಆಶೀರ್ವಾದ – ದೇವರೊಂದಿಗಿನ ಹತ್ತಿರದ ಸಂಬಂಧ – ಸದಾಕಾಲವೂ ನೆಲೆಯಾಗಿರುತ್ತದೆ!

ದೇವರು ಜ್ಞಾನವು ನನ್ನ ತಿಳುವಳಿಕೆಗಿಂತ ದೊಡ್ಡದು ಎಂದು ನಾನು ಒಪ್ಪಿಕೊಳ್ಳುತ್ತೇನೆ ಮತ್ತು ವೇದನೆಯ ಸಮಯದಲ್ಲಿಯೂ ದೇವರನ್ನು ಹುಡುಕುವ ಆಯ್ಕೆಯನ್ನು ಮಾಡಿಕೊಳ್ಳುತ್ತೇನೆ.



### ವಿಶ್ಲೇಷಣೆ

ಇವೆಲ್ಲವುಗಳ ನಡುವೆಯೂ ಅವನು ದೇವರನ್ನು ಸ್ತುತಿಸುತ್ತಾ ಇದ್ದನು ಮತ್ತು ತನ್ನ ಜೊತೆಗಾರರಿಗಾಗಿ ಪ್ರಾರ್ಥನೆ ಮಾಡುತ್ತಾ ಇದ್ದನು.

### ಚಟುವಟಿಕೆ

ಬೆಲೆಯುಳ್ಳದ್ದು

ಪ್ರತಿಯೊಂದು ಮಗುವು ತಮ್ಮ ಜೀವಿತದಲ್ಲಿ ಬೆಲೆಯುಳ್ಳವರಾಗಿರುವ ತಮ್ಮ ತಂದೆತಾಯಿಗಳು, ಸ್ನೇಹಿತರು, ದೇವರು, ಶಾಲೆ ಇತ್ಯಾದಿ ಚಿತ್ರಗಳನ್ನು ಬಿಡಿಸಬೇಕು ಅಥವಾ ಬರೆಯಬೇಕು. ಬರೆದ ನಂತರ ಮಕ್ಕಳು ಒಂದಿಬ್ಬರೊಂದಿಗೆ ತಮ್ಮ ಚಿತ್ರದ ಬಗ್ಗೆ




ಚರ್ಚಿಸಬೇಕು ಮತ್ತು ಅದು ತಮಗೆ ಯಾಕೆ ಬೆಲೆಯುಳ್ಳದ್ದಾಗಿದೆ ಎಂಬದರ ಬಗ್ಗೆ ಮಾತನಾಡಬೇಕು.

## ಟೈಮ್ ಲೈನ್

ಯೋಬನ ಕಥೆ ಯಾವ ವರ್ಷದಲ್ಲಿ ನಡೆಯಿತು? ಉತ್ತರ: ನಮಗೆ ನಿಖರವಾಗಿ ಗೊತ್ತಿಲ್ಲ ಯಾಕಂದರೆ ಸತ್ಯವೇದದಲ್ಲಿ ವರ್ಷದ ಬಗ್ಗೆ ತಿಳಿಸಲಾಗಿಲ್ಲ. ಇದು ಬಹುಶಃ ಕ್ರಿ.ಶ. 2200 ಮತ್ತು ಕ್ರಿ.ಶ. 1520 ರ ನಡುವೆ ಸಂಭವಿಸಿರಬಹುದು.

## ಒಗಟಿನ ಉತ್ತರಗಳು







## ಪ್ರಶ್ನೆಗಳು ಮತ್ತು ಉತ್ತರಗಳು

**(ಹಿರಿಯ ವಿದ್ಯಾರ್ಥಿಗಳಿಗೆ)**

1. **ನನ್ನನ್ನು ಪರೀಕ್ಷಿಸಲು ದೇವರು ಕೆಟ್ಟದು ಸಂಭವಿಸಲು ಅನುಮತಿಸುತ್ತಾನೆಯೇ?**
   ಹೌದು! ನಾವು ಹಿಂದಿನ  ಪಾಠಗಳಲ್ಲಿ ಹೇಗೆ ಮಾತನಾಡಿದೆವು, ದೇವರು ನಮ್ಮ ಶಾರೀರಿಕ ಜೀವಿತಕ್ಕಿಂತ ಆತ್ಮೀಕ ಜೀವಿತದ ಬಗ್ಗೆ ಹೆಚ್ಚು ಚಿಂತಿಸುವವನಾಗಿದ್ದಾನೆ. ಒಂದುವೇಳೆ ನಾವು ಪರೀಕ್ಷೆಯಲ್ಲಿ ಸೋಲದೆ ಇದ್ದರೆ, ದೇವರಿಂದಲೇ

ಒಳ್ಳೆಯ ಅಂಕಗಳನ್ನು ಪಡೆದರೆ ಮತ್ತು ಯಾವುದೇ ಆರೋಪಗಳನ್ನು ಮಾಡದೆ ಇದ್ದರೆ ನಾವು ಗೆಲ್ಲುತ್ತವೆ! ನಮ್ಮ ಅಸ್ತಿ, ನಮ್ಮ ಕುಟುಂಬ ಮತ್ತ ಜೀವನಕ್ಕಿಂತ ಇದ ಹೆಚ್ಚು ಪ್ರಾಮುಖ್ಯವಾಗಿದೆ ಎಂದು ದೇವರು ನಮಗೆ ತೋರಿಸಿದ್ದಾನೆ.


2. ಒಂದುವೇಳೆ ನಮ್ಮ ಶಾಲೆಯಲ್ಲಿ ಯಾರಾದರು ಪರೀಕ್ಷೆಯಲ್ಲಿ ಕಾಪಿ ಮಾಡುತ್ತಾ ಇದ್ದರೆ ಮತ್ತು ಯಾವಾಗಲೂ ಒಳ್ಳೆಯ ಅಂಕ ಪಡೆಯುತ್ತಾ ಇದ್ದರೆ, ನಾನು ಪಾಸ್ ಆಗುವದು ಹೇಗೆ?
   ಯೋಬನ ಹಾಗೆ, ಯಾವುದೇ ಆರೋಪ ಮಾಡದೆ, ಪರಿಸ್ಥಿತಿ ಎಷ್ಟೇ ಕಷ್ಟಕರವಾಗಿದ್ದರೂ, ಕೆಟ್ಟ ಆರೋಪಗಳನ್ನು ಸಹಿಸಿಕೊಳ್ಳಬೇಕು! ಪರೀಕ್ಷೆಯಲ್ಲಿ ಪಾಸ್ ಆಗಲು ಆಗದೆ ಇದ್ದರೆ, ನಾವು ಬಿಟ್ಟು ಕೊಡುತ್ತೇವೆ ಮತ್ತು ಕಾಪಿ ಹೊಡೆಯಲು ಪ್ರಾರಂಭಿಸುತ್ತೇವೆ.
3. ಜನರ ಜೀವಿತಗಳಲ್ಲಿ ಎದುರಾಗುವ ಕೆಟ್ಟ ಕಾರ್ಯಗಳು ನೇರವಾದ ಪಾಪದೊಂದಿಗೆ ಸಂಬಂಧಪಟ್ಟಿವೆಯೇ?
   ಸತ್ಯವೇದವು ಎರಡೂ ರೀತಿಯ ಉದಾಹರಣೆಯನ್ನು ಕೊಡುತ್ತದೆ. ಇಲ್ಲಿ ಯೋಬನ ಉದಾಹರಣೆಯನ್ನು ನೋಡುವಾಗ ಇಲ್ಲ ಅನ್ನಿಸುತ್ತದೆ. ಯೋಬನು ಕೆಟ್ಟ ಕಾರ್ಯಗಳನ್ನು ಅನುಭವಿಸುವಂತೆ ಯಾವುದೇ ಪಾಪವನ್ನು ಮಾಡಲಿಲ್ಲ. ಆದರೆ ಸತ್ಯವೇದದಲ್ಲಿ ಕೆಲವು ಪರಿಸ್ಥಿತಿಗಳಲ್ಲಿ ನಾವು ಹೌದು ಎಂಬ ಉತ್ತರವನ್ನು ನೋಡುತ್ತೇವೆ. ಉದಾಹರಣೆಗೆ ಸೊದೊಮ್ ಗೊಮೋರ ಪಟ್ಟಣ. ದೇವರು ಸತ್ಯವೇದದ ಮೂಲಕ ನಮಗೆ ಹೇಳುವದೇನೆಂದರೆ ಪಾಪದ ನಿಮಿತ್ತ ಆ ಪಟ್ಟಣವು ಸುಡಲ್ಪಟ್ಟಿತು. ಉತ್ತರವು ಕೆಲವೊಮ್ಮೆ ಹೌದು ಎಂದಾಗಿರುತ್ತದೆ ಮತ್ತು ಕೆಲವೊಮ್ಮೆ ಇಲ್ಲ ಎಂದಾಗಿರುತ್ತದೆ. ನಾವು ಯಾರ ವಿಷಯದಲ್ಲಿಯೂ ತೀರ್ಪು ಮಾಡಬಾರದು ಮತ್ತು ಒಂದುವೇಳೆ ನಾವು ಕರುಣೆಯುಳ್ಳವರಾಗಿದ್ದರೆ, ಆತನು ನಮಗೆ ಕರುಣೆ ತೋರಿಸುವದಾಗಿ ದೇವರು ನಮಗೆ ಹೇಳಿದ್ದಾನೆ. ಯಾರೋ ವೇದನೆಯಲ್ಲಿದ್ದರೆ ಅದಕ್ಕೆ ಅವರ ಪಾಪವೇ ಕಾರಣ ಎಂಬದಾಗಿ ಹೇಳಬೇಡಿರಿ ಯಾಕಂದರೆ ದೇವರು ಅವರ ಜೀವಿತದಲ್ಲಿ ಏನು ಮಾಡುತ್ತಿದ್ದಾನೆ ಎಂಬದು ನಿಮಗೆ ಗೊತ್ತಿಲ್ಲ. ಒಂದು ರೀತಿಯಲ್ಲಿ ಅವರು ಅದೃಷ್ಟವಂತರಾಗಿದ್ದಾರೆ ಯಾಕಂದರೆ ಅವರು ಅನುಭವಿಸುತ್ತಿರುವ ಯಾತನೆಯ ಮೂಲಕ ಅಂದರೆ ದೇವರು ಅವರ ಮೂಲಕ ಕಾರ್ಯ ಮಾಡುತ್ತಿದ್ದಾನೆ.

## ಆಟ

ಸ್ಕಾವೆಂಜರ್ ಬೇಟೆ



ಸಣ್ಣ ವಸ್ತುಗಳು ಅಥವಾ ಗೊಂಬೆಗಳನ್ನು ತೆಗೆದುಕೊಳ್ಳಿರಿ ಮತ್ತು ಅವುಗಳನ್ನು ಬಚ್ಚಿಡಿರಿ. ಒಂದುವೇಳೆ ಹೊರಗಡೆ ಆಟ ಆಡುವ ಅವಕಾಶ ನಿಮಗಿರುವದಾದರೆ, ಅವುಗಳನ್ನು ಪೊದೆಗಳಲ್ಲಿ ಮತ್ತು ಗಿಡಗಳ ಹಿಂದೆ ಬಚ್ಚಿಡಿರಿ. ಒಂದುವೇಳೆ ಮನೆಯ ಒಳಗೆ ಆಟ ಆಡುತ್ತಿರುವದಾದರೆ, ಅವುಗಳು ಕುರ್ಚಿ, ಟೇಬಲ್ ಅಥವಾ ಚಾಪೆಯ ಕೆಳಗೆ ಬಚ್ಚಿಡಿರಿ. ಪ್ರತಿಯೊಬ್ಬ ಆಟಗಾರನಿಗೆ ಬಚ್ಚಿಟ್ಟಿರುವ ವಸ್ತುಗಳ ಪಟ್ಟಿಯನ್ನು ಸಿದ್ಧಮಾಡಿರಿ. ನೀವು ಮಕ್ಕಳನ್ನು ತಂಡವಾಗಿ ಅಥವಾ ಜೋಡಿಗಳಾಗಿ ಏರ್ಪಡಿಸಬಹುದು. ಮಕ್ಕಳು ತಮಗೆ ವಸ್ತುಗಳು ಎಲ್ಲಿ ಸಿಗುತ್ತವೆಯೋ ಅಲ್ಲಿಯೇ ಇಡಬೇಕು ಆದರೆ ಪ್ರತಿಯೊಂದು ವಸ್ತು ಎಲ್ಲಿದೆ ಎಂಬದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಯಾವ ತಂಡ ಅಥವಾ ಆಟಗಾರ ವಸ್ತುಗಳನ್ನು ಹುಡುಕುತ್ತಾನೋ ಅವನು ಅಥವಾ ಅವರು ಗೆಲ್ಲುತ್ತಾರೆ.




## ಹಾಜರಾತಿ

ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

**ಯೋಬ**

## ಹೋಮ್ ವರ್ಕ್

**ಇತ್ತೀಚೆಗೆ ನಿಮ್ಮ ಜೀವಿತದಲ್ಲಿ ಸಂಭಿಸಿದ ಕಷ್ಟದ ಸಮಯದ ಬಗ್ಗೆ ಯೋಚಿಸಿರಿ. ಅದರಂದ ಏನೆಲ್ಲಾ ಒಳ್ಳೆಯ ಕಾರ್ಯಗಳು ನಡದವು? ಅವುಗಳನ್ನು ಗುರುತಿಸಲು ಕಷ್ಟವಾಗಬಹುದು, ಆದರೆ ಅದರ ಮೂಲಕ ದೇವರು ಯಾವ ಕೆಲಸಗಳನ್ನು ಮಾಡಿದ್ದಾನೆ ಎಂಬದನ್ನು ನೀವು ಆತನನ್ನು ಕೇಳಬಹುದು. ನಂತರ ಎಲ್ಲಾ ಒಳ್ಳೆಯ ಕಾರ್ಯಗಳನ್ನು ಬರೆಯಿರಿ ಅಥವಾ ಅವುಗಳ ಚಿತ್ರವನ್ನು ಬಿಡಿಸಿರಿ ಹಾಗೂ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿರಿ. ನಿಮ್ಮ ತಂದೆತಾಯಿಗಳಿಗೆ ಮತ್ತು ಶಿಕ್ಷಕರಿಗೆ ಅದರ ಬಗ್ಗೆ ಹೇಳಿರಿ.**

**ಓದಿರಿ**

ದಿನ 1: ಯೆಶಾಯ 52:1-4

ದಿನ 2: ಯೆಶಾಯ 52:5-10

ದಿನ 3: ಯೆಶಾಯ 52:11-15

ದಿನ 4: ಯೆಶಾಯ 53:1-6

ದಿನ 5: ಯೆಶಾಯ 53:7-12

# 7. ಒಳ್ಳೆಯದನ್ನು ನಿರೀಕ್ಷಿಸಿರಿ



ಸತ್ಯವೇದ ಕಥೆ: ಯೆಶಾಯ

ಯೆಶಾಯ 6:1-8, 9:6-7, 42:1-4, 53, 65:17-19

### ಕಂಠಪಾಠ ವಚನ

೨ ಕೊರಿಂಥಿಯರಿಗೆ **5:20** ಆದ್ದರಿಂದಲೇ ನಾವು ಕ್ರಿಸ್ತಯೇಸುವಿನ ರಾಯಭಾರಿಗಳು. ದೇವರೇ ನಮ್ಮ ಮುಖಾಂತರ ಕರೆ ನೀಡುತ್ತಿದ್ದಾರೆ. ಅವರೊಡನೆ ಸಂಧಾನಮಾಡಿಕೊಳ್ಳಿರೆಂದು ಕ್ರಿಸ್ತಯೇಸುವಿನ ಹೆಸರಿನಲ್ಲಿ ನಾವು ನಿಮ್ಮನ್ನು ವಿನಂತಿಸುತ್ತೇವೆ.

### ಕಥೆಯ ಅವಶ್ಯಕತೆ

ರಾಣಿಯ ತಂದೆತಾಯಿಗಳು ಪ್ರಯಾಣಕ್ಕೆ ಹೋಗಿದ್ದರು, ಅಲ್ಲದೆ ನಾವು ಹಿಂದಿರುಗಿ ಬರುವ ತನಕ ನೀನು ಮತ್ತು ನಿನ್ನ ತಮ್ಮ ತಂಗಿ ಜಗಳವಾಡದೆ ಇದ್ದರೆ ನಾವು ನಿನಗೆ ಒಳ್ಳೆಯ ಬಹುಮಾನವನ್ನು ಕೊಡುವೆವು ಎಂದು ಪ್ರಮಾಣ ಮಾಡಿದ್ದರು. ಆದರೆ ರಾಣಿಯ ತಮ್ಮ ಮತ್ತು ತಂಗಿ ಮನೆಯಲ್ಲಿ ಯಾರೂ ಇಲ್ಲ ನಾವು ಏನು ಬೇಕಾದರು ಮಾಡಬಹುದು ಎಂಬದಾಗಿ ಹೇಳಿದರು. ರಾಣಿ ಅವರಿಗೆ ನಾವು ಒಳ್ಳೆಯವರಾಗಿದ್ದರೆ ಅಪ್ಪ ಅಮ್ಮ ಹಿಂದಿರುಗಿ ಬರುವಾಗ ನಮಗೆ ಬಹುಮಾನ ಕೊಡುತ್ತಾರೆ ಎಂದು ಹೇಳಿದಳು. ಆದರೆ ಅವಳ ತಮ್ಮ ಮತ್ತು ತಂಗಿ ನಿನಗೆ ಹುಚ್ಚು ಹಿಡಿದಿದೆ ಅವರು ಏನೂ ತರುವದಿಲ್ಲ ಎಂದು ಹೇಳಿದರು. ಆದರೆ ರಾಣಿ ಅವರಿಗೆ ಇಲ್ಲ ಈ ಸಲ ಅವರು ಖಂಡಿತವಾಗಿಯೂ ತರುತ್ತಾರೆ ಎಂದು ಹೇಳಿದಳು. ಮತ್ತು ಅವರೊಂದಿಗೆ ಸೇರದೆ ಆಕೆ ಸಭ್ಯವಾಗಿ ನಡೆದುಕೊಂಡಳು.

### ಮುಖ್ಯ ಪಾಠ

ಇಂದಿನ ನಮ್ಮ ನಂಬಿಕೆಯ ವೀರರ ಪಾಠದಲ್ಲಿ, ವಿಶೇಷವಾದ ಕೆಲಸವುಳ್ಳವನಾಗಿದ್ದ ಒಬ್ಬ ಪ್ರವಾದಿಯ ಬಗ್ಗೆ ಕಲಿತು ಕೊಳ್ಳೋಣ. ದೇವರು ಯೆಶಾಯನನ್ನು ಪ್ರವಾದಿಯಾಗಿ ಹೇಗೆ ಕರೆದನು ಎಂಬದಾಗಿ ನೋಡಿಕೊಳ್ಳೋಣ. ಯೆಶಾಯನು ಅಮೋಘವಾದ ಪರಲೋಕದ ದರ್ಶನವನ್ನು ಕಂಡನು (ಯೆಶಾಯ 6). ನೀವು ಪ್ರತಿದಿನ ದೇವರೊಂದಿಗೆ ಸಮಯ ಕಳೆಯುವದನ್ನು ಮುಂದುವರೆಸುವಾಗ, ನೀವು ನಿಮ್ಮ ಜೀವಿತದ ಪ್ರತಿಯೊಂದು ಹಂತದಲ್ಲಿಯೂ ದೇವರನ್ನು ಹಿಂಬಾಲಿಸಲು ಹಾಗೂ ಆತನಿಗೆ ವಿಧೇಯರಾಗಿ ನಡೆದುಕೊಳ್ಳಲು ಬಯಸುವಾಗ, ದೇವರು ಎಷ್ಟು ಪರಿಶುದ್ಧನು ಹಾಗೂ ಅಗಮ್ಯನು ಎಂಬದನ್ನು ಹೆಚ್ಚಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಮತ್ತು ಪೇತ್ರನು, ಯೇಸು ಕ್ರಿಸ್ತನು ಯಾರು ಹಾಗೂ ತನ್ನ ಸ್ವಂತ ಪಾಪ ಏನು ಎಂಬದನ್ನು ತಿಳಿದುಕೊಂಡ ಹಾಗೆ (ಲೂಕ 5:8), ನೀವು ದೇವರ ಪರಿಶುದ್ಧತೆಯನ್ನು ತಿಳಿದುಕೊಳ್ಳುವಾಗ, ನಿಮಗೂ ನಿಮ್ಮ ಪಾಪ ಏನು ಎಂಬದನ್ನು ತಿಳಿಯುತ್ತದೆ ಮತ್ತು ಅಸಹಾಯಕತೆಯು ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ಆದರೆ ಚಿಂತಿಸಬೇಡಿರಿ! ಯೆಶಾಯನ ದರ್ಶನದಲ್ಲಿ, ದೇವದೂತನು ಅವನ ತುಟಿಯನ್ನು ಮುಟ್ಟಿದನು ಮತ್ತು ನೀನು ಶುದ್ಧನಾಗಿರುವೆ ಎಂದು ಹೇಳಿದನು. ಇದೇ ಪ್ರಕಾರ, ನೀವು ಮಾಡಿರುವ ಕಾರ್ಯಗಳಿಂದ ನಿಮ್ಮನ್ನು ಶುದ್ಧರು ಎಂದು ಕರೆಯುವದಿಲ್ಲ ಬದಲಾಗಿ ಆತನು ಮಾಡಿರುವ ಕಾರ್ಯದ ನಿಮಿತ್ತ ನಿಮ್ಮನ್ನು ಶುದ್ಧರು ಎಂದು ಕರೆಯುತ್ತಾನೆ (ಯೋಹಾನ 15:3). ನಂತರ ದರ್ಶನದಲ್ಲಿ ದೇವರು ನಾನು ಯಾರನ್ನು

ಕಳುಹಿಸಲಿ ಎಂದು ಕೇಳಿದಾಗ, “ನಾನು ಹೋಗುವೆನು, ನನ್ನನ್ನು ಕಳುಹಿಸು” ಎಂದು ಯೆಶಾಯನು ಹೇಳಿದನು. ಇಂದಿಗೂ, ದೇವರು ಯಾರು ತನ್ನ ವಿಷಯದಲ್ಲಿ ಸಂಪೂರ್ಣ ಸಮರ್ಪಣೆಯುಳ್ಳವರಾಗಿದ್ದಾರೆ ಎಂದು ಹುಡುಕುತ್ತಲೇ ಇದ್ದಾನೆ (2 ಪೂರ್ವಕಾಲವೃತ್ತಾಂತ 16:9) ಮತ್ತು ಯಾರನ್ನು ತನ್ನ ಪರವಾಗಿ ಕಳುಹಿಸಲಿ ಎಂಬದನ್ನು ಎದುರುನೋಡುತ್ತಾ ಇದ್ದಾನೆ. ನಿಮ್ಮನ್ನು ಆರಿಸಿಕೊಳ್ಳುವಂತೆ ನೀವು ಆತನಿಗೆ ಹೇಳಬಹುದು! ಈ ಲೋಕದಲ್ಲಿ ಆತನನ್ನು ಪ್ರತಿನಿಧಿಸಲು ಮತ್ತು ಆತನನ್ನು ಹಿಂಬಾಲಿಸುವಂತೆ ಜನರನ್ನು ಪ್ರೋತ್ಸಾಹ ಪಡಿಸಲು ಆತನು ನಿಮ್ಮನ್ನು ಆರಿಸಿದ್ದಾನೆ (2 ಕೊರಂಥ 5:20).

ಯೆಶಾಯನಿಗೆ ಅಮೋಘವಾದ ಕೆಲಸವು ದೊರೆಯಿತು! ನಿಮ್ಮನ್ನು ಆಯ್ಕೆ ಮಾಡುವಂತೆ ನೀವು ದೇವರಿಗೆ ಹೇಳುವಾಗ, ಆತನು ನಿಮಗೂ ಅದ್ಭುತಕಾರ್ಯಗಳನ್ನು ಮಾಡುವನು. ಯೆಶಾಯನು ಯೇಸು ಕ್ರಿಸ್ತನ ಬರೋಣದ ಬಗ್ಗೆ ಪ್ರವಾದಿಸಿದನು. ದೇವರು ಇಸ್ರಾಯೇಲ್ಯರಿಗೆ ಮತ್ತು ಇಡೀ ಲೋಕಕ್ಕೆ ಅವರ ಭವಿಷ್ಯದ ವಿಷಯದಲ್ಲಿ ಉತ್ತಮ ನಿರೀಕ್ಷೆಯನ್ನು ಕೊಟ್ಟನು.

ಸುಮಾರು ಸಾವಿರ ವರ್ಷಗಳ ನಂತರ, ಫಿಲಿಪ್ಪನೆಂಬ ಶಿಷ್ಯನು ಇಂದು ನಾವು ನೋಡುತ್ತಿರುವ ಯೆಶಾಯನ ಪುಸ್ತಕದ ಒಂದು ಭಾಗವನ್ನು ಓದುತ್ತಿದ್ದ ಐಥಿಯೊಪ್ಯದ ಕಂಚುಕಿಯನ್ನು ಭೇಟಿ ಮಾಡಿದನು. ಅವರು ಯೆಶಾಯ 53:7 ನೇ ವಾಕ್ಯವನ್ನು ಓದುತ್ತಾ ಇದ್ದನು, ಫಿಲಿಪ್ಪನು ಆತನಿಗೆ ಅದರ ಬಗ್ಗೆ ವಿವರಿಸಿದಾಗ, ಕಂಚುಕಿಯು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡನು! ಆದ್ದರಿಂದ, ದೇವರು ನಿಮ್ಮನ್ನು ಯೆಶಾಯನ ಹಾಗೆ ಕಳುಹಿಸುವಾಗ, ದೇವರು ನಿಮ್ಮ ಮೂಲಕವೂ ಅದ್ಭುತಕಾರ್ಯಗಳನ್ನು ಮಾಡುವನು. ಆದರೆ ನಾವು ಸುತ್ತಮುತ್ತಲು ನೋಡುವಾಗ, ನಮ್ಮ ಅಕ್ಕಪಕ್ಕದಲ್ಲಿರುವ ಸ್ವಲ್ಪ ಪ್ರದೇಶಗಳು ಹಾಗೂ ನಮ್ಮ ಜೀವಿತದ ಕೆಲವು ಭಾಗಗಳು ಮಾತ್ರವೇ ಕಾಣಿಸುತ್ತವೆ. ದೇವರು ಸುತ್ತಮುತ್ತಲು ನೋಡುವಾಗ, ಆತನು ಇಡೀ ಲೋಕವನ್ನು ಮತ್ತು ನಮ್ಮ ಹಿಂದೆ ಹಾಗು ಮುಂದೆ ಇರುವ ಎಲ್ಲಾ ಸಮಯವನ್ನು ನೋಡುತ್ತಾನೆ. ನಿಮ್ಮ “ಹೌದು” ಎಂಬ ಮಾತಿನ ಮೂಲಕ ಎಲ್ಲವೂ ಪ್ರಾರಂಭವಾಗುವ ಅದ್ಭುತಕಾರ್ಯಗಳನ್ನು ಮಾಡಲು ಆತನು ಯೋಚನೆ ಮಾಡುತ್ತಿದ್ದಾನೆ. ಆದರೆ ನೀವು ಪರಲೋಕಕ್ಕೆ ಹೋಗುವ ತನಕ ದೇವರು ನಿಮ್ಮ ಜೀವಿತದಲ್ಲಿ ಏನೇನು ಮಾಡಿದ್ದಾನೆ ಎಂಬದು ನಿಮಗೆ ಗೊತ್ತಾಗುವದಿಲ್ಲ, ನೀವು ಭೂಲೋಕದಿಂದ ಹೋದ ನಂತರವೂ ದೇವರು ನಿಮ್ಮ ಜೀವಿತದ ಮೂಲಕ ಮಾಡಿರುವ ಕಾರ್ಯವನ್ನು ತಿಳಿಯುವಾಗ ನಿಮಗೆ ಬಹಳ ಆಶ್ಚರ್ಯವಾಗುತ್ತದೆ.

ಪರಲೋಕದ ಬಗ್ಗೆ ಮಾತನಾಡುತ್ತಾ, ಯೆಶಾಯನು ಭವಿಷ್ಯದಲ್ಲಿ ನಡೆಯುವ ಒಳ್ಳೆಯ ಕಾರ್ಯಗಳನ್ನು ನಿರೀಕ್ಷಿಸಿದನು. ಯೇಸು ಕ್ರಿಸ್ತನ ಬಗ್ಗೆ ಮಾತ್ರವಲ್ಲ ಬದಲಾಗಿ ಪರಲೋಕದ ಬಗ್ಗೆಯೂ ಪ್ರವಾದಿಸುವ ಕಾರ್ಯವನ್ನು ದೇವರು ಯೆಶಾಯನಿಗೆ ಕೊಟ್ಟನು. ನಿಮ್ಮನ್ನು ಆಯ್ಕೆ ಮಾಡುವಂತೆ ಮತ್ತು ಲೋಕದ ಜನರನ್ನು ಯೇಸು ಕ್ರಿಸ್ತನ ಕಡೆಗೆ ನಡೆಸುವ ಮೂಲಕ ಅವರಿಗೆ ನಿರೀಕ್ಷೆಯನ್ನು ಕೊಡಲು ಪರಲೋಕದ ಬಾಧ್ಯಸ್ಥಿಕೆಯನ್ನು ಹೊಂದಲು ಅವರಿಗೆ ಸಹಾಯ ಮಾಡುವ ಅವಕಾಶ ಕೊಡುವಂತೆ ನೀವು ದೇವರನ್ನು ಬೇಡಿಕೊಳ್ಳುವಿರೋ?




ನನ್ನನ್ನು ಆಯ್ಕೆ ಮಾಡುವಂತೆ ಮತ್ತು ಭವಿಷ್ಯದಲ್ಲಿ ದೇವರು ಮಾಡುವ ಕಾರ್ಯಗಳನ್ನು ಎದುರು ನೋಡಲು ಸಹಾಯ ಮಾಡುವಂತೆ ಬೇಡಿಕೊಳ್ಳುವ ಆಯ್ಕೆ ಮಾಡಿಕೊಳ್ಳುತ್ತೇನೆ.

### ವಿಶ್ಲೇಷಣೆ

ಕಡೆಯಲ್ಲಿ ನಿರೀಕ್ಷೆಯಂತೆಯೇ ಆಕೆ ಬಹುಮಾನವನ್ನು ಪಡೆದುಕೊಂಡಳು.

### ಚಟುವಟಿಕೆ



ಸಂಗೀತದೊಂದಿಗೆ ಒಗಟುಗಳು

ವಿವಿಧ ಹಾಡುಗಳ ಸಾಲುಗಳನ್ನು ಹಾಳೆಯ ಚೂರುಗಳ ಮೇಲೆ ಮೊದಲೇ ಬರೆದಿಡಿರಿ. ನಿಮ್ಮ ತರಗತಿಯಲ್ಲಿರುವ ಮಕ್ಕಳ ವಯಸ್ಸು ಮತ್ತು ಸಂಗೀತದ ಕಷ್ಟದ ಆಧಾರದ ಮೇರೆಗೆ, ಸಾಲುಗಳ ಒಂದೊಂದೇ ಪದವನ್ನು ಅಥವಾ ಪೂರ್ತಿ ಸಾಲುಗಳನ್ನು ಪ್ರತ್ಯೇಕಪಡಿಸಿ ಚೀಲದೊಳಗೆ ಹಾಕಿರಿ. ಆಟ ಆಡುವ ಸಲುವಾಗಿ ನಿಮ್ಮ ತರಗತಿಯನ್ನು ತಂಡಗಳಾಗಿ ವಿಭಾಗಿಸಿರಿ ಮತ್ತು ಪ್ರತಿಯೊಂದು ತಂಡಕ್ಕೆ ಚೀಲವನ್ನು ಕೊಡಿರಿ. ಅವರಿಗಾಗಿ ಹಾಡನ್ನು ಹಾಕಿರಿ, ಮತ್ತು ಯಾವ ತಂಡ ಹಾಡಿನ ಸಾಲುಗಳನ್ನು ಮೊದಲು ಸರಿಯಾಗಿ ಜೋಡಿಸುತ್ತದೆಯೋ ಅವರು ಗೆಲ್ಲುತ್ತಾರೆ. ಹಿಂದಿನ ಕಂಠಪಾಠ ವಚನನ್ನು ನೆನಪಿಗೆ ತಂದುಕೊಳ್ಳಲು ಈ ಆಟ ಸಹಕರಿಸುತ್ತದೆ.

### ಟೈಮ್ ಲೈನ್

**ಯೆಶಾಯನು ಯಾವಾಗ ಜನಿಸಿದನು? ಉತ್ತರ: ಬಹುಶಃ ಕ್ರಿ.ಶ. 766 ರಲ್ಲಿ.**

**ಯೆಶಾಯನು ಯಾವಾಗ ಮೃತಪಟ್ಟನು? ಉತ್ತರ: ಬಹುಶಃ ಕ್ರಿ.ಶ. 686 ರಲ್ಲಿ.**

### ಒಗಟಿನ ಉತ್ತರಗಳು

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಐ | ಧಿ | ಯೊ | ಪ್ಯ | ನು | ಹೇ | ರಿ | ಯ | ಭ | ವಿ | ಷ್ಯ | ಣ | ಣಿ | ಳು | ಧಿ |
| ಯೊ | ಕೆ | ಹಿ | ರ್ಶ | ದ | ರ್ಶ | ನ | ಪ್ಯ | ಕೆ | ಶಾ | ರಿ | ರ್ಪ | ಒ | ಪ್ಯ | ವಿ |
| ಸೇ | ಣ | ಧಿ | ರ್ಶ | ಳಿ | ಹೇ | ಷ | ದು | ಣ | ಹಿ | ಮ | ರಿ | ಸು | ಣ | ಕೆ |
| ಯ | ವೆ | ಶಾ | ಳ್ಳೆ | ಹೇ | ಧಿ | ಮಿ | ಹಿ | ಳ್ಳೆ | ಸ | ರ್ಶ | ಳು | ತಿ | ಲ | ಸು |
| ಹೇ | ಕ್ತೆ | ಒ | ದು | ತಿ | ಳು | ಶಾ | ಮ | ಯ | ಸೇ | ಕ್ತೆ | ವಿ | ಸ | ಸ | ಣ |
| ದು | ಸೇ | ಹಿ | ತೆ | ತೆ | ರ್ಶ | ಕೆ | ಕ್ತೆ | ರೀ | ನಿ | ಹಿ | ತೆ | ರ್ಶ | ಳು | ರ |
| ಪ್ರ | ರ್ಶ | ಒ | ಳ್ಳೆ | ಯ | ದು | ರಿ | ಸು | ವಿ | ಳು | ಷ್ಟ | ರಿ | ಕ್ತೆ | ಮ | ಕ |
| ತಿ | ಯ | ರ್ಶ | ಶಾ | ಧೇ | ಣ | ಧಿ | ಸ | ಹಿ | ಹಿ | ಮ | ಲಿ | ಹಿ | ಳು | ರ್ತಿ |
| ನಿ | ಸೇ | ಯೆ | ಒ | ವಿ | ಳ್ಳೆ | ಕೆ | ದು | ತಿ | ಳು | ಸ | ಶಾ | ಫಿ | ಸ | ವಾ |
| ಧಿ | ರ್ಶ | ಯೊ | ಣ | ಸು | ಕ್ತೆ | ರ್ಶ | ದು | ಳು | ಳು | ಕ | ಹಿ | ತೆ | ಯ | ಸು |

| * | / | . | ; | [ |
|---|---|---|---|---|
| 54 | 35 | 40 | 25 | 39 |

| } | " | ] | ° | ! |
|---|---|---|---|---|
| 40 | 16 | 10 | 11 | 10 |



### ಪ್ರಶ್ನೆಗಳು ಮತ್ತು ಉತ್ತರಗಳು

**(ಹಿರಿಯ ವಿದ್ಯಾರ್ಥಿಗಳಿಗೆ)**

1. ದೇವರ ವಾಗ್ದಾನಗಳನ್ನು ನಂಬಿರಿ ಅಥವಾ ಪ್ರಕಟಪಡಿಸಿರಿ ಎಂದು ಜನರು ಹೇಳುತ್ತಾ ಇದ್ದಾರೆ. ಆದರೆ ಯಾವುದು ಸರಿ ಮತ್ತು ಯಾವುದು ಸುಳ್ಳು ಎಂದು ನಾವು ಹೇಗೆ ಹೇಳಲು ಸಾಧ್ಯ? ನಾವೇನು ಮಾಡಲು ಸಾಧ್ಯ?


ನಿಮಗೆ ಹೊಸ ಕೆಂಪು ಕಾರು ಸಿಗುತ್ತದೆ ಮತ್ತು ದೇವರು ನಿಮಗೆ ಒಳ್ಳೆಯ ಉದ್ಯೋಗವನ್ನು ಕೊಡುತ್ತಾನೆ ಎಂದು ಪ್ರಕಟಿಸುವದರ ನಡುವೆ ಇರುವ ವ್ಯತ್ಯಾಸವನ್ನು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ನಿಮ್ಮಿಂದ ಆಗುತ್ತದೆಯೇ. ಹಾಗೆಯೇ ದೇವರು ನಿಮ್ಮೊಂದಿಗೆ ಮಾತನಾಡಿದ್ದಾನೆ ಅಥವಾ ಸತ್ಯವೇದದಲ್ಲಿ ಬರೆಯಲ್ಪಟ್ಟಿರುವ ವಾಗ್ದಾನದ ಬಗ್ಗೆ ಅವರೊಂದಿಗ ಚರ್ಚಿಸಿರಿ. ಉದಾಹರಣೆಗೆ, "ದೇವರು ಈಗ ನನ್ನ ಜೀವಿತದಲ್ಲಿ ನಡೆಯುತ್ತಿರುವ ಕಟ್ಟ ಕಾರ್ಯಗಳ ಮೂಲಕವೂ ಒಳ್ಳೆಯ ಕಾರ್ಯ ಮಾಡುವನು." ಮತ್ತೊಂದು ಕಡೆಯಲ್ಲಿ ದೇವರು ಮಾರಾಟ ಮಾಡುವ ಯಂತ್ರವಲ್ಲ, ನಾವು ದುಡ್ಡು ಕೊಟ್ಟರೆ ಆತನು ನಮಗೆ ಬೇಕಾಗಿರುವದನ್ನು ಕೊಡುವದಿಲ್ಲ.

2. ದೇವರು ಯಾವುದಾದರು ಕಾರ್ಯ ಮಾಡುವ ಮೊದಲು ಹೀಗೆ ಮಾಡುವನು ಎಂಬದಾಗಿ ನೀವು ಎಂದಾದರು ನಂಬಿದ್ದೀರೋ?
   ಹಂಚಿಕೊಳ್ಳಲು ಮಕ್ಕಳಿಗೆ ಅವಕಾಶ ಕೊಡಿರಿ. ನೀವು ನಿಮ್ಮ ಸಾಕ್ಷಿಯನ್ನು ಮೊದಲೇ ಸಿದ್ಧ ಮಾಡಿಟ್ಟುಕೊಂಡಿರ್ರಿ, ಅವರೊಂದಿಗೆ ಹಂಚಿಕೊಳ್ಳುವಾಗ ಅವರಿಗೆ ಒಳ್ಳೆಯ ಆಲೋಚನೆಗಳು ಬರುವವು.
3. ನಾವು ಒಳ್ಳೆಯ ಕಾರ್ಯಗಳಿಗಾಗಿ ಎಷ್ಟು ಸಮಯ ಕಾಯಬೇಕು ಮತ್ತು ನಿರೀಕ್ಷೆಯುಳ್ಳವರಾಗಿರಬೇಕು?
   ಅವರು ಒಂದು ತಾಸಿನಿಂದ ವರ್ಷಗಳ ತನಕ ಉತ್ತರಗಳನ್ನು ಕೊಡಲಿ. ಯೆಶಾಯನು ಮೆಸ್ಸೀಯನ ಬಗ್ಗೆ ಪ್ರವಾದಿಸಿದನು ಮತ್ತು ಅವನು ತನ್ನ ಪ್ರವಾದನೆ ನೆರವೇರುವದನ್ನು ನೋಡಲು ಆಗಲಿಲ್ಲವಾದರೂ ಅವು ನೆರವೇರಿದವು ಎಂಬದನ್ನು ಮಕ್ಕಳಿಗೆ ನೆನಪಿಸಿರಿ. ಕೆಲವೊಮ್ಮೆ ನಮ್ಮ ಜೀವಿತಕಾಲದಲ್ಲಿ ನೆರವೇರುವ ಒಳ್ಳೆಯ ಕಾರ್ಯಗಳನ್ನು ನೋಡಲು ನಮ್ಮಿಂದ ಆಗುವದಿಲ್ಲ. ಆದರೆ ದೇವರು ಎಂದಿಗೂ ವಿಫಲನಾಗುವದಿಲ್ಲ.

## ಆಟ

ಕಣ್ಣಿಗೆ ಬಟ್ಟೆ ಕಟ್ಟಿ ಚಿತ್ರ ಬಿಡಿಸುವದು

ತರಗತಿಯನ್ನು ಜೋಡಿಗಳಾಗಿ ವಿಭಾಗಿಸಿರಿ. ಪ್ರತಿಯೊಂದು ಜೋಡಿಯಲ್ಲಿ, ಒಬ್ಬ ಆಟಗಾರನ ಕಣ್ಣುಗಳಿಗೆ ಬಟ್ಟೆಯನ್ನು ಕಟ್ಟಿರಿ ಮತ್ತು ಪೇಪರ್ ಹಾಗೂ ಪೆನ್ಸಿಲ್ ಕೊಡಿರಿ. ಮತ್ತೊಬ್ಬ ಆಟಗಾರ ನೀವು ಬೋರ್ಡ್ ಮೇಲೆ ಬರೆದಿರುವ ಪದವನ್ನು ಓದಬೇಕು ಅಥವಾ ನಿಧಾನವಾಗಿ ಹೇಳಬೇಕು ಮತ್ತು ಪದವನ್ನು ಹೇಳದೆ ಚಿತ್ರ ಬಿಡಿಸಲು ಸೂಚನೆಗಳನ್ನು ಕೊಡಬೇಕು. ಉದಾಹರಣೆಗೆ, ನೀವು "ಮನೆ" ಎಂಬದಾಗಿ ಬರೆದರೆ, ಜೊತೆಗಾರನು ಮನೆ ಎಂಬದಾಗಿ ಹೇಳಬಾರದು ಬದಲಾಗಿ ಎರಡೂ ಕಡೆಗಳಲ್ಲಿ ಗೆರೆಗಳನ್ನು ಬರೆಯಲು ಮತ್ತು ಮೇಲ್ಭಾಗದಲ್ಲಿ ಚಾವಣಿಯನ್ನು ಬರೆಯುವಂತೆ ಹೇಳಬೇಕು.



## ಹಾಜರಾತಿ

ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:
ಯೆಶಾಯ




## ಹೋಮ್ ವರ್ಕ್

ಈ ವಾರ ಏನೇ ಒಳ್ಳೆದು ನಡೆದರೂ, ಪರಲೋಕವು ಎಷ್ಟು ಉತ್ತಮವಾಗಿರುವದೆಂದು ಯೋಚಿಸಿರಿ. ಏನಾದರು ಕೆಟ್ಟದ್ದು ನಡೆಯುವಾಗ, ದೇವರು ಪರಲೋಕದಲ್ಲಿ ಕಣ್ಣೀರನ್ನೆಲ್ಲಾ ಹೇಗೆ ಒರಸಿ ಬಿಡುವನು ಎಂಬದನ್ನು ನೆನಪು ಮಾಡಿಕೊಳ್ಳಿರಿ.

ಎಲ್ಲದಕ್ಕಿಂತ ಹೆಚ್ಚಗಿ, ಇದನ್ನು ಮಾಡಬೇಕೆಂದು ಅನ್ನಿಸಿದರೆ ಮಾತ್ರ ಮಾಡಿರಿ: ನಿಮ್ಮನ್ನು ಆಯ್ಕೆಮಾಡುವಂತೆ ಮತ್ತು ಕಳುಹಿಸಿ ಕೊಡುವಂತೆ ದೇವರನ್ನು ಬೇಡಿಕೊಳ್ಳಿರಿ. ಇದು ಬಹಳ ಗಂಭೀರವಾದ ವಿಷಯವಾಗಿದೆ. ಒಂದುವೇಳೆ ನೀವು ಆತನನ್ನು ಬೇಡಿಕೊಂಡರೆ, ಆತನು ನಿಮ್ಮನ್ನು ಆರಿಸಿಕೊಳ್ಳುತ್ತಾನೆ ಹಾಗೂ ಕಳುಹಿಸಿ ಕೊಡುತ್ತಾನೆ, ಮತ್ತು ಹಿಂದಿರುಗುವಿಕೆ ಎಂಬದು ಇರುವದಿಲ್ಲ.

ಓದಿರಿ

ದಿನ 1: ಯೆರೆಮಿಯ 1:9-14

ದಿನ 2: ಯೆರೆಮಿಯ 20:3-6

ದಿನ 3: ಯೆರೆಮಿಯ 20:7-12

ದಿನ 4: ಯೆರೆಮಿಯ 20:13-18

ದಿನ 5: ಯೆರೆಮಿಯ 37:11-17

# 8. ಹಿಂಸೆಗಳ ಸಮಯದಲ್ಲಿ ತಾಳ್ಮೆಯುಳ್ಳವರಾಗಿರಿ



**ಸತ್ಯವೇದ ಕಥೆ: ಯೆರೆಮಿಯ**

ಯೆರೆಮಿಯ 1:4-19, 15:15-21, 26:7-16, 37:11-21, 38:6-10, 39:1-2, 39:11-12

## ಕಂಠಪಾಠ ವಚನ

**ಪ್ರೇಷಿತರ ಕಾರ್ಯಕಲಾಪಗಳು 4:29 ಪ್ರಭುವೇ, ಇಗೋ, ಇವರು ನಮ್ಮನ್ನು ಬೆದರಿಸುತ್ತಿದ್ದಾರೆ; ನಿಮ್ಮ ಸಂದೇಶವನ್ನು ಧೈರ್ಯವಾಗಿ ಸಾರಲು ಶರಣರಾದ ನಮಗೆ ನೆರವು ನೀಡಿರಿ.**

## ಕಥೆಯ ಅವಶಕತೆ



ಅವರು ಪ್ರಾರ್ಥನೆ ಮಾಡುತ್ತಾ ಇರುವಾಗ, ತನ್ನ ಪಕ್ಕದ ಮನೆಯಲ್ಲಿರುವ ಮಕ್ಕಳಿಗೆ ದೇವರ ವಾಕ್ಯ ತಿಳಿಸಬೇಕೆಂದು ದೇವರು ರಾಜುವಿಗೆ ಪ್ರೇರೇಪಿಸುತ್ತಿದ್ದನು. ಆದರೆ ರಾಜುಗೆ ಈ ವಿಷಯದಲ್ಲಿ ದೃಢತೆ ಇರಲಿಲ್ಲ, ಯಾಕಂದರೆ ಅವರ ಪಕ್ಕದ ಮನೆಯವರು ಹೊಸದಾಗಿ ಅಲ್ಲಿಗೆ ಬಂದಿದ್ದರು. ಆದರೆ ದೇವರ ಸ್ವರ ಬಲಗೊಳ್ಳುತ್ತಲೇ ಇತ್ತು. ಆತನು ಅದಂತೆಯೇ ಮಾಡಲು ತೀರ್ಮಾನಿಸಿದನು, ಆದರೆ ಅವನು ಪ್ರತಿ ಬಾರಿ ಯಾರೊಂದಿಗಾದರು ಮಾತನಾಡುವಾಗಲೂ, ಅವರು ಅವನನ್ನು ಗೇಲಿ ಮಾಡುತ್ತಿದ್ದರು ಮತ್ತು ಅವನಿಗೆ ದುಃಖ ಕೊಡುತ್ತಿದ್ದರು.

## ಮುಖ್ಯ ಪಾಠ

ನಂಬಿಕೆಯ ವೀರರಿಗೆ ಮತ್ತೊಮ್ಮೆ ಸ್ವಾಗತ! ಇಂದು ನಾವು ತನ್ನ ಜೀವನ ಪರ್ಯಂತರ ಹಿಂಸೆಗಳನ್ನು ಎದುರಿಸಿದ ಮತ್ತು ದೇವರಿಂದ ಬಲ ಹೊಂದಿದ ವ್ಯಕ್ತಿಯ ಬಗ್ಗೆ ನೋಡಿಕೊಳ್ಳೋಣ. ಯೆರೆಮಿಯನು ಯೆಹೂದದ ಕೊನೆಯ ಅರಸರ ಕಾಲದಲ್ಲಿ ಜೀವಿಸಿದನು.

ದೇವರು ಯೆರೆಮಿಯನನ್ನು ಅವನ ಚಿಕ್ಕ ವಯಸ್ಸಿನಲ್ಲಿಯೇ ಕರೆದನು. ನೀನು ನಿನ್ನ ತಾಯಿಯ ಗರ್ಭದೊಳಗಿರುವಾಗಲೇ ನಾನು ನಿನ್ನನ್ನು ನೋಡಿದ್ದೇನೆ ಎಂದು ದೇವರು ಯೆರೆಮಿಯನಿಗೆ ಹೇಳಿದನು. ನೀವು ಅಸ್ತಿತ್ವಕ್ಕೆ ಬರುವ ಮೊದಲೇ ದೇವರು ನಿಮ್ಮನ್ನೂ ನೋಡಿದ್ದಾನೆ! ದೇವರು ನಿಮಗಾಗಿ ನೇಮಿಸಿರುವ ಕಾರ್ಯವನ್ನು ನೀವು ಮಾಡುವ ಸಲುವಾಗಿ ನಿಮ್ಮನ್ನು ಪ್ರತ್ಯೇಕ ಪಡಿಸಿಕೊಂಡಿದ್ದಾನೆ. ಯೆರೆಮಿಯನ ವಿಷಯದಲ್ಲಿ ದೇವರ ಯೋಚನೆ ಏನೆಂದರೆ ಅವನು ಪ್ರವಾದಿಸಬೇಕು, ದೇವರ ಪರವಾಗಿ ಜನಾಂಗಗಳೊಂದಿಗೆ ಮಾತನಾಡಬೇಕು. ದೇವರು ಅವನಿಗೆ ನಾನು ನಿನ್ನನ್ನು ಕಬ್ಬಿಣದ ಗೋಡೆಯ ಹಾಗೆ ಬಲಪಡಿಸುತ್ತೇನೆ. ಯೆರೆಮಿಯನು ತನ್ನ ಜೀವನ ಪರ್ಯಂತರ ಯೆಹೂದದ ಜನರಿಗೆ ದೇವರನ್ನು ತೊರೆಯಬೇಡಿರಿ, ಆತನು ನಿಮ್ಮನ್ನು ಬಾಬೆಲಿಗೆ ಸೆರೆಯಾಗಿ ಕಳುಹಿಸುವನು ಎಂಬದಾಗಿ ಹೇಳುವದೇ ಆಗಿತ್ತು. ಜನರು ಯೆರೆಮಿಯನ ಮಾತುಗಳನ್ನು ಕೇಳಲಿಲ್ಲ ಮತ್ತು ತಮ್ಮ ಜೀವನ ಪರ್ಯಂತರ ಅವನನ್ನು ವಿರೋಧಿಸಿದರು.

ಒಮ್ಮೆ ಯೆರೆಮಿಯನಿಗೆ ಬಹಳ ನಿರಾಸೆಯಾಯಿತು. ಅವನು ತನ್ನ ಸುತ್ತಮುತ್ತಲು ನಡೆಯುವ ಕಾರ್ಯಗಳನ್ನು ಮಾತ್ರವೇ ನೋಡಿದನೇ ಹೊರತು ದೇವರು ಅವನನ್ನು ಹೇಗೆ ಮೇಲೆತ್ತುತ್ತಿದ್ದಾನೆ ಎಂಬದನ್ನು ನೋಡಲಿಲ್ಲ. ಕಾರ್ಯಗಳು ಸರಿಯಾಗಿ



YEAH!!

ನಡೆಯದೆ ಇರುವಾಗ ನಾವು ಸುಲಭವಾಗಿ ಆರೋಪ ಮಾಡುತ್ತೇವೆ ಮತ್ತು ದೇವರು ಮಾಡುವ ಪೋಷಣೆಯ ಕಡೆಗೆ ಗಮನ ಕೊಡದವರಾಗಿರುತ್ತೇವೆ. ದೇವರು ಅವನಿಗೆ ನೀನು ಪಶ್ಚಾತ್ತಾಪಪಡು ಎಂಬದಾಗಿ ಹೇಳಿದನು ಮತ್ತು ನಾನು ನಿನ್ನನ್ನು ರಕ್ಷಿಸುತ್ತೇನೆ ಎಂಬದಾಗಿ ಮನನ ಮಾಡಿಸಿದನು. ದೇವರು ಅವನಿಗೆ ಮತ್ತೊಮ್ಮೆ ದೃಢವಾಗಿರು, ನಿನ್ನ ಸುತ್ತಮುತ್ತಲಿನಲ್ಲಿರುವವರ ಮಾರ್ಗವನ್ನು ಅನುಸರಿಸಬೇಡ ಎಂಬದಾಗಿ ಹೇಳಿದನು.

ಯೆರೆಮಿಯನು ಬಹಳ ಹಿಂಸೆಗಳನ್ನು ಸಹಿಸಿಕೊಂಡನು. ಒಮ್ಮೆ ಯೆರೆಮಿಯನು ಆಡಿದ ಮಾತುಗಳ ನಿಮಿತ್ತ ಅವರು ಅವನನ್ನು ಕೊಲ್ಲುವದಾಗಿ ಬೆದರಿಸಿದರು. ಯೆರೆಮಿಯನನ್ನು ಕೆಲವು ದಿನಗಳ ತನಕ ನೀರಿನ ತೊಟ್ಟಿಯೊಳಗೆ ಹಾಕಿದ್ದರು ಮತ್ತು ಸೆರೆಮನೆಯಲ್ಲಿ ಇರಿಸಿದ್ದರು. ಅವನು ದೇವರ ಪರವಾಗಿ ಮಾತನಾಡುತ್ತಿದ್ದನು, ಆದರೆ ಅವರು ನೀನು ಬಾಬೆಲಿನ ಗೂಢಾಚಾರಿ ಎಂದು ಆರೋಪ ಮಾಡಿದರು. ಯೆರೆಮಿಯನ ಮೇಲೆ ಸುಳ್ಳು ಆರೋಪಗಳನ್ನು ಮಾಡಿದ ಹಾಗೆಯೇ ಯೇಸು ಕ್ರಿಸ್ತನ ಮೇಲೆಯೂ ಮಾಡಿದರು. ಯೇಸು ಕ್ರಿಸ್ತನ ಮಾತುಗಳನ್ನು ನಿರಾಕರಿಸುವ ಜನರು ಭೂಲೋಕದಲ್ಲಿ ಇದ್ದೇ ಇರುತ್ತಾರೆ, ಅವರು ನಮ್ಮ ಮಾತುಗಳನ್ನೂ ನಿರಾಕರಿಸುತ್ತಾರೆ. ಯೇಸು ಕ್ರಿಸ್ತನು ಪರಲೋಕಕ್ಕೆ ಹೋದ ಮೇಲೆ, ಅವರು ಹಿಂಸೆಗಳನ್ನು ಎದುರಿಸಿದರು, ಚಡಿಗಳಿಂದ ಹೊಡೆಸಿಕೊಂಡರು ಮತ್ತು ಸೆರೆಮನೆಗಳಿಗೆ ಹಾಕಲ್ಪಟ್ಟರು. ಅವರು ಸೋಲು ಒಪ್ಪಿಕೊಳ್ಳದೆ, ಯೆರೆಮಿಯನ ಹಾಗೆ ಹಿಂಸೆಗಳ ನಡುವೆಯೂ ಧೈರ್ಯವಾಗಿ ಮಾತನಾಡಲು ಬಲಕೊಡುವಂತೆ ದೇವರನ್ನು ಬೇಡಿಕೊಂಡರು (ಅಪೊ 4:29). ನೀವೂ ದೇವರ ಬಳಿ ಧೈರ್ಯವನ್ನು ಬೇಡಿಕೊಳ್ಳಬಹುದು.

ಅನೇಕ ವರ್ಷಗಳ ಕಾಲ ಸೆರೆವಾಸದ ಬಗ್ಗೆ ಪ್ರವಾದಿಸಿದ ನಂತರ, ಯೆರೆಮಿಯನ ಮಾತುಗಳು ನೆರವೇರಿದವು. ಬಾಬೆಲಿನವರು ಬಂದು ಯೆರೂಸಲೇಮನ್ನು ವಶಪಡಿಸಿಕೊಂಡರು, ಅದರ ಗೋಡೆಗಳನ್ನು ಕೆಡವಿದರು ಮತ್ತು ಅದನ್ನು ಸಂಪುರ್ಣವಾಗಿ ಸುಟ್ಟು ಹಾಕಿದರು. ಅವರು ಬಹುತೇಕ ಜನರನ್ನು ಸೆರೆಹಿಡಿದು ಬಾಬೆಲಿಗೆ ಕರೆದುಕೊಂಡು ಹೋದರು. ಆದರೆ ದೇವರು ತನ್ನ ಜನರನ್ನು ಎಂದಿಗೂ ತೊರೆಯಲಿಲ್ಲ. ಆತನು ಯೆರೆಮಿಯನ ಮೂಲಕ ಹೇಳಿಸಿದ್ದೇನೆಂದರೆ, ದೇವರು ಬಾಬೆಲಿಗೆ ನೀತಿವಂತರನ್ನು ಕಳುಹಿಸಿದ್ದಾನೆ ಮತ್ತು ನಾನು ಅವರೊಂದಿಗೆ ಇರುತ್ತೇನೆ (ಯೆರೆಮಿಯ 24:5-7). ನಾವು ವೀರರಲ್ಲಿ ಮುಂದೆ ಬರುವ ಪಾಠಗಳಲ್ಲಿ ಅದನ್ನು ನೋಡೋಣ.

ಬಾಬೆಲಿನವರು ಯೆರೂಸಲೇಮನ್ನು ವಶಪಡಿಸಿಕೊಂಡಾಗ, ಯೆರೆಮಿಯನನ್ನು ಬಿಡುಗಡೆ ಮಾಡಿದರು. ದೇವರು ತನ್ನ ವಾಗ್ದಾನದಂತೆ ಅವನನ್ನು ಕಾಪಾಡಿದನು. ಕಳೆದ ಪಾಠದಲ್ಲಿ ಯೆಶಾಯನಂತೆ, ಯೆರೆಮಿಯನು ಈ ಲೋಕದ ಕುರಿತು ಚಿಂತಿಸಲಿಲ್ಲ ಬದಲಾಗಿ ದೇವರು ತನಗೆಂದು ಸಿದ್ಧಮಾಡಿರುವ ಹೊಸ ಮನೆಯ ಮೇಲೆ ದೃಷ್ಟಿಯುಳ್ಳವನಾಗಿದ್ದನು (ಇಬ್ರಿಯ 11:13-16).

ನಾನು ದೇವರ ಸತ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳುವ ಮತ್ತು ದೇವರ ವಾಕ್ಯಗಳನ್ನು ಸಾರುವ ಹಾಗೂ ಹಿಂಸೆಗಳನ್ನು ಸಹಿಸಿ ಕೊಳ್ಳುವ ಆಯ್ಕೆಯನ್ನು ಮಾಡಿಕೊಳ್ಳುತ್ತೇನೆ.

### ವಿಶ್ಲೇಷಣೆ




ಆದರೆ ದೇವರು ಅವನೊಂದಿಗೆ ಮಾತನಾಡುವದನ್ನು ಮುಂದುವರೆಸಿದನು, ಆದ್ದರಿಂದ ಅವನು ದೃಢವಾದನು ಮತ್ತು ಅವನಿಗೆ ಯಾರು ಏನೇ ಹೇಳಿದರೂ ಚಿಂತಿಸದೆ ದೇವರ ವಾಕ್ಯ ಸಾರುವದನ್ನು ಮುಂದುವರೆಸಿದನು, ಯಾಕಂದರೆ ದೇವರು ನನ್ನೊಂದಿಗಿದ್ದಾನೆ ಎಂಬದು ಅವನಿಗೆ ಗೊತ್ತಿತ್ತು.

### ಚಟುವಟಿಕೆ

ಪ್ರತಿಯೊಂದು ಕುರಿ ತನ್ನ ಜೋಡಿಯೊಂದಿಗೆ

ಶಿಕ್ಷಕ ವಿವಿಧ ನಿಯಮಗಳನ್ನು ಕರೆಯುವನು ಮತ್ತು ಮಕ್ಕಳು ತಾವಾಗಿಯೇ ಅದರ ಪ್ರಕಾರ ಮುಂದಕ್ಕೆ ಹೋಗಬೇಕು. ಉದಾಹರಣೆಗೆ, ಶಿಕ್ಷಕ “ಬಿಳಿ ಮತ್ತು ಬಣ್ಣದ ಅಂಗಿಗಳು” ಎಂದು ಕರೆಯುವನು ಆಗ ಬಿಳಿ ಅಂಗಿ ಧರಿಸಿಕೊಂಡಿರುವ ಮಕ್ಕಳೆಲ್ಲರೂ ಕೋಣೆಯ ಒಂದು ಕಡೆಗೆ ಮತ್ತು ಬಣ್ಣದ ಅಂಗಿಗಳನ್ನು ಧರಿಸಿಕೊಂಡಿರುವ ಮಕ್ಕಳೆಲ್ಲರೂ ಕೋಣೆಯ ಇನ್ನೊಂದು ಕಡೆಗೆ ಹೋಗಬೇಕು. ಬೇರೆ ನಿಯಮಗಳು ಯಾವುದೆಂದರೆ ಉದ ಜಡೆ ಇರುವವರು ಮತ್ತು ಚಿಕ್ಕ ಜಡೆಯಿರುವವರು, ಜನವರಿ ತಿಂಗಳಿನಿಂದ ಜೂನ್ ತಿಂಗಳ ತನಕ ಹುಟ್ಟು ಹಬ್ಬ ಇರುವವರು ಮತ್ತು ಜುಲೈ ತಿಂಗಳಿನಿಂದ ಡಿಸೆಂಬರ್ ತನಕ ಹುಟ್ಟು ಹಬ್ಬ ಇರುವವರು, ಹೀಗೆ ಮಕ್ಕಳ ವಯಸ್ಸು ಅಥವಾ ಪ್ರದೇಶದ ಆಧಾರದ ಮೇರೆಗೆ ನೀವು ಉದಾಹರಣೆಗಳನ್ನು ಕೊಡಬಹುದು. ಇದಲ್ಲದೆ ನೀವು ಯಾವ ಚಟುವಟಿಕೆಯನ್ನು ಅಭಿವೃದ್ಧಿಪಡಿಸಲು ಬಯಸುವಿರೋ ಅದಕ್ಕನುಸಾರ ವಿಭಜನೆಯ ನಿಯಮವನ್ನೂ ಜಾರಿಗೊಳಿಸಬಹುದು.




### ಟೈಮ್ ಲೈನ್

ಯೆರೆಮಿಯನು ಯಾವ ವರ್ಷದಲ್ಲಿ ಜನಿಸಿದನು? ಉತ್ತರ: ಬಹುಶಃ ಕ್ರಿ.ಶ. 643 ರಲ್ಲಿ.

ಯೆರೆಮಿಯನು ಯಾವ ವರ್ಷದಲ್ಲಿ ಮೃತಪಟ್ಟನು? ಉತ್ತರ: ಬಹುಶಃ ಕ್ರಿ.ಶ. 570 ರಲ್ಲಿ.

### ಒಗಟಿನ ಉತ್ತರಗಳು







## ಪ್ರಶ್ನೆಗಳು ಮತ್ತು ಉತ್ತರಗಳು


**(ಹಿರಿಯ ವಿದ್ಯಾರ್ಥಿಗಳಿಗೆ)**

1. ಕ್ರೈಸ್ತೀಯ ಜೀವಿತ ಸುಲಭವಾಗಿದೆ, ಅಲ್ಲವೇ? ವಿಶ್ವಾಸಿಗಳಿಗೆ ಯಾವಾಗಲೂ ದೇವರ ರಕ್ಷಣೆ ಸಿಗುತ್ತದೆ ಅಲ್ಲವೇ?
   ಖಂಡಿತವಾಗಿಯೂ ದೇವರು ನಮ್ಮನ್ನು ಕಾಪಾಡುತ್ತಾನೆ, ಆದರೆ ಇದರ ಅರ್ಥ ಜೀವಿತವು ಸುಲಭ ಎಂಬದಾಗಿ ಅಲ್ಲ. ನಾವು ಈ ಪಾಠದಲ್ಲಿ ನೋಡಿರುವ ಹಾಗೆ ಗೇಲಿಗಳು, ತಪ್ಪಾಗಿ ಶಿಕ್ಷೆಗಳು, ಸೆರೆಮನೆಗಳಿಗೆ ಹಾಕುವದು ಇತ್ಯಾದಿ ಕಾರ್ಯಗಳು ಇರುತ್ತವೆ, ಆದರೆ ಅವು ಯಾವು ಮುಖ್ಯವಲ್ಲ. ದೇವರು ಅವೆಲ್ಲವುಗಳನ್ನು ಅನುಮತಿಸುತ್ತಾನೆ, ಯಾಕಂದರೆ ದೇವರಿಗೆ ನಮ್ಮ ಶಾರೀರಿಕ ಜೀವಿತಕ್ಕಿಂತ ಆತ್ಮೀಕ ಜೀವಿತ ಪ್ರಾಮುಖ್ಯವಾದದ್ದಾಗಿದೆ. ಆದರೆ ದೇಶಕ್ಕಾಗಿ ದೊಡ್ಡದಾಗಿರುವ ಕಾರ್ಯ ಬಹಳ ಪ್ರಾಮುಖ್ಯವಾಗಿದೆ, ಇದರೊಳಗೆ ಇಲ್ಲಿ ಜೀವಿಸುವ ಕ್ರೈಸ್ತರಿಗೆ ಅತ್ಯಂತ ಕಷ್ಟಕರ ಕಾರ್ಯವೂ ಇರುತ್ತದೆ.
2. ಸೇವೆಯಲ್ಲಿ ದೇವರ ಕರೆಯನ್ನು ಹೊಂದಲು ನೀವು ಎಷ್ಟು ಚಿಕ್ಕವರಾಗಿರಬೇಕು?
   ಯೆರೆಮಿಯನನ್ನು ದೇವರು ಬಹುಶಃ ಅವನ 10 ರಿಂದ 17 ವರ್ಷಗಳ ನಡುವೆ ಕರೆದಿರಬಹುದು. ದೇವರು ಈಗಲೇ ನಿಮ್ಮನ್ನು ಕರೆಯಲು ಶಕ್ತನಾಗಿದ್ದಾನೆ ಎಂಬ ರೀತಿಯಲ್ಲಿ ನೀವು ನಿಮ್ಮ ವಿದ್ಯಾರ್ಥಿಗಳೊಂದಿಗೆ ಮಾತನಾಡಿರಿ.
3. ನಿಮಗೆ ಶಾಲೆಯಲ್ಲಿ ಇಂದು ಯಾವ ರೀತಿಯ ವಿರೋಧ ಎದುರಾಯಿತು?
   ಮಕ್ಕಳು ಎಲ್ಲವನ್ನು ಸಹಿಸಿಕೊಳ್ಳಬೇಕು ಎಂಬದನ್ನು ವಿವರಿಸಲು ಸಹಾಯವಾಗುವ ಹಾಗೆ ವಿವಿಧ ರೀತಿಯಲ್ಲಿ ಮಾತನಾಡಿರಿ. ಉದಾಹರಣೆಗೆ: ಯಾರೋ ನಿಮ್ಮ ಊಟವನ್ನು ತೆಗೆದುಕೊಂಡು ಹೋಗುತ್ತಿರಬಹುದು, ಶಿಕ್ಷಕಿ ನಿಮಗೆ ಕಡಿಮೆ ಅಂಕ ಕೊಡುತ್ತಿರಬಹುದು, ನಿಮ್ಮ ತಂದೆ ಕೆಲಸವನ್ನು ಕಳೆದುಕೊಳ್ಳಬಹುದು, ನಿಮ್ಮೊಂದಿಗೆ ವಿರಾಮದ ಸಮಯದಲ್ಲಿ ಯಾರೂ ಆಟ ಆಡದೆ ಇರಬಹುದು, ಶಾಲೆಯಿಂದ ಮನೆಗೆ ಬರುವ ಸಮಯದಲ್ಲಿ ಹುಡುಗರು ನಿಮಗೆ ತೊಂದರೆ ಮಾಡುತ್ತಿರಬಹುದು, ಇತ್ಯಾದಿ.

## ಆಟ

ಬಲೂನ್ ಬೇಟೆ

ಪ್ರತಿಯೊಬ್ಬ ಆಟಗಾರನಿಗೆ ಗಾಳಿ ತುಂಬಿರುವ ಬಲೂನ್ ಕೊಡಿರಿ ಮತ್ತು ದಾರದಿಂದ ಅವನ ಕಾಲಿಗೆ ಕಟ್ಟಿರಿ. ಎಲ್ಲಾ ಬಲೂನ್ ಗಳಿಗೆ ಸಮನಾಗಿ ಗಾಳಿ ತುಂಬಿಸಿರಿ. ಆಟದ ಗುರಿ ಏನೆಂದರೆ ತಮ್ಮ ಬಲೂನನ್ನು ಒಡೆಯಲು ಯಾರಿಗೂ ಅವಕಾಶ ಕೊಡದೆ ಇತರರ ಬಲೂನ್ ಒಡೆದುಹಾಕುವದಾಗಿದೆ. ಸಮಯವನ್ನು ನಿಗದಿಪಡಿಸಿರಿ ಅಥವಾ ಮ್ಯೂಸಿಕ್ ಹಾಕಿರಿ, ಮತ್ತು ಸಮಯವು ಮುಗಿದ ನಂತರ, ಯಾರು ತಮ್ಮ ಬಲೂನ್ ಕಾಪಾಡಿಕೊಂಡಿರುತ್ತಾರೋ ಅವರು ಗೆಲ್ಲುತ್ತಾರೆ.



## ಹಾಜರಾತಿ

ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಯೆರೆಮಿಯ



### ಹೋಮ್ ವರ್ಕ್

ಈ ವಾರದ ಪ್ರತಿದಿನ ಕೆಲವು ನಿಮಿಷಗಳಾದರೂ ಸತ್ಯವೇದ ಓದಿರಿ. ಯೋಹಾನನ ಸುವಾರ್ತೆ ಅಥವಾ ಕೀರ್ತನೆಗಳ ಪುಸ್ತಕದಿಂದ ಪ್ರಾರಂಭಿಸಿರಿ. ಒಂದುವೇಳೆ ನಿಮಗೆ ಓದಲು ಬಾರದೆ ಇದ್ದರೆ ನಿಮಗಾಗಿ ಓದುವಂತೆ ಇತರರಿಗೆ ಹೇಳಿರಿ. ಒಂದುವೇಳೆ ನೀವು ಒಂದು ದಿನ ತಪ್ಪಿಸಿದರೆ, ಅದಕ್ಕಾಗಿ ನಿಮ್ಮನ್ನು ಶಿಕ್ಷಿಸಿಕೊಳ್ಳಬೇಡಿರಿ. ಪ್ರತಿದಿನ ಓದಲು ಪ್ರಯತ್ನಿಸಿರಿ. ಒಂದುವೇಳೆ ನೀವು ಪ್ರತಿದಿನ ಸತ್ಯವೇದ ಓದುತ್ತಾ ಇರುವದಾದರೆ, ಒಳ್ಳೇದು! ಓದುವದನ್ನು ಮುಂದುವರೆಸಿರಿ.

ಓದಿರಿ

ದಿನ 1: ದಾನಿಯೇಲ 3:1-6

ದಿನ 2: ದಾನಿಯೇಲ 3:7-12

ದಿನ 3: ದಾನಿಯೇಲ 3:13-18

ದಿನ 4: ದಾನಿಯೇಲ 3:19-25

ದಿನ 5: ದಾನಿಯೇಲ 3:26-30

# 9. ಬೆಲೆ ತೆತ್ತಿರಿ



ಸತ್ಯವೇದ ಕಥೆ: ಶದ್ರಕ್, ಮೇಷಕ್ ಮತ್ತು ಅಬೇದ್ನೆಗೋ

ದಾನಿಯೇಲ 3

### ಕಂಠಪಾಠ ವಚನ

**ಹಿಬ್ರಿಯರಿಗೆ 11:16 ಆದರೆ, ಅವರು ಬಯಸಿದ್ದು ಶ್ರೇಷ್ಠವಾದ ನಾಡನ್ನು, ಅಂದರೆ ಸ್ವರ್ಗವನ್ನು. ಆದ್ದರಿಂದಲೇ ದೇವರು, "ಅವರ ದೇವರು," ಎಂದು ಕರೆಸಿಕೊಳ್ಳಲು ಅವಮಾನಪಡಲಿಲ್ಲ. ಅದಕ್ಕೆ ಬದಲು, ಅವರಿಗಾಗಿ ಒಂದು ನಗರವನ್ನು ಸಜ್ಜುಗೊಳಿಸಿದ್ದಾರೆ.**

### ಕಥೆಯ ಅವಶ್ಯಕತೆ



ಮಾರ್ಥ ತರಗತಿಯಲ್ಲಿ ಬಹಳ ಜಾಣೆಯಾಗಿದ್ದಳು. ಆಚರಣೆಗಾಗಿ ಮನೆಯಲ್ಲಿ ಒಂದು ಪ್ರಾಜೆಕ್ಟ್ ಮಾಡುವಂತೆ ಒಂದುದಿನ ಟೀಚರ್ ಅವರಿಗೆ ಹೇಳಿದರು. ಅವರ ಆಚರಣೆಯು ಸತ್ಯವೇದವು ಹೇಳುವ ವಿಷಯಕ್ಕೆ ವಿರುದ್ಧವಾದದ್ದಾಗಿತ್ತು. ಶಿಕ್ಷಕಿ ಹೇಳುತ್ತಿರುವ ವಿಷಯ ತನ್ನ ನಂಬಿಕೆಗೆ ವಿರುದ್ಧವಾಗಿದೆ ಎಂಬದು ಮಾರ್ಥಳಿಗೆ ಮನವರಿಕೆಯಾದಾಗ, ನಾನು ಅಭ್ಯಾಸ ಮಾಡುವದಿಲ್ಲ ಯಾಕಂದರೆ ಅದು ಸರಿಯಿಲ್ಲ ಎಂಬದಾಗಿ ಆಕೆ ತನ್ನ ಶಿಕ್ಷಕಿಗೆ ಹೇಳಿದಳು. ಒಂದುವೇಳೆ ನೀನು ಸಿದ್ಧಮಾಡಿಕೊಂಡು ಬರಲಿಲ್ಲವೆಂದರೆ ನಿನಗೆ ಕಡಿಮೆ ಅಂಕ ಕೊಡುವೆನು ಎಂಬದಾಗಿ ಶಿಕ್ಷಕಿ ಹೇಳಿದಳು.

### ಮುಖ್ಯ ಪಾಠ

ಕಳೆದ ವಾರ ನಾವು ಯೆಹೂದವು ಬಾಬೆಲಿಗೆ ಹೇಗೆ ಸೆರೆಯಾಗಿ ಹೋಯಿತು ಎಂಬದನ್ನು ನೋಡಿಕೊಂಡೆವು. ದೇವರು ಅವರೊಂದಿಗೆ ಅಲ್ಲಿ ಅದ್ಭುತವಾದ ರೀತಿಯಲ್ಲಿ ಹೇಗಿದ್ದನು ಎಂಬದನ್ನು ಇಂದು ನೋಡಿಕೊಳ್ಳೋಣ. ಶದ್ರಕ್, ಮೇಷಕ್ ಮತ್ತು ಅಬೆದ್ನೆಗೋ ಎಂಬ ಮೂರು ಯೆಹೂದ್ಯ ಯೌವನಸ್ಥರನ್ನು ಬಾಬೆಲಿಗೆ ಕರೆದುಕೊಂಡು ಬಂದರು ಮತ್ತು ಅವರಿಗೆ ಬಾಬೆಲ್ ಪ್ರಾಂತ್ಯವನ್ನು ನೋಡಿಕೊಳ್ಳುವ ಕೆಲಸವನ್ನು ಒದಗಿಸಲಾಯಿತು. ಅರಸನು ತನ್ನ ದೊಡ್ಡ ಪ್ರತಿಮೆಯನ್ನು ನಿಲ್ಲಿಸಿ ತನ್ನ ನಾಯಕರೆಲ್ಲರೂ ಅದಕ್ಕೆ ಅಡ್ಡಬೀಳಬೇಕೆಂದು ತೀರ್ಮಾನಿಸಿದನು, ಹಾಗೆಯೇ ಯಾರಾದರು ಅದಕ್ಕೆ ಅವಿಧೇಯರಾದರೆ ಅವರನ್ನು ಬೆಂಕಿಯ ಕುಲುಮೆಗೆ ಹಾಕಬೇಕು ಎಂಬದಾಗಿ ಆಜ್ಞಾಪಿಸಿದನು. ನಮ್ಮನ್ನು ಹೆದರಿಸುವ ಮೂಲಕ ನಮ್ಮ ನಂಬಿಕೆಗಳನ್ನು ಬದಲಾಯಿಸಬಹುದೆಂದು ಜನರು ಯೋಚಿಸುತ್ತಾರೆ. ನಾವು ಬೆಲೆ ತೆತ್ತಲು ಸಿದ್ಧರಾಗಿರುತ್ತೇವೆ ಎಂಬದನ್ನು ಅವರು ನಿರೀಕ್ಷಿಸುವದಿಲ್ಲ. ಆದರೆ ನಮ್ಮ ದೇವರು ಅವರ ದೇವರುಗಳಂತೆ ಅಲ್ಲದೆ ಈಗಾಗಲೇ ಮಾರ್ಗವನ್ನು ಸಿದ್ಧಮಾಡಿದ್ದಾನೆ ಮತ್ತು ನಮಗಾಗಿ ಕ್ರಯವನ್ನು ಪಾವತಿಸಿದ್ದಾನೆ, ದೇವರಿಗಾಗಿ ಈ ಕಾರ್ಯಗಳನ್ನು ಮಾಡುವ ಅವಕಾಶವು ನಮಗೆ ದೊರೆಯುವಾಗ ನಾವು ಅತ್ಯಂತ ಸಂತೋಷವುಳ್ಳವರಾಗಿರಬೇಕು.

ಶದ್ರಕ್, ಮೇಷಕ್ ಮತ್ತು ಅಬೆದ್ನೆಗೋರವರು ತಮ್ಮ ದೇವರಿಗೆ ನಂಬಿಗಸ್ತರಾಗಿರುವ ಮತ್ತು ಬೆಲೆ ತೆತ್ತುವ ಆಯ್ಕೆ ಮಾಡಿಕೊಂಡನು. ದೇವರು ನಮ್ಮನ್ನು ಕಾಪಾಡುತ್ತಾನೆ ಎಂಬದು ಅವರಿಗೆ ಗೊತ್ತಿತ್ತು ಆದರೆ ದೇವರು ತಮ್ಮನ್ನು ಭೂಮಿಯ ಮೇಲೆ ಅಥವಾ ಪರಲೋಕದ ಮೇಲೆ ಕಾಪಾಡುತ್ತಾನೇನೋ ಎಂಬದು ಗೊತ್ತಿರಲಿಲ್ಲ. ಸೇವಕರು ಅವರನ್ನು ಅವರ ಬಟ್ಟೆ ಹಾಗೂ ಎಲ್ಲವುಗಳೊಂದಿಗೆ ಕುಲುಮೆಗೆ ಹಾಕಿದರು, ಬಟ್ಟೆಗಳೂ ಬಹಳ ಬೆಲೆಯುಳ್ಳವುಗಳಾಗಿದ್ದವು. ಇಂದು, ಜನರು ಯೇಸು ಕ್ರಿಸ್ತನ

ಮಾತುಗಳನ್ನು ನಿರಾಕರಿಸುವಾಗ, ಯೇಸು ಕ್ರಿಸ್ತನ ಅಧ್ಭುತಕಾರ್ಯಗಳು ಹಾಗೂ ಆತನಲ್ಲಿದ್ದ ದೇವರ ಅಧಿಕಾರವನ್ನು ನಿರಾಕರಿಸಿದಂತೆಯೇ, ದೇವರು ನಿಮ್ಮ ಜೀವಿತದಲ್ಲಿ ಮಾಡಿರುವ ಎಲ್ಲಾ ಒಳ್ಳೆಯ ಕಾರ್ಯಗಳನ್ನೂ ನಿರಾಕರಿಸುತ್ತಾನೆ (ಮತ್ತಾಯ 12:24). ಆದರೆ ಅವರು ಏನು ಆಲೋಚಿಸುತ್ತಾರೆ ಎಂಬದು ಮುಖ್ಯವಲ್ಲ ಯಾಕಂದರೆ ನಿಮ್ಮ ವಿಷಯದಲ್ಲಿ ದೇವರ ಅಭಿಪ್ರಾಯ ಏನು ಎಂಬದು ಪ್ರಾಮುಖ್ಯವಾಗಿದೆ. ಆತನು ನಿಮ್ಮ ಮೂಲಕ ಮಾಡುತ್ತಿರುವ ಎಲ್ಲಾ ಒಳ್ಳೆಯ ಕಾರ್ಯಗಳು, ನೀವು ಬಿಳೀ ವಸ್ತ್ರಗಳನ್ನು ಧರಸಕೊಂಡಿರುವ ಹಾಗೆ ನಿಮ್ಮನ್ನು ನೋಡುವವುಗಳಾಗಿವೆ (ಪ್ರಕಟನೆ 19:8).

ಅವರನ್ನು ಕುಲುಮೆಗೆ ಬೀಳದಂತೆ ಕಾಪಾಡುವ ಬದಲು, ದೇವರು ಅವರನ್ನು ಕುಲುಮೆಯ ಒಳಗೆ ಕಾಪಾಡಿದನು. ಇದೇ ಪ್ರಕಾರ, ದೇವರು ಕೆಲವೊಮ್ಮೆ ಕಷ್ಟದ ಪರಿಸ್ಥಿತಿಗಳನ್ನು ಅನುಮತಿಸುತ್ತಾನೆ ಮತ್ತು ಅವುಗಳ ಮಧ್ಯದಲ್ಲಿಯೇ ನಿಮ್ಮನ್ನು ಕಾಪಾಡುತ್ತಾನೆ. ಬೆಂಕಿಯು ಹಗ್ಗಗಳನ್ನು ಸುಟ್ಟು, ಅವರನ್ನು ಸುಡದ ಹಾಗೆಯೇ, ನಿಮ್ಮ ಹೃದಯವನ್ನು ಬದಲಾಯಿಸಲು ದೇವರು ಹೊರಗಿನ ಪರಿಸ್ಥಿತಿಯನ್ನು ಉಪಯೋಗಿಸುತ್ತಾನೆ ಮತ್ತು ಒಳಗಿನಿಂದ ನಿಮಗೆ ಸ್ವಾತಂತ್ರ್ಯವನ್ನು ಕೊಡುತ್ತಾನೆ. ನೀವು ಸ್ವತಂತ್ರರಾಗಿರಬೇಕೆಂದು ದೇವರು ಬಯಸುತ್ತಾನೆ (ಗಲಾತ್ಯ 5:1).

ಕಷ್ಟದ ಪರಿಸ್ಥಿತಿಗಳಲ್ಲಿ ದೇವರೊಂದಿಗಿನ ಹತ್ತಿರ ಸಂಬಂಧದ ಆಶೀರ್ವಾದವನ್ನು ನೆನೆಪು ಮಾಡಿಕೊಳ್ಳಿರಿ? ಇದನ್ನು ನಾವು ಇಲ್ಲಿ ಮತ್ತೆ ನೋಡುತ್ತೇವೆ ಯಾಕಂದರೆ ದೇವರು ಅವರೊಂದಿಗೆ ಬೆಂಕಿಯೊಳಗೆ ಇದ್ದನು. ಇದೇ ಪ್ರಕಾರ, ಯೇಸು ಕ್ರಿಸ್ತನು ನಿಮಗಾಗಿ ದೊಡ್ಡ ಕ್ರಯವನ್ನು ಕೊಟ್ಟಿದ್ದಾನೆ ಮತ್ತು ನಿಮ್ಮ ಪರಿಸ್ಥಿತಿಯಲ್ಲಿ ಆತನು ನಿಮ್ಮೊಂದಿಗೆ ಇರುವನು.

ನಿಮ್ಮನ್ನು ಹೆದರಿಸುವ ಜನರಿಂದ ದೂರ ಇರುವ ಶೋಧನೆಯು ಎದುರಾಗುತ್ತಲೇ ಇರುತ್ತದೆ. ಆದರೆ ಶದ್ರಕ್, ಮೇಷಕ್ ಮತ್ತು ಅಬೆದ್ನೆಗೋರವರು ಬೆಂಕಿಯಿಂದ ಹೊರಗೆ ಬಂದಾಗ, ಜನರೆಲ್ಲರೂ ಅವರನ್ನು ಮುತ್ತಿಕೊಂಡು, ಅದ್ಭುತಕಾರ್ಯವನ್ನು ನೋಡಿದರು ಮತ್ತು ದೇವರನ್ನು ಸ್ತುತಿಸಿದರು. ಅವರ ಮೇಲೆ ಹೊಗೆಯ ವಾಸನೆಯೂ ಇರಲಿಲ್ಲ! ಇದೇ ಪ್ರಕಾರ, ನಿಮ್ಮನ್ನು ಯಾರು ಹೆದರಿಸುತ್ತಾರೋ ಅವರು ನಿಮ್ಮ ಹತ್ತಿರಕ್ಕೆ ಬರುವಾಗ ನಿಮ್ಮಲ್ಲಿ ದೇವರ ಪ್ರಸನ್ನತೆಯ "ಸುವಾಸನೆ" ಹಾಗೂ ಸ್ವಾತಂತ್ರ್ಯವನ್ನು ನೋಡಲು ಸಾಧ್ಯವಾಗುತ್ತದೆ.

ಒಂದುವೇಳೆ ಅವರು ಬೆದರಿಕೆಗಳಿಗೆ ಹೆದರಿಕೊಂಡಿದ್ದರೆ, ಅದ್ಭುತವಾದ ಈ ಕಥೆ ಸಂಭವಿಸುತ್ತಿರಲಿಲ್ಲ. ದೇವರು ಆ ಪರಿಸ್ಥಿತಿಯಲ್ಲಿ ಏನು ಮಾಡುತ್ತಾನೆ ಎಂಬದು ಅವರಿಗೆ ಗೊತ್ತಿರಲಿಲ್ಲವಾದರೂ, ಅವರು ಕ್ರಯವನ್ನು ಪಾವತಿಸಲು ಸಿದ್ಧರಾಗಿದ್ದರು. ಅವರು ಪರಲೋಕವನ್ನು ನೋಡಿದರು ಮತ್ತು ದೇವರ ಅಭಿಪ್ರಾಯ ಅತ್ಯಂತ ಪ್ರಾಮುಖ್ಯವೆಂದು ಯೋಚಿಸಿದರು.

ದೇವರನ್ನು ಹಿಂಬಾಲಿಸುತ್ತಾ ಕ್ರಯವನ್ನು ಪಾವತಿಸುವ ಆಯ್ಕೆಯನ್ನು ನಾನು ಮಾಡಿಕೊಳ್ಳುತ್ತೇನೆ.




### ವಿಶ್ಲೇಷಣೆ

ಆದರೂ ನಾನು ಭಾಗಿಯಾಗುವದಿಲ್ಲ, ನೀವು ನನಗೆ ಕಡಿಮೆ ಅಂಕ ಕೊಟ್ಟರೂ ಪರವಾಗಿಲ್ಲ ಎಂದು ಮಾರ್ಥ ಹೇಳಿದಳು.

### ಚಟುವಟಿಕೆ

ಜೇಡರ ಬಲೆ



ನಗು ತರಿಸುವ ಈ ಚಟುವಟಿಕೆಯು ನಗು ತರಿಸುವ ಕಥೆಗೆ ಮುನ್ನಡೆಸುತ್ತದೆ. ಮಕ್ಕಳೆಲ್ಲರನ್ನು ವೃತ್ತಾಕಾರದಲ್ಲಿ ಕೂರಿಸುವ ಮೂಲಕ ಪ್ರಾರಂಭಿಸಿರಿ ಮತ್ತು ಒಬ್ಬ ವಿದ್ಯಾರ್ಥಿಗೆ ದಾರದ ಚೆಂಡನ್ನು ಕೊಡಿರಿ. ವಿದ್ಯಾರ್ಥಿಯು ಎರಡು ಅಥವಾ ಮೂರು ಸಾಲುಗಳಲ್ಲಿ ಕಥೆಯನ್ನು


ಪ್ರಾರಂಭಿಸಬೇಕು. ನಂತರ ವಿದ್ಯಾರ್ಥಿಯು ದಾರದ ಉಂಡೆಯ ಕೊನೆಯನ್ನು ಹಿಡಿದುಕೊಂಡು ಚೆಂಡನ್ನು ಮತ್ತೊಬ್ಬನಿಗೆ ವಿದ್ಯಾರ್ಥಿಗೆ ಎಸೆಯಬೇಕು. ಮುಂದಿನ ವಿದ್ಯಾರ್ಥಿ ಕಥೆಗೆ ಇನ್ನೊಂದು ಸಾಲು ಸೇರಿಸಬೇಕು, ತನ್ನ ಉಂಡೆಯ ಕೊನೆಯನ್ನು ಹಿಡಿದುಕೊಳ್ಳಬೇಕು ಮತ್ತು ಚೆಂಡನ್ನು ಬೇರೊಬ್ಬ ವಿದ್ಯಾರ್ಥಿಯ ಕಡೆಗೆ ಎಸೆಯಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೂ ಅವಕಾಶ ಸಿಗುವ ತನಕ ಎಸೆಯಿರಿ ಕೊನೆಗೆ ಬಲೆ ಸಿದ್ಧವಾಗುತ್ತದೆ. ನಂತರ ವಿದ್ಯಾರ್ಥಿಗಳ ಮೂಲಕ ಅದನ್ನು ಹಿಂದಕ್ಕೆ ಸುತ್ತುವ ಮೂಲಕ ಬಲೆಯನ್ನು ತೆಗೆಯಿರಿ, ಹೀಗೆ ಬಲೆ ಪೂರ್ತಿಯಾಗಿ ಮುಗಿಯುವಾಗ ಮಕ್ಕಳು ಕಥೆಗೆ ಒಂದೊಂದೇ ಸಾಲುಗಳನ್ನು ಸೇರಿಸುತ್ತಾ ಹೋಗುವರು.


## ಟೈಮ್ ಲೈನ್

ಶದ್ರಕ್, ಮೇಷಕ್ ಮತ್ತು ಅಬೆದ್ನೆಗೋರನ್ನು ಯಾವ ವರ್ಷದಲ್ಲಿ ಬೆಂಕಿಯ ಕುಲುಮೆಯೊಳಗೆ ಹಾಕಲಾಯಿತು ಮತ್ತು ಅದರಿಂದ ಬಿಡಿಸಲಾಯಿತು? ಉತ್ತರ: ಬಹುಶಃ ಕ್ರಿ.ಶ. 594 ರಲ್ಲಿ.

## ಒಗಟಿನ ಉತ್ತರಗಳು







## ಪ್ರಶ್ನೆಗಳು ಮತ್ತು ಉತ್ತರಗಳು

**(ಹಿರಿಯ ವಿದ್ಯಾರ್ಥಿಗಳಿಗೆ)**

1. **ದೇವರ ರಾಜ್ಯಕ್ಕಾಗಿ ಯಾವ ಕ್ರಯವನ್ನು ಪಾವತಿಸಲು ನೀವು ಸಿದ್ಧರಾಗಿರುವಿರಿ?**
   ಅವರೇ ಈ ವಿಷಯದ ಬಗ್ಗೆ ಚರ್ಚಿಸಲಿ. ಉದಾಹರಣೆಗಳು: ಶಾಲೆಯಲ್ಲಿ ಪ್ರಮುಖ ವಿಷಯವನ್ನು ಬದಲಾಯಿಸುವದು, ಬಾಯ್ ಫ್ರೆಂಡ್ ಅಥವಾ ಗರ್ಲ್ ಫ್ರೆಂಡ್ ಬಿಡುವದು, ಸಣ್ಣ ಸಭೆಗೆ ಹೋಗುವದು, ಬೇರೆ ಶಾಲೆಗೆ ಸೇರುವ ಸಲುವಾಗಿ ಬೇರೊಂದು ಪಟ್ಟಣಕ್ಕೆ ಹೋಗಿ ಚಿಕ್ಕಪ್ಪನ ಜೊತೆಯಲ್ಲಿ ಜೀವಿಸುವದು, ಸ್ನೇಹಿತರನ್ನು ಬಿಡುವದು, ಇತ್ಯಾದಿ.
2. **ನಾನು ಎಲ್ಲರನ್ನೂ ಪ್ರೀತಿಸಬೇಕೇ?**
   ಪ್ರೀತಿಸಲು ಆಗದಿರುವ ವಿಶೇಷ ರೀತಿಯ ವಿವಿಧ ಜನರ ಬಗ್ಗೆ ಮಾತನಾಡಿರಿ ಮತ್ತು ಒಂದುವೇಳೆ ಈ ಬೆಲೆಯನ್ನು ತೆರಬೇಕು ಎಂಬದಾಗಿ ತಿಳಿಸಿರಿ.
3. **ದೇವರು ನನ್ನಿಂದ ಏನನ್ನು ಎದುರುನೋಡುತ್ತಾನೆ?**
   ದೇವರು ನಮ್ಮ ವಿಷಯದಲ್ಲಿ ಮಾಡಿರುವ ವಿವಿಧ ಯೋಚನೆಗಳ ಬಗ್ಗೆ ಮಾತನಾಡಿರಿ. ಕೆಲವರು ತಮ್ಮ ವೃತ್ತಿಯ ಮೂಲಕ ಅಂದರೆ ಆರಕ್ಷಕರಾಗಿ, ವೈದ್ಯರಾಗಿ, ಶಿಕ್ಷಕರಾಗಿ ಲೋಕಕ್ಕೆ ಸಹಾಯ ಮಾಡಬಹುದು. ಇನ್ನೂ ಕೆಲವರು ಪೂರ್ಣಾವಧಿ ಸಭಾಪಾಲಕರಾಗಿ, ಮಿಷನರಿಗಳಗಿ ಅಥವಾ ಯಾವುದೇ ಲಾಭವಿಲ್ಲದ ಸೇವೆಯ ಕಾರ್ಯದರ್ಶಿಗಳಾಗಿ ಸೇವೆಯಲ್ಲಿ ಇರಬಹುದು. ದೇವರಿಗೆ ನಿಮ್ಮ ವೃತ್ತಿಯನ್ನು ಕೊಡುವದು ಮತ್ತು ನಿಮ್ಮ ಹೃದಯವನ್ನು ಕೊಡುವದರ ನಡುವೆಯಿರುವ ವ್ಯತ್ಯಾಸದ ಬಗ್ಗೆ ಮಾತನಾಡಿರಿ, ಹೀಗೆ ಮಾಡುವದರಿಂದ ನೀವು ದೇವರಿಗೆ ನಿಮ್ಮ ವೃತ್ತಿಯನ್ನು ಮಾತ್ರವಲ್ಲ ನಿಮ್ಮ ಇಡೀ ಜೀವಿತವನ್ನು ಕೊಡಲು ಸಾಧ್ಯವಾಗುತ್ತದೆ.

## ಆಟ


ನಗಬೇಡಿರಿ!

ತರಗತಿಯನ್ನು ಜೋಡಿಗಳನ್ನಾಗಿ ವಿಭಾಗಿಸಿರಿ. ಪ್ರತಿಯೊಂದು ಜೋಡಿಯಲ್ಲಿರುವ ಒಂದು ಮಗು ಮತ್ತೊಂದು ಮಗುವನ್ನು ನಗಿಸಲು ಪ್ರಯತ್ನಿಸಬೇಕು. ಒಂದೇ ನಿಯಮ ಎಂದರೆ ಅವರು ಇನ್ನೊಂದು ಮಗುವನ್ನು ಮುಟ್ಟಬಾರದು. ಆ ಸುತ್ತಿನಲ್ಲಿ ಅವರಿಗೆ 30 ಸೆಕೆಂಡ್ ಕೊಡಿರಿ, ಮತ್ತು ಈ ಸುತ್ತಿನಲ್ಲಿ ಯಾವ ಮಗು ನಗುವದಿಲ್ಲವೋ ಆ ಮಗು ಗೆಲ್ಲುತ್ತದೆ. ಮಕ್ಕಳನ್ನು ಅದಲು ಬದಲು ಮಾಡಿ ಮತ್ತೆ ಆಟ ಆಡಿಸಿರಿ.



## ಹಾಜರಾತಿ

ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:
ವಾಕ್ಯವನ್ನು ಓದಿರಿ




## ಹೋಮ್ ವರ್ಕ್

ಈ ವಾರ ಪರಲೋಕದ ಚಿತ್ರವನ್ನು ಬಿಡಿಸಿರಿ. ಭೂಮಿಯ ಮೇಲಿರುವ ನಿಮ್ಮ ಅಚ್ಚುಮೆಚ್ಚಿನ ವಸ್ತುಗಳ ಬಗ್ಗೆ ಆಲೋಚಿಸಿರಿ: ಕುಟುಂಬ, ಗೊಂಬೆಗಳು, ಬಟ್ಟೆಗಳು, ಸಾಕು ಪ್ರಾಣಿಗಳು, ಒಳ್ಳೆಯ ಕಾರುಗಳು, ಆಕಾಶ, ಹೂವುಗಳು ಇತ್ಯಾದಿ. ದೇವರು ಹೊಸ ಆಕಾಶ ಮತ್ತು ಭೂಮಿಯನ್ನು ಸೃಷ್ಟಿಸುವದಾಗಿ ವಾಗ್ದಾನ ಮಾಡಿದ್ದಾನೆ (ಯೆಶಾಯ 65:17). ಅದ್ಭುತ ಮತ್ತು

ಸಂತೋಷಕರವಾದ ಲೋಕವನ್ನು ಉಂಟುಮಾಡಿರುವ ಸೃಷ್ಟಿಕರ್ತನಾದ ದೇವರು ಇದಕ್ಕಿಂತಲೂ ಉತ್ತಮವಾಗಿರುವದನ್ನು ಉಂಟು ಮಾಡುತ್ತಾನೆ! ಎಲ್ಲಾ ಒಳ್ಳೆಯ ವಿಷಯಗಳು ಅದರಲ್ಲಿರುವವು ಯಾವ ಕೆಟ್ಟ ವಿಷಯವೂ ಇರುವದಿಲ್ಲ. ನಿಮ್ಮ ಭಾವಚಿತ್ರವನ್ನು ಕೋಣೆಯ ಗೋಡೆಗೆ ಅಂಟಿಸಿ, ನಿಮಗೆ ದುಃಖದ ಸಮಯಗಳು ಎದುರಾಗುವಾಗ, ಇದನ್ನು ನೆನಪಿಸಿಕೊಳ್ಳ ಬಹುದು ಮತ್ತು ಇದರ ಬಗ್ಗೆ ಯೋಚಿಸಬಹುದು.

ಓದಿರಿ

ದಿನ 1: ದಾನಿಯೇಲ 4:1-8

ದಿನ 2: ದಾನಿಯೇಲ 4:9-18

ದಿನ 3: ದಾನಿಯೇಲ 4:19-27

ದಿನ 4: ದಾನಿಯೇಲ 4:28-33

ದಿನ 5: ದಾನಿಯೇಲ 4:34-37

# 10. ನಿಮ್ಮನ್ನು ತಗ್ಗಿಸಿಕೊಳ್ಳಿರಿ



ಸತ್ಯವೇದ ಕಥೆ: ನೆಬೂಕದ್ನೇಚರ್

ದಾನಿಯೇಲ 4

## ಕಂಠಪಾಠ ವಚನ

೧ ಕೊರಿಂಥಿಯರಿಗೆ 4:7 ಇತರರಿಗಿಂತಲೂ ನಿನ್ನನ್ನು ಶ್ರೇಷ್ಠನನ್ನಾಗಿಸಿದವರು ಯಾರು? ದೇವರಿಂದ ಪಡೆಯದೆ ಇರುವುದು ನಿನ್ನಲ್ಲಿ ಯಾವುದಾದರೂ ಇದೆಯೆ? ಹೀಗೆ ಎಲ್ಲವನ್ನೂ ದೇವರಿಂದ ಪಡೆದ ಮೇಲೆ, ಪಡೆಯದವನಂತೆ ಜಂಬ ಕೊಚ್ಚಿಕೊಳ್ಳುವುದೇಕೆ?

## ಕಥೆಯ ಅವಶ್ಯಕತೆ



ಮತ್ತಾಯ ಕೆಲವು ವಾರಗಳಿಂದ  ಉತ್ತಮ ತಾಲೀಮು ನಡೆಸುತ್ತಿದ್ದನು ಮತ್ತು ತಾನೆಷ್ಟು ವೇಗವಾಗಿ ಓಡುವೆನು ಎಂಬದನ್ನು ಸಾಬೀತುಪಡಿಸಿಕೊಳ್ಳ ಬೇಕೆಂದಿದ್ದನು. ಇದರಿಂದ ಅವನ ಜೊತೆಯಲ್ಲಿ ಓದುವವರಿಗೆ ತೊಂದರೆಯಾಗುತಿತ್ತು, ಆಗ ಶಿಕ್ಷಕನು ಆತನನ್ನು ಕರೆದು ನೀನು ಮಾಡುತ್ತಿರುವ ಕಾರ್ಯ ಒಳ್ಳೇದಲ್ಲ, ನಿನ್ನನ್ನು ತಗ್ಗಿಸಿಕೊಳ್ಳಬೇಕು ಎಂಬದಾಗಿ ಬುದ್ದಿ ಮಾತು ಹೇಳಿದರು. ಆದರೆ ಮತ್ತಾಯ ಈ ಎಚ್ಚರಿಕೆಗೆ ಕಿವಿಗೊಡಲಿಲ್ಲ.

## ಮುಖ್ಯ ಪಾಠ

ಇಂದು ನಂಬಿಕೆಯ ವೀರರಲ್ಲಿ, ಒಬ್ಬ ಪ್ರಸಿದ್ಧ ಅರಸನನ್ನು ಮತ್ತು ದೇವರು ಅವನನ್ನು ಹೇಗೆ ತಗ್ಗಿಸಿದನೆಂದು ನೋಡಿಕೊಳ್ಳೋಣ. ಬಾಬೆಲಿನ ಅರಸನಾದ ನೆಬೂಕದ್ನೇಚ್ಚರನಿಗೆ ಒಂದು ಕನಸು ಬಿತ್ತು, ಅದರ ಅರ್ಥವನ್ನು ವಿವರಿಸುವಂತೆ ಅವನು ದೇವರ ಮನುಷ್ಯನಾದ ದಾನಿಯೇಲನನ್ನು ಕೇಳಿಕೊಂಡನು. ನಾವು ಮುಂದಿನ ಸಲ ದಾನಿಯೇಲನ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳೋಣ. ಕನಸಿನ ಅರ್ಥವೇನೆಂದರೆ ಅರಸನು ಹುಚ್ಚನಾಗುವನು, ಅವನು ಬುದ್ಧಿಯಿಲ್ಲದವನಾಗಿ ಪ್ರಾಣಿಗಳ ಹಾಗೆ ಹುಲ್ಲು ತಿನ್ನುವನು. ಒಂದು ವರ್ಷದ ನಂತರ, ಅರಸನಾದ ನೆಬೂಕದ್ನೇಚ್ಚರನು, ತನ್ನ ಸ್ವಂತ ಘನತೆಗಾಗಿ ಬಾಬೆಲ್ ಪಟ್ಟಣವನ್ನು ಕಟ್ಟಿರುವದಾಗಿ ಹೆಚ್ಚಳಪಟ್ಟುಕೊಂಡನು. ದೇವರು ನಿಮ್ಮನ್ನು ನಿಮ್ಮ ಜೀವಿತದಲ್ಲಿ ಸುಲಭವಾದ ಕಾರ್ಯಗಳನ್ನು ಮಾಡಲು ಉಪಯೋಗಿಸಿಕೊಳ್ಳುವಾಗ, ದೇವರು ನಮ್ಮ ಮೂಲಕ ಮಾಡುವ ಅದ್ಭುತಕಾರ್ಯಗಳು ಸುಲಭವಾಗಿ ನಮಗೆ ಗೊತ್ತಾಗುತ್ತವೆ ಮತ್ತು ಅವೆಲ್ಲವು ದೇವರಿಂದ ಬಂದಿವೆ ಎಂಬದನ್ನು ನಾವು ಮರೆತುಹೋಗುತ್ತೇವೆ. ಸತ್ಯ ಏನೆಂದರೆ ನಮ್ಮಲ್ಲಿ ಯಾರೊಬ್ಬರೂ ಇತರರಿಗಿಂತ ಉತ್ತಮರಲ್ಲ ಯಕಂದರೆ ನಮಗಿರುವ – ವರಗಳು, ಸಾಮರ್ಥ್ಯಗಳು, ತಲಾಂತುಗಳು, ಬೆಳೆಯುತ್ತಾ ದೊರೆಯುವ ತರಬೇತಿಗಳು ಮತ್ತು ನಮ್ಮ ಜೀವಿತದಲ್ಲಿ ದೊರೆಯುವ ಅವಕಾಶಗಳು – ಎಲ್ಲವೂ ದೇವರಿಂದ ಬಂದವುಗಳಾಗಿವೆ (1 ಕೊರಿಂಥ 4:7). ನನ್ನನ್ನು ಬಿಟ್ಟು ನೀವು ಏನೂ ಮಾಡಲಾರಿರಿ ಎಂಬದಾಗಿಯೂ ಯೇಸು ಕ್ರಿಸ್ತನು ನಮಗೆ ಹೇಳಿದ್ದಾನೆ (ಯೋಹಾನ 15:5). ದೇವರೇ ನೆಬುಕದ್ನೇಚ್ಚರನನ್ನು ಅರಸನನ್ನಾಗಿ ನೇಮಿಸಿದನು ಮತ್ತು ಆತನು ಬೇರೆಯವರನ್ನೂ ಸುಲಭವಾಗಿ ಅರಸನನ್ನಾಗಿ ಮಾಡಲು ಶಕ್ತನಾಗಿದ್ದಾನೆ. ನಿಮ್ಮ ಜೀವಿತದಲ್ಲಿ ಯಾವ ಉತ್ತಮವಾದ ಕಾರ್ಯಗಳನ್ನು ಮಾಡಬೇಕೆಂಬದನ್ನು ದೇವರು

ತೀರ್ಮಾನಿಸುತ್ತಾನೆ, ಅವುಗಳನ್ನು ಆತನು ಅಷ್ಟೇ ಸುಲಭವಾಗಿ ಇತರರ ಮೂಲಕವಾಗಿಯೂ ಮಾಡಲು ಶಕ್ತನಾಗಿದ್ದಾನೆ. ಅರಸನಾದ ನೆಬೂಕದ್ನೇಚ್ಚರನು ಹೆಚ್ಚಳಪಟ್ಟ ಕೂಡಲೇ, ತಾನು ಕನಸು ಕಂಡ ಹಾಗೆಯೇ ತನ್ನ ಬುದ್ಧಿಯನ್ನು ಕಳೆದುಕೊಂಡನು ಮತ್ತು ಪ್ರಾಣಿಗಳ ಹಾಗೆ ಹೊರಗೆ ಜೀವಿಸುತ್ತಿದ್ದನು ಹಾಗೂ ಹುಲ್ಲನ್ನು ತಿನ್ನುತ್ತಿದ್ದನು. ಅವನ ತಲೆಯ ಕೂದಲು ರೆಕ್ಕೆಗಳ ಹಾಗೆ ಬೆಳೆಯಿತು ಮತ್ತು ಕೈಕಾಲುಗಳ ಬೆರಳಿನ ಉಗುರುಗಳು ಪಕ್ಷಿಗಳ ಉಗುರುಗಳ ಹಾಗೆ ಬೆಳೆಯುವ ತನಕ ಹಾಗೆಯೇ ಇದ್ದನು. ನಿಮ್ಮ ಬೆರಳಿನ ಉಗುರುಗಳು ಎಷ್ಟು ನಿಧಾನವಾಗಿ ಬೆಳೆಯುತ್ತವೆ ಎಂಬದನ್ನು ಯೋಚಿಸರಿ. ಅದಕ್ಕೆ ಬಹಳ ಸಮಯ ಬೇಕಾಗುತ್ತದೆ! ನಂತರ ನಬೂಕದ್ನೇಚ್ಚರನು ಪರಲೋಕದ ಕಡೆಗ ನೋಡಿದನು ಮತ್ತು ದೇವರು ಎಲ್ಲವುಗಳ ಮೇಲೆ ನಿಯಂತ್ರವುಳ್ಳವನಾಗಿದ್ದಾನೆ ಎಂದು ತಿಳಿದುಕೊಂಡನು, ಆಗ ದೇವರು ಅವನಿಗೆ ಅವನ ರಾಜ್ಯವನ್ನು ಹಿಂದಿರುಗಿಸಿದನು ಹಾಗೂ ಅವನನ್ನು ಮತ್ತಷ್ಟು ಬಲಿಷ್ಠನನ್ನಾಗಿಸಿದನು. ಆದರೆ ನಿಮ್ಮನ್ನು ನೀವು ತಗ್ಗಿಸಿಕೊಳ್ಳಲು ಅಷ್ಟೊಂದು ಸಮಯವನ್ನು ತೆಗೆದುಕೊಳ್ಳುವ ಅವಶ್ಯಕತಯಿಲ್ಲ. ನಾವೆಲ್ಲರೂ ಪಾಪಿಗಳಾಗಿದ್ದೇವೆ, ಅಹಂಕಾರವು ನಮ್ಮನ್ನು ಸುಲಭವಾಗಿ ಪಾಪದಲ್ಲಿ ಸಿಕ್ಕಿಸುತ್ತದೆ, ವಿಶೇಷವಾಗಿ ದೇವರು ನಿಮ್ಮ ಮೂಲಕ ಅಮೋಘವಾದ ಕಾರ್ಯಗಳನ್ನು ಮಾಡುವಾಗ ನೀವು ಗರ್ವಕ್ಕೆ ಗುರಿಯಾಗುವಿರಿ! ನಿಮಗೆ ಪ್ರತಿದಿನ ಶೋಧನೆ ಎದುರಾದರೂ, ಸಾಧ್ಯವಾದಷ್ಟು ಉತ್ತಮರಾಗಿ ಪರಲೋಕವನ್ನು ನೋಡಿರಿ ಮತ್ತು ನಿಮಗಿರುವ ಎಲ್ಲಾ ಒಳ್ಳೆಯ ವರದಾನಗಳು ದೇವರು ಕೊಟ್ಟಿರುವ ಕಾಣಿಕೆ ಎಂಬದಾಗಿ ಪರಿಗಣಿಸಿರಿ (ಯಾಕೋಬ 1:17). ಸಹಾಯಕ್ಕಾಗಿ ನೀವು ದೇವರನ್ನು ಬೇಡಿಕೊಳ್ಳಬಹುದು ಯಾಕಂದರ ಆತನು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮಗೆ ಉತ್ತಮವಾದದ್ದನ್ನು ಬಯಸುತ್ತಾನೆ. ನೀವು ದೀನತಯುಳ್ಳವರಾಗಿರಲು ದೇವರು ನಿಮಗೆ ಸಹಾಯ ಮಾಡುತ್ತಾನೆ.

ದಾನಿಯೇಲನು ಅರಸನಿಗೆ ಒಂದು ಸಲಹೆಯನ್ನು ಕೊಟ್ಟನು, ನಮ್ಮನ್ನು ನಾವು ತಗ್ಗಿಸಿಕೊಳ್ಳಲು ಅದು ನಮಗೆ ಸಹಾಯ ಮಾಡುತ್ತದೆ. ದೀನರಿಗೆ ದಯೆಯನ್ನು ತೋರಿಸು ಎಂಬದಾಗಿ ದಾನಿಯೇಲನು ಅರಸನಿಗೆ ಹೇಳಿದನು. ಇತರರಿಗೆ ಹೇಗೆ ಸಹಾಯ ಮಾಡಬಹುದು ಎಂದು ಯೋಚಿಸುವಾಗ ನಿಮ್ಮಲ್ಲಿ ಅಹಂಕಾರ ಕಾಣಿಸಿಕೊಳ್ಳುವದಿಲ್ಲ. ನೀವು ನಿಮ್ಮ ಸುತ್ತಮುತ್ತಲಿನಲ್ಲಿರುವ ನಿಮ್ಮ ಸಹೋದರ ಸಹೋದರಿಯರನ್ನು ನೋಡಬಹುದು, ದೇವರು ಅವರ ಮೂಲಕ ಮಾಡುತ್ತಿರುವ ಅಮೋಘವಾದ ಕಾರ್ಯಗಳನ್ನು ಗಮನಿಸಲು ಸಾಧ್ಯವಾಗುತ್ತದೆ, ಆದರ ನಿಮ್ಮನ್ನು ನೀವು ಅವರೊಂದಿಗೆ ಹೋಲಿಸಿಕೊಳ್ಳದೆ ಅವರನ್ನು ಪ್ರೋತ್ಸಾಹಪಡಿಸಿರಿ ಹಾಗೂ ಅವರೊಂದಿಗೆ ಉಲ್ಲಾಸಪಡಿರಿ. ದೇವರು ನಮಗೆ ವಿವಿಧ ರೀತಿಯ ವರಗಳನ್ನು ಕೊಡುತ್ತಾನೆ (1 ಕೊರಿಂಥ 12:4-6), ದೇವರು ನಮ್ಮೆಲ್ಲರ ಮೂಲಕವಾಗಿಯೂ ಅಮೋಘವಾದ ಕಾರ್ಯಗಳನ್ನು ಮಾಡುತ್ತಾನೆ, ಆದರೆ ಅವೆಲ್ಲವುಗಳನ್ನು ಆತನೇ ಮಾಡಲು ಬಯಸುತ್ತಾನೆ.


ನಾನು ನನ್ನ ಜೀವಿತದಲ್ಲಿ ನನ್ನನ್ನು ತಗ್ಗಿಸಿಕೊಳ್ಳುವ ಮತ್ತು ದೇವರ ಶಕ್ತಿ ಹಾಗೂ ಅಧಿಕಾರವನ್ನು ಗುರುತಿಸಿಕೊಳ್ಳುವ ಆಯ್ಕೆಯನ್ನು ಮಾಡಿಕೊಳ್ಳುತ್ತೇನೆ.

### ವಿಶ್ಲೇಷಣೆ



ಒಂದುದಿನ ಶಾಲೆಗೆ ಬರುವ ಮೊದಲು ಬಹಳ ಜೋರಾಗಿ ಮಳೆ ಬರುತ್ತಾ ಇತ್ತು, ಮತ್ತಾಯನು ಮಳೆ ನೀರಿನಿಂದ ತನ್ನನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು ಮತ್ತು ತನ್ನ ತಲೆಯ ಕೂದಲು ಹಾಳಾಗದಂತೆ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದ್ದನು, ಆದರೆ ವೇಗವಾಗಿ ಓಡಲು ಅವನಿಗೆ ಆಗಲಿಲ್ಲ, ಅವನು ಕೋಣೆಯೊಳಗೆ ಬಂದಾಗ, ಅವನನ್ನು ನೋಡಿ ಎಲ್ಲರೂ ನಗಲು ಪ್ರಾರಂಭಿಸಿದರು. ಅವನಿಗೆ ಬಹಳ ದುಃಖವಾಯಿತು. ಆಗ ಅವನು ತನ್ನ ಜೊತೆಯಲ್ಲಿ ಓದುವವರು ಹಾಗು ಶಿಕ್ಷಕನ ಬಳಿಗೆ ಹೋಗಿ ಕ್ಷಮಾಪಣೆ ಕೇಳಿದನು ಮತ್ತು ತನ್ನ ತಲೆ ಕೂದಲು ಅಥವಾ ತನ್ನ ಓಟದ ವಿಷಯದಲ್ಲಿ ಇನ್ನೆಂದಿಗೂ ಹೆಚ್ಚಳಪಡುವದಿಲ್ಲ ಎಂಬದಾಗಿ ಹೇಳಿದನು.

## ಚಟುವಟಿಕೆ



**ಭಾವಚಿತ್ರದಂತೆ ನಟಿಸುವದು**


ತರಗತಿಯನ್ನು ತಂಡಗಳಾಗಿ ವಿಭಾಗಿಸಿರಿ ಮತ್ತು ಅವರಿಗೆ ಒಂದೊಂದು ಭಾವಚಿತ್ರವನ್ನು ಕೊಡಿರಿ. ತಂಡದವರು ಭಾವಚಿತ್ರವನ್ನು ಅಧ್ಯಯನ ಮಾಡಬೇಕು ಮತ್ತು ಭಾವಚಿತ್ರ (ಫೋಟೋ) ತೆಗೆಯುವ ಮತ್ತು ತೆಗೆದ ನಂತರ ಏನಾಗಿದೆ ಎಂಬದನ್ನು ಊಹಿಸಲು ಪ್ರಯತ್ನಿಸಬೇಕು. ಸಿದ್ಧತೆ ಮಾಡಿಕೊಳ್ಳಲು ಅವರಿಗೆ ಕೆಲವು ನಿಮಿಷಗಳನ್ನು ಕೊಡಿರಿ. ಪ್ರತಿಯೊಂದು ತಂಡವು ಭಾವಚಿತ್ರದಲ್ಲಿರುವಂತೆ ಗುಂಪಿನ ಎದುರಿನಲ್ಲಿ ಪ್ರದರ್ಶನ ಕೊಡಬೇಕು. ಯಾವ ತಂಡದವರು ಉತ್ತಮ ಪ್ರದರ್ಶನ ಕೊಡುತ್ತಾರೋ ಅವರು ಗೆಲ್ಲುತ್ತಾರೆ.

## ಟೈಮ್ ಲೈನ್

ಅರಸನಾದ ನೆಬೂಕದ್ನೇಚ್ಚರನು ಯಾವ ವರ್ಷದಲ್ಲಿ ಬುದ್ಧಿ ಭ್ರಮಣೆಯುಳ್ಳವನಾದನು? ಉತ್ತರ: ಬಹುಶಃ ಕ್ರಿ.ಶ. 570 ರಲ್ಲಿ.

## ಒಗಟಿನ ಉತ್ತರಗಳು








## ಪ್ರಶ್ನೆಗಳು ಮತ್ತು ಉತ್ತರಗಳು

**(ಹಿರಿಯ ವಿದ್ಯಾರ್ಥಿಗಳಿಗೆ)**

1. ನಾವು ನಮ್ಮ ಸ್ವಂತ ಬಲದಲ್ಲಿ ಎಲ್ಲವನ್ನೂ ಮಾಡಿದ್ದೇವೆ ಎಂದು ಹೇಳಲು ನಮ್ಮಿಂದ ಯಾಕೆ ಆಗುವದಿಲ್ಲ?

ಯಾಕಂದರೆ ಅದು ಗರ್ವವಾಗಿದೆ, ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ.

2. ದೀನತೆಯು ನನಗೆ ಹಿತಕರವಾಗಿದೆ ಹೇಗೆ?


   ಯಾಕಂದರೆ ನಾವು ನಮ್ಮನ್ನು ತಗ್ಗಿಸಿಕೊಳ್ಳುವಾಗ ದೇವರು ನಮಗೆ ಸಹಾಯ ಮಾಡುತ್ತಾನೆ. ನಾವು ಸಂಪೂರ್ಣರಾಗಿದ್ದೇವೆ ಮತ್ತು ನಾವಾಗಿಯೇ ಎಲ್ಲವನ್ನೂ ಸಾಧಿಸಿದ್ದೇವೆ ಎಂದು ನಾವು ಯೋಚಿಸುವಾಗ, ದೇವರು ನಮಗೆ ವಿರುದ್ಧವಾಗಿರುತ್ತಾನೆ!

3. ನನಗಿರುವದನ್ನು ನಾನು ಸಾಧಿಸಿಲ್ಲ ಅಥವಾ ಸಂಪಾದನೆ ಮಾಡಿಲ್ಲ ಎಂದರೆ, ಯಾರು ಅವೆಲ್ಲವುಗಳನ್ನು ಮಾಡಿದ್ದಾರೆ?

   ದೇವರು ಮತ್ತು ಕೆಲವೊಮ್ಮೆ ಇತರರು ನಮಗೆ ಸಹಾಯ ಮಾಡಿದ್ದಾರೆ ಎಂದು ನಾವು ಅರಿತುಕೊಳ್ಳಬೇಕು ಎಂಬದಾಗಿ ದೇವರು ಬಯಸುತ್ತಾನೆ. ನಮಗಿರುವ ಎಲ್ಲಾ ವರಗಳು ಮತ್ತು ಸಾಮರ್ಥ್ಯಗಳನ್ನು ದೇವರು ನಮಗೆ ಕೊಟ್ಟಿದ್ದಾನೆ. ನಮ್ಮ ತಂದೆತಾಯಿಗಳು ನಮಗೆ ಊಟವನ್ನು ಕೊಟ್ಟಿದ್ದಾರೆ, ನಾವು ಶಾಲೆಗೆ ಹೋಗಲು ಸಹಾಯ ಮಾಡಿದ್ದಾರೆ ಇತ್ಯಾದಿ. ಇತರರು ಸಹ ನಮ್ಮ ಜೀವಿತದಲ್ಲಿ ಭಾಗವಹಿಸಿದ್ದಾರೆ. ದೇವರು ನಮಗಾಗಿ ಬಾಗಿಲುಗಳನ್ನು ತೆರೆಯುತ್ತಾನೆ, ನಮ್ಮನ್ನು ಕೆಟ್ಟತನದಿಂದ ಕಾಪಾಡುತ್ತಾನೆ ಮತ್ತು ನಾವು ಏನೆಲ್ಲಾ ಆಗಿದ್ದೇವೋ ಅದಕ್ಕೆಲ್ಲಾ ಕಾರಣ ದೇವರು ನಮಗೆ ಸಹಾಯ ಮಾಡಿರುವದೇ ಆಗಿದೆ ಎಂಬದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು.

### ಆಟ

ತಪ್ಪಿಸಿಕೊಳ್ಳುವದು!



5 ಜನರ ತಂಡವನ್ನು ಮಾಡಿರಿ. ಅವರಲ್ಲಿ 4 ಮಕ್ಕಳು ತಮ್ಮ ಕೈಗಳನ್ನು ವೃತ್ತವಾಗಿ ಹಿಡಿದುಕೊಂಡು, 5ನೇ ಮಗುವನ್ನು ಮಧ್ಯದಲ್ಲಿ ಇರಿಸಿಕೊಳ್ಳಬೇಕು. ಮಧ್ಯದಲ್ಲಿರುವ ಮಗು 1 ನಿಮಿಷದೊಳಗೆ ವೃತ್ತದೊಳಗಿಂದ ಹೊರಗೆ ಬರಲು ಪ್ರಯತ್ನಿಸಬೇಕು. ಪ್ರತಿಯೊಂದು ಸುತ್ತಿನ ನಂತರ, ತಮ್ಮ ಗುಂಪಿನಲ್ಲಿರುವ ಮಕ್ಕಳು ತಮ್ಮ ಸ್ಥಾನವನ್ನು ಬದಲಿಸಬೇಕು ಮತ್ತು ಬೇರೊಂದು ಮಗು ವೃತ್ತದಿಂದ ಹೊರಗೆ ಬರಲು ಪ್ರಯತ್ನಿಸಬೇಕು. ಯಾವ ಮಕ್ಕಳು ತಮ್ಮ ವೃತ್ತದೊಳಗಿಂದ ತಪ್ಪಿಸಿಕೊಳ್ಳುತ್ತಾರೋ ಅವರು ಗೆಲ್ಲುತ್ತಾರೆ.

### ಹಾಜರಾತಿ




ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:
ಬಿದ್ದುಹೋದ ಮರ

### ಹೋಮ್ ವರ್ಕ್

ನಿಮ್ಮ ಜೀವಿತದಲ್ಲಿ ನಿಮಗೆ ದೊರೆತಿರುವ ಅವಕಾಶಗಳು ಮತ್ತು ನಿಮಗಿರುವ ಒಳ್ಳೆಯ ಕಾರ್ಯಗಳ ಬಗ್ಗೆ ಯೋಚಿಸಿರಿ. ಅವುಗಳಿಗಾಗಿ ದೇವರಿಗೆ ಸ್ತೋತ್ರ ಸಲ್ಲಿಸಿರಿ. ನಂತರದಲ್ಲಿ ನಿಮ್ಮ ಸ್ಥಾನಕ್ಕೆ ಯಾರು ಬರುತ್ತಾರೆ ಎಂಬದನ್ನು ಯೋಚಿಸಿರಿ ಅಂದರೆ ಮುಂದಿನ ವರ್ಷ ನಿಮ್ಮ ಸ್ಥಾನಕ್ಕೆ ಬರುವ ವಿದ್ಯಾರ್ಥಿಗಾಗಿ ಪ್ರಾರ್ಥನೆ ಮಾಡಿರಿ ಮತ್ತು ಆ ಸ್ಥಾನದಲ್ಲಿ ಆತನನ್ನು ಆಶೀರ್ವದಿಸುವಂತೆ ಹಾಗೂ ಆತನ ಜೀವಿತದಲ್ಲಿಯೂ ಒಳ್ಳೆಯ ಕಾರ್ಯಗಳನ್ನು ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ.

**ಓದಿರಿ**

ದಿನ 1: ದಾನಿಯೇಲ 6:1-5

ದಿನ 2: ದಾನಿಯೇಲ 6:6-9

ದಿನ 3: ದಾನಿಯೇಲ 6:10-14

ದಿನ 4: ದಾನಿಯೇಲ 6:15-20

ದಿನ 5: ದಾನಿಯೇಲ 6:21-28

# 11. ನಂಬಕೆ ಮೊದಲು



ಸತ್ಯವೇದ ಕಥೆ: ದಾನಿಯೇಲ
ದಾನಿಯೇಲ 1, 6, 9:20-23

### ಕಂಠಪಾಠ ವಚನ

೧ ಪೇತ್ರನು **2:12** ಅನ್ಯಧರ್ಮೀಯರ ಮಧ್ಯೆ ನಿಮ್ಮ ನಡತೆ ಆದರ್ಶಪ್ರಾಯವಾಗಿರಲಿ. ಅವರು ನಿಮ್ಮನ್ನು ದುಷ್ಕರ್ಮಿಗಳೆಂದು ದೂಷಿಸಿದರೂ ನಿಮ್ಮ ಸತ್ಕಾರ್ಯಗಳನ್ನು ಮೆಚ್ಚಿಕೊಂಡು ಕ್ರಿಸ್ತಯೇಸುವಿನ ಪುನರಾಗಮನದ ದಿನದಂದು ದೇವರನ್ನು ಕೊಂಡಾಡುವರು.

### ಕಥೆಯ ಅವಶಕತೆ



ಒಂದುದಿನ ಮಾರ್ಥಳ ತಂದೆ ಮನೆಗೆ ಬಹಳ ದುಃಖದಿಂದ ಬಂದರು. ನನ್ನ ಟೇಬಲ್ ಮೇಲೆ ಸತ್ಯವೇದ ಇರುವದನ್ನು ನಮ್ಮ ಮ್ಯಾನೇಜರ್ ನೋಡಿ ನನ್ನನ್ನು ಬೈದರು. ಇದಲ್ಲದೆ ಇದನ್ನೆಲ್ಲಾ ಕೆಲಸದ ಸ್ಥಳಕ್ಕೆ ತರಬಾರದು ಮತ್ತು ಅದು ಇನ್ನೆಂದಿಗೂ ಇದು ನನ್ನ ಕಣ್ಣಿಗೆ ಬೀಳಬಾರದು ಹಾಗೂ ಸತ್ಯವೇದದ ನೀವು ಯಾರೊಂದಿಗೂ ಮಾತನಾಡಬಾರದು ಎಂದು ಹೇಳಿದರು. ನಾನು ಕೆಲಸಕ್ಕೆ ಎಂದಿಗೂ ತಡವಾಗಿ ಹೋಗುವದಿಲ್ಲ, ನನ್ನ ಜವಾಬ್ದಾರಿಕೆಗಳನ್ನೆಲ್ಲಾ ಸರಿಯಾಗಿ ನಿಭಾಯಿಸುತ್ತೇನೆ ಆದರೂ ನಿನ್ನನ್ನು ಕೆಲಸದಿಂದ ತೆಗೆದುಹಾಕುತ್ತೇನೆ ಎಂದು ಅವರು ಭಯಪಡಿಸಿದ್ದಾರೆ ಎಂದು ಮಾರ್ಥಳ ತಂದೆ ಮನೆಯಲ್ಲಿದ್ದವರಿಗೆ ಹೇಳಿದರು. ಮಾರ್ಥ ಮತ್ತು ಆಕೆಯ ಕುಟುಂಬದವರೆಲ್ಲರೂ ಈ ಪರಿಸ್ಥಿತಿಗಾಗಿ ಪ್ರಾರ್ಥನೆ ಮಾಡಲು ಪ್ರಾರಂಭಿಸಿದರು, ಯಾಕಂದರೆ ತಮ್ಮ ತಂದೆಗೆ ಅನ್ಯಾಯವಾಗುತ್ತಿದೆ ಎಂಬದು ಅವರಿಗೆ ಗೊತ್ತಾಯಿತು ಮತ್ತು ಅವರು ತಮ್ಮ ಜೀವಿತದಲ್ಲಿ ದೇವರಿಗೆ ಪ್ರಥಮ ಸ್ಥಾನವನ್ನು ಕೊಡಲು ಬಯಸಿದರು.

### ಮುಖ್ಯ ಪಾಠ

ಇಂದು ನಂಬಿಕೆಯ ವೀರರ ಪಾಠದಲ್ಲಿ, ದೇವರು ಬಹಳವಾಗಿ ಉದ್ದರಿಸಿದ ವ್ಯಕ್ತಿಯ ಬಗ್ಗೆ ನಾವು ನೋಡಿಕೊಳ್ಳೋಣ. ಆಹಾ, ಎಂಥಾ ಶ್ಲಾಘನೆ! ದಾನಿಯೇಲನು ತನ್ನ ಮೊದಲನೆಯ ನಂಬಿಕೆಯನ್ನು ಕಾಪಾಡಿಕೊಂಡು ಎಲ್ಲಾ ಕಾರ್ಯವನ್ನು ಬುದ್ದಿವಂತಿಕೆಯಿಂದ ಹೇಗೆ ಮಾಡಿದನು ಎಂಬದನ್ನು ನೋಡಿಕೊಳ್ಳೋಣ.

ಬಾಬೆಲಿನವರು ಯೆರೂಸಲೇಮಿಗೆ ಮುತ್ತಿಗೆ ಹಾಕಿದಾಗ ದಾನಿಯೇಲನು ಯೌವನಸ್ಥನಾಗಿದ್ದನು. ಬಾಬೆಲಿನವರು ದಾನಿಯೇಲನನ್ನು ಮತ್ತು ಅವನ ಸ್ನೇಹಿತರನ್ನು ಬಾಬೆಲಿಗೆ ಕರೆದುಕೊಂಡು ಹೋಗಿ ಅರಸನ ಆಳ್ವಿಕೆ ಸರ್ಕಾರದಲ್ಲಿ ಕೆಲಸ ಮಾಡಲು ಅವರಿಗೆ ಬಾಬೆಲಿನ ಸಂಸ್ಕೃತಿಯನ್ನು ಕಲಿಸಿದರು. ತರಬೇತಿಯ ಸಮಯದಲ್ಲಿ, ದಾನಿಯೇಲನು ಮತ್ತು ಅವನ ಸ್ನೇಹಿತರ ಹೆಸರುಗಳನ್ನು ಬದಲಾಯಿಸಿದಾಗ ಅವನು ಏನೂ ಮಾತನಾಡಲಿಲ್ಲ. ಆದರೆ ಅವರ ಆಹಾರವನ್ನು ಬದಲಾಯಿಸಲು ಅವರು ಒಪ್ಪಲಿಲ್ಲ. ಯಾಕೆ ಎಂದು ಸತ್ಯವೇದವು ನಮಗೆ ಹೇಳುವದಿಲ್ಲ. ಬಹುಶಃ ಅವರಿಗೆ ಕೊಡಬೇಕೆಂದಿದ ಆಹಾರ ವಿಗ್ರಹಕ್ಕೆ ನೈವೇದ್ಯ ಮಾಡಿದ್ದಾಗಿರಬಹುದು ಅಥವಾ ಧರ್ಮಶಾಸ್ತ್ರದ ನಿಯಮಗಳಿಗೆ ವಿರುದ್ಧವಾಗಿ ಅದನ್ನು ಸಿದ್ಧಮಾಡಿದ್ದಿರಬಹುದು ಅಥವಾ ಧರ್ಮಶಾಸ್ತ್ರದ ಪ್ರಕಾರ ಅಶುದ್ಧವಾಗಿರುವ ಮಾಂಸವನ್ನು ಅವರಿಗೆ ಕೊಟ್ಟಿರಬಹುದು. ಕಾರಣ ಏನೇ ಇದ್ದರೂ,


ದಾನಿಯೇಲನು ತನ್ನ ನಂಬಿಕೆಗೆ ಮೊದಲ ಆದ್ಯತೆಯನ್ನು ಕೊಟ್ಟನು. ಅದೇ ಸಮಯದಲ್ಲಿ ಅವನು ಕಾಯಿಪಲ್ಯಗಳನ್ನು ತಿಂದರೂ ಆರೋಗ್ಯವಾಗಿದ್ದನು ಮತ್ತು ದೇವರು ಅವನಿಗೆ ಮತ್ತು ಅವನ ಸ್ನೇಹಿತರಿಗೆ ಎಲ್ಲರಿಗಿಂತ ವಿಶೇಷವಾದ ಜ್ಞಾನ ಹಾಗು ತಿಳುವಳಿಕೆಯನ್ನು ಕೊಟ್ಟನು. ದಾನಿಯೇಲನು ಕನಸಿನ ಅರ್ಥಗಳನ್ನು ಹೇಳುತ್ತಿದ್ದನು ಮತ್ತು ಬಾಬೆಲ್ ಸಾಮ್ರಾಜ್ಯದ ನಂತರ ಮೇದ್ಯ ಮತ್ತು ಪಾರಸಿಯ ಅರಸರ ಬಳಿ ಬುದ್ಧಿವಂತಿಕೆಯಿಂದ ಕೆಲಸ ಮಾಡುತ್ತಿದ್ದನು.
ಅನೇಕ ವರ್ಷಗಳ ನಂತರ, ದಾನಿಯೇಲನು ದರ್ಯಾವಷನಂಬ ಹೊಸ ಅರಸನ ಬಳಿ ಕೆಲಸ ಮಾಡುತ್ತಿದ್ದನು. ಅವನು ತನ್ನ ಕೆಲಸಗಳಲ್ಲಿ ನಂಬಿಗಸ್ತನಾಗಿದ್ದರಿಂದ ದರ್ಯಾವೇಷನು ಅವನನ್ನು ತನ್ನ ಇಡೀ ಸಾಮ್ರಾಜ್ಯದ ಪ್ರಾಂತ್ಯಗಳ ಮೇಲೆ ಅಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿದನು. ಉಳಿದ ಅಧಿಕಾರಿಗಳು ಹೊಟ್ಟೆಕಿಚ್ಚುಪಟ್ಟರು ಮತ್ತು ಅವನನ್ನು ಕೆಳಗಿಳಿಸಲು ಯೋಚನೆ ಮಾಡಿದರು. ಆದರೆ ಅವನ ನಡವಳಿಕೆಯಲ್ಲಿ ಅವರಿಗೆ ಯಾವುದೇ ತಪ್ಪು ಕಾಣಿಸಲಿಲ್ಲ. ನಾವೂ ಹೀಗೆಯೇ ಜೀವಿಸಬೇಕು, ನಮ್ಮ ಸುತ್ತಮುತ್ತಲಿನಲ್ಲಿರುವ ಜನರು ನಮ್ಮ ಜೀವಿತಗಳಿಗಾಗಿ ದೇವರಿಗೆ ಸ್ತೋತ್ರ ಸಲ್ಲಿಸಬೇಕು ಎಂಬದಾಗಿ ದೇವರ ವಾಕ್ಯ ಹೇಳುತ್ತದೆ (1 ಪೇತ್ರ 2:12). ಅವನನ್ನು ಕೆಳಗೆ ಬೀಳಸಬೇಕಾದರೆ ಅವನ ನಂಬಿಕೆಗೆ ಹೊಡೆತ ಕೊಡಬೇಕು ಎಂಬದಾಗಿ ಅವರು ತಿಳಿದುಕೊಂಡರು ಯಾಕಂದರೆ ದಾನಿಯೇಲನು ಯಾವಾಗಲೂ ತನ್ನ ನಂಬಿಕೆಗೆ ಪ್ರಥಮ ಸ್ಥಾನ ಕೊಡುತ್ತಿದ್ದನು. ದೇವರಿಗೆ ಯಾರೂ ಪ್ರಾರ್ಥನೆ ಮಾಡಬಾರದೆಂಬ ಆಜ್ಞೆಯನ್ನು ಅವರು ಹೊರಡಿಸಿರು, ಆದರೆ ದಾನಿಯೇಲನು ಅದನ್ನು ನಿರ್ಲಕ್ಷಿಸಿದನು. ಅರಸನು ಅವನನ್ನು ಉಳಿಸಲು ಪ್ರಯತ್ನಿಸಿದನು ಆದರೆ ನಿಯಮವು ಕಠಿಣವಾಗಿದ್ದರಿಂದ, ದಾನಿಯೇಲನನ್ನು ಸಿಂಹದ ಗವಿಯೊಳಗೆ ಹಾಕಲೇ ಬೇಕಾಯಿತು. ಆದರೆ ಮತ್ತೊಮ್ಮೆ, ದೇವರು ಸಿಂಹದ ಗವಿಯೊಳಗೆ ದಾನಿಯೇಲನೊಂದಿಗೆ ಇದ್ದನು ಮತ್ತು ದೇವದೂತನು ಸಿಂಹಗಳ ಬಾಯನ್ನು ಕಟ್ಟಿದ್ದರಿಂದ, ಅವುಗಳು ಅವನನ್ನು ತಿನ್ನಲಿಲ್ಲ. ಮಾರಣೆಯ ದಿನ ಬೆಳಗ್ಗೆ, ಅರಸನಾದ ದರ್ಯಾವೇಷನು ದಾನಿಯೇಲನು ಸುರಕ್ಷಿತವಾಗಿ ಮತ್ತು ಜೀವಂತವಾಗಿ ಇರುವದನ್ನು ಕಂಡು ಅವನನ್ನು ಗವಿಯೊಳಗಿಂದ ಮೇಲಕ್ಕೆ ಎತ್ತಿಸಿದನು. ದಾನಿಯೇಲನ ವೈರಿಗಳನ್ನು ಸಿಂಹದ ಗವಿಯೊಳಗೆ ಹಾಕಲಾಯಿತು, ಸಿಂಹಗಳು ಕೂಡಲೇ ಅವರನ್ನು ತಿಂದು ಬಿಟ್ಟವು. ನಂತರ ದರ್ಯಾವೇಷನು ದೇವರನ್ನು ಸ್ತುತಿಸಿದನು.

ನಾವು ನಮ್ಮ ನಂಬಿಕೆಗೆ ಅಥವಾ ಆತನಿಗೆ ಎಲ್ಲಾ ಕಾರ್ಯಗಳಲ್ಲಿಯೂ ಪ್ರಥಮ ಸ್ಥಾನ ಕೊಡಬೇಕು ಎಂಬದಾಗಿ ಯೇಸು ಕ್ರಿಸ್ತನು ನಮಗೆ ಹೇಳಿದ್ದಾನೆ. ಆದರೆ ಸಾಮಾನ್ಯವಾಗಿ ಯೇಸು ಕ್ರಿಸ್ತನ ಸಮಯದಲ್ಲಿ ಜೀವಿಸುತ್ತಿದ್ದ ಫರಿಸಾಯರ ಹಾಗೆ ನಾವು "ಸಭೆಯ ಕಾರ್ಯಗಳನ್ನೆಲ್ಲಾ ಚೆನ್ನಾಗಿ ಮಾಡಿದರೆ" ಉಳಿದವರೊಂದಿಗೆ ಹೇಗಾದರೂ ನಡೆದುಕೊಳ್ಳಬಹುದೆಂದು ಯೋಚಿಸುತ್ತೇವೆ. ಆದರೆ ಇದರಿಂದ ಯೇಸು ಕ್ರಿಸ್ತನಿಗೆ ಬಹಳ ದುಃಖವಾಯಿತು (ಮತ್ತಾಯ 23:23). ದೇವರು ಎಲ್ಲಾ ಜನರನ್ನು ಪ್ರೀತಿಸುತ್ತಾನೆ, ಮತ್ತು ನಾವು ಅವರೊಂದಿಗೆ ಹೇಗೆ ನಡೆದುಕೊಳ್ಳುತ್ತೇವೆ ಎಂಬದನ್ನು ನೋಡುತ್ತಾನೆ. ಇತರರನ್ನು ಕ್ಷಮಿಸದೆ ದೇವರೊಂದಿಗೆ ಒಳ್ಳೆಯ ಸಂಬಂಧವುಳ್ಳವರಾಗಿರಲು ನಿಮ್ಮಿಂದ ಆಗುವದಿಲ್ಲ (ಯಾಕೋಬ 3:9-12). ನೀವು ಸಭೆಯ ಒಳಗೆ ಮತ್ತು ಹೊರಗೆ ಏನು ಮಾಡುತ್ತೀರ ಎಂಬದನ್ನು ದೇವರು ಗಮನಿಸುತ್ತಾನೆ. ಇತರರೊಂದಿಗೆ ಸರಿಯಾಗಿ ನಡೆದುಕೊಳ್ಳುವ ಮತ್ತು ನಾವು ಮಾಡುವ ಕಾರ್ಯಗಳನ್ನು ನಂಬಿಗಸ್ತಿಕೆಯಿಂದ ಮಾಡುವ ಮೂಲಕ ನಾವು ಆತನ ಸೇವೆಯನ್ನು ಮಾಡಬಹುದು (ಕೊಲೊಸ್ಸೆ 3:17). ನಂತರ, ದೇವರು ಮತ್ತು ಇತರರ ನಡುವೆ ಆಯ್ಕೆ ಮಾಡಿಕೊಳ್ಳುವ ಸಮಯ ಬಂದಾಗ, ದೇವರಿಗೆ ಮೊದಲ ಸ್ಥಾನವನ್ನು ಕೊಡಿರಿ.

ನಾನು ಇತರರೊಂದಿಗೆ ಹೇಗೆ ನಡೆದುಕೊಳ್ಳುತ್ತೇನೆ ಎಂದು ಆತನು ನೋಡುತ್ತಾನೆ ಎಂಬದನ್ನು ಮನವರಿಕೆ ಮಾಡಿಕೊಂಡು ನಾನು ದೇವರಿಗೆ ಮೊದಲನೆಯ ಸ್ಥಾನ ಕೊಡುವ ಆಯ್ಕೆ ಮಾಡಿಕೊಳ್ಳುತ್ತೇನೆ.

### ವಿಶ್ಲೇಷಣೆ

ಒಂದುದಿನ ಮೇಲ್ವಿಚಾರಕನು (ಮ್ಯಾನೇಜರ್ ಗೆ ಬಾಸ್) ಕಛೇರಿಯೊಳಗೆ ಬಂದನು ಮತ್ತು ಮಾರ್ಥಳ ತಂದೆಯ ಟೇಬಲ್ ಮೇಲೆ ಸತ್ಯವೇದ ಇರುವದನ್ನು ಕಂಡನು. ನನಗೆ ಸತ್ಯವೇದ ಓದಲು ಬಹಳ ಖುಷಿ ಎಂದು ಆತನು ಹೇಳಿದನು ಮತ್ತು ಸತ್ಯವೇದ ಓದುವದಕ್ಕಾಗಿ ಮಾರ್ಥಳ ತಂದೆಗೆ ಅಭಿನಂದಿಸಿದನು.




ಕಛೇರಿಯಲ್ಲಿದ್ದ ಎಲ್ಲರಿಗೂ ಈ ವಿಷಯ ಗೊತ್ತಾಯಿತು ಮತ್ತು ಇದಾದ ನಂತರ ಮಾರ್ಥಳ ತಂದೆಗೆ ಇನ್ನು ಮುಂದೆ ಸಮಸ್ಯೆಗಳೇ ಎದುರಾಗಲಿಲ್ಲ. ಅವರ ಜೊತೆಯಲ್ಲಿ ಕೆಲಸ ಮಾಡುವವರೂ ಯಾವುದೇ ಹಿಂಜರಿಕೆಯಿಲ್ಲದೆ ಅವರೊಂದಿಗೆ ಮಾತನಾಡುತ್ತಿದ್ದರು ಮತ್ತು ಅವರ ನಂಬಿಕೆಯ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ದೇವರು ಪರಿಸ್ಥಿತಿಯನ್ನು ಬದಲಾಯಿಸಿದ್ದಾನೆ ಮತ್ತು ತಮ್ಮ ಪ್ರಾರ್ಥನೆಗಳಿಗೆ ಉತ್ತರಿಸಿದ್ದಾನೆ ಹಾಗೂ ತಮ್ಮ ನಂಬಿಕೆಯನ್ನು ಮೊದಲು ದೇವರಲ್ಲಿ ಇಡಲು ಸಹಾಯ ಮಾಡಿದ್ದಾನೆ ಎಂಬದನ್ನು ಅರಿತುಕೊಂಡರು.

## ಚಟುವಟಿಕೆ

**ಕುರುಡು ಕೋಳಿ**

ಈ ಚಟುವಟಿಕೆಗೆ ಹುಡುಗ ಮತ್ತು ಹುಡುಗಿಯರನ್ನು ಬೇರೆಬೇರೆ ಗುಂಪು ಮಾಡಿ ಪ್ರತ್ಯೇಕವಾಗಿ ಆಡಿಸಿರಿ. ಪ್ರತಿಯೊಂದು ಗುಂಪಿನಿಂದ ಒಂದು ಮಗುವನ್ನು ಆಯ್ಕೆ ಮಾಡಿ ಅದರ ಕಣ್ಣಿಗೆ ಬಟ್ಟೆ ಕಟ್ಟಿರಿ. ಉಳಿದ ಮಕ್ಕಳು ವೃತ್ತವನ್ನು ರೂಪಿಸಬೇಕು ಮತ್ತು ಕಣ್ಣಿಗೆ ಬಟ್ಟೆ ಕಟ್ಟಿರುವ ಮಗು ಮಧ್ಯದಲ್ಲಿ ಇರಬೇಕು. ತರಗತಿಯಲ್ಲಿ ಆಟವಾಡಲು ಮೇರೆಗಳನ್ನು ನಿಗದಿಪಡಿಸಿರಿ. ಕಣ್ಣಿಗೆ ಬಟ್ಟೆ ಕಟ್ಟಿಸಿಕೊಂಡಿರುವ ಮಗು ಉಳಿದ ಮಕ್ಕಳನು ಹುಡುಕಬೇಕು ಮತ್ತು ಹುಡುಕಿ ಹಿಡಿದ ನಂತರ ಮಗುವಿನ ಹೆಸರನ್ನು ಹೇಳಬೇಕು.



## ಟೈಮ್ ಲೈನ್


ದಾನಿಯೇಲನನ್ನು ಸಿಂಹದ ಗವಿಯೊಳಗೆ ಹಾಕಿ ಅದರಿಂದ ಬಿಡಿಸಿದ್ದು ಯಾವ ವರ್ಷದಲ್ಲಿ? ಉತ್ತರ: ಬಹುಶಃ ಕ್ರಿ.ಶ. 540 ರಲ್ಲಿ.

## ಒಗಟಿನ ಉತ್ತರಗಳು

| | | | | | | | | | | | |
|---|---|---|---|---|---|---|---|---|---|---|---|
| ಬಾ | ಸೇ | ಸಿಂ | ಊ | ಸೇ | ತಿ | ಜ್ಞಾ | ಬೆ | ಸೇ | ಜ್ಞಾ | ಯೇ | ಅ |
| ಬೆ | ವೇ | ಹ | ನೆ | ಧ | ರಾ | ಆ | ಊ | ಸ್ಥ | ನಂ | ರ | ತಿ |
| ಲ್ | ಧ | ಜ್ಞಾ | ದ್ಧಿ | ರ್ಥ | ರೋ | ವಂ | ನ | ಷ | ಸ | ಕ್ಷ | ಊ |
| ಕ್ಷ | ಕ್ಷೆ | ದ್ಧಿ | ಋ | ಗ್ಯ | ಪ್ರಾ | ವ | ಯೇ | ನಾ | ಪ್ರಾ | ಣೆ | ಬೆ |
| ಶಿ | ಋ | ಊ | ಕ | ದ್ಧಿ | ಯೌ | ಪ್ರಾ | ದ | ದ್ಧಿ | ಬೆ | ವೆ | ದ್ಧಿ |
| ನಂ | ಧ | ರ | ಪ್ರಾ | ದ್ಧಿ | ವೇ | ದ | ಟ | ಊ | ಕ್ಷ | ಕ್ಷ | ಸೇ |
| ಪ್ರಾ | ಊ | ವಂ | ಜ್ಞಾ | ಸೇ | ರ್ಯಾ | ಟ | ಋ | ಟ | ತಿ | ಋ | ಯೇ |
| ಟ | ಧ | ನ | ಟ | ವೇ | ದ್ಧಿ | ಪ್ರಾ | ದ್ಧಿ | ದ್ಧಿ | ಧ | ಸೇ | ಬೆ |
| ಯೇ | ಕ್ಷ | ಧ | ಷ | ದ್ಧಿ | ಗ | ದ್ಧಿ | ರು | ನಂ | ವಂ | ಟ | ನಂ |
| ವೇ | ವಂ | ನು | ವಂ | ವಿ | ವಂ | ಪ್ರಾ | ಷ | ವ | ವೇ | ತಿ | ಬಿ |
| ತಿ | ಬೆ | ಜ್ಞಾ | ದಾ | ನಿ | ಯೇ | ಲ | ತಿ | ಯೇ | ದೇ | ಜ್ಞಾ | ಕೆ |

| # | " | % | $ | & |
|---|---|---|---|---|
| 35 | 20 | 30 | 27 | 40 |

| = | ? | ¡ | - | : |
|---|---|---|---|---|
| 30 | 23 | 27 | 23 | 25 |



## ಪ್ರಶ್ನೆಗಳು ಮತ್ತು ಉತ್ತರಗಳು

**(ಹಿರಿಯ ವಿದ್ಯಾರ್ಥಿಗಳು)**

1. ದೇವರು, ಪರಲೋಕ, ನರಕ ಮತ್ತು ಮುಂದೆ ಒಂದು ದಿನ ನಾವೆಲ್ಲರೂ ಪರಲೋಕ ಮತ್ತು ನರಕಕ್ಕೆ ಹೋಗುತ್ತೇವೆ ಎಂದು ನೀವೆಲ್ಲರೂ ನಂಬುತ್ತೀರೋ?

   ನಿಮ್ಮ ವಿದ್ಯಾರ್ಥಿಗಳೊಂದಿಗೆ ನಿತ್ಯತೆಯ ಬಗ್ಗೆ ಮಾತನಾಡಿರಿ. ನೀವು ನಿಜವಾಗಿಯೂ ಇದನ್ನು ನಂಬುತ್ತಾರೋ ಎಂದು ಅವರನ್ನು ಕೇಳಿರಿ ಯಾಕಂದರೆ ಇದು ಪಾಠಕ್ಕೆ ಬಹಳ ಪ್ರಾಮುಖ್ಯವಾಗಿದೆ. ನಾವು ದೇವರು, ಪರಲೋಕ ಮತ್ತು ನರಕವನ್ನು ನಂಬದೆ ಹೋದರೆ ನಿಮ್ಮ ಜೀವಿತದಲ್ಲಿ ನಂಬಿಕೆಗೆ ಪ್ರಥಮ ಸ್ಥಾನ ಕೊಡಲು ಆಗುವದಿಲ್ಲ. ಒಂದುವೇಳೆ ನಾವು ನಿಜವಾಗಿ ನಂಬುವದಾದರೆ, ಈ ಲೋಕದ ಕಾರ್ಯಗಳಿಗಿಂತ ಪರಲೋಕದ ಕಾರ್ಯಗಳು ಯಾಕೆ ಪ್ರಾಮುಖ್ಯವಾಗಿವೆ ಎಂಬದನ್ನು ತಿಳಿಯಲು ಸಾಧ್ಯವಾಗುತ್ತದೆ.

2. ನಾವು ದೊಡ್ಡ ನಷ್ಟದ ನಡುವೆಯೂ ನಂಬಿಕೆಯನ್ನು ಆಯ್ಕೆ ಮಾಡಿಕೊಳ್ಳುವಂಥ ಅಂದರೆ ಸಿಂಹದ ಗವಿಯೊಳಗೆ ಹಾಕಲ್ಪಡುವಂಥ ಪರೀಕ್ಷೆಗಳು ನಮಗೆ ಯಾಕೆ ಎದುರಾಗುತ್ತವೆ?


   ಯಾಕಂದರೆ ನಂಬಿಕೆಯ ಬಗ್ಗೆ ಮಾತನಡುವಂಥದ್ದು ಸುಲಭ, ನಮಗೆ ಎದುರಾಗುವ ಕಷ್ಟದ ಪರೀಕ್ಷೆಗಳಲ್ಲಿ ನಾವು ಜಯಿಸಬೇಕಾದರೆ ಈ ನಂಬಿಕೆ ಇದ್ದರೆ ಮಾತ್ರ ಸಾಧ್ಯವಾಗುತ್ತದೆ.

3. ದೇವರು ಉದ್ದೇಶಪೂರ್ವಕವಾಗಿಯೇ ನಮಗೆ ಪರೀಕ್ಷೆಗಳನ್ನು ಕೊಡುತ್ತಾನೆ ಎಂದು ಯೋಚಿಸುತ್ತೀರೋ? ಯಾಕೆ?

   ಹೌದು!!! ಯಾಕಂದರೆ ದೇವರಿಗೆ ನಿತ್ಯತೆಯು ಪ್ರಾಮುಖ್ಯ ಎಂದು ಗೊತ್ತು ಮತ್ತು ನಾವು ನಮ್ಮ ನಂಬಿಕೆಯಲ್ಲಿ ಬೆಳೆಯಬೇಕು ಹಾಗೂ ಪರಿಪಕ್ವತೆಯುಳ್ಳ ಕ್ರೈಸ್ತರಾಗಬೇಕು ಎಂಬದಾಗಿ ದೇವರು ಬಯಸುತ್ತಾನೆ.

## ಆಟ

ನೋಟದಿಂದಲ್ಲ




ಕಂದು ಬಣ್ಣದ ಚೀಲದೊಳಗೆ ಮನೆಯ ಕೆಲವು ವಸ್ತುಗಳನ್ನು ಹಾಕಿರಿ. ಮಕ್ಕಳನ್ನು ನೆಲದ ಮೇಲೆ ವೃತ್ತಾಕಾರದಲ್ಲಿ ಕೂರಿಸಿರಿ. ಮಕ್ಕಳ ಕಣ್ಣುಗಳಿಗೆ ಬಟ್ಟೆಯನ್ನು ಕಟ್ಟಬೇಕು ಮತ್ತು ಸರದಿಯ ಪ್ರಕಾರ ಚೀಲದೊಳಗಿಂದ ವಸ್ತುಗಳನ್ನು ತೆಗೆಯಬೇಕು ಹಾಗೂ ಮುಟ್ಟುವ ಮೂಲಕ ಅವು ಏನು ಎಂದು ಹೇಳಬೇಕು. ಸೇಬು ಸೇಬಾಗಿದೆ ಎಂದು ಅವರಿಗೆ ಗೊತ್ತಿರುವದು ಆದರೆ ಅದನ್ನು ನಿರೂಪಿಸುವದು ಹೇಗೆ ಎಂದು ಅವರಿಗೆ ಗೊತ್ತಿರುವದಿಲ್ಲ. ಅವರು ಈ ಆಟದಲ್ಲಿ ತಮ್ಮ ನಂಬಿಕೆಯನ್ನು ಉಪಯೋಗಿಸಬೇಕು. ಇದೇ ಪ್ರಕಾರ, ಕಾಟನ್ ಚೆಂಡನ್ನು ಮುಟ್ಟುವಾಗ ಅದು ಏನೆಂದು ಅವರಿಗೆ ಗೊತ್ತಾಗುತ್ತದೆ ಯಾಕಂದರೆ ಇದಕ್ಕೂ ಮೊದಲು ಅವರಿಗೆ ಅದರ ಅನುಭವವಾಗಿದೆ ಮತ್ತು ಅದರ ಕುರಿತು ಅವರಿಗೆ ನಂಬಿಕೆ ಇರುತ್ತದೆ. ದೇವರಲ್ಲಿ ನಮಗಿರುವ ನಂಬಿಕೆ, ಚೀಲದೊಳಗಿರುವ ವಸ್ತುಗಳನ್ನು ಅರ್ಥಮಾಡಿಕೊಳ್ಳುವದಕ್ಕೆ ಸಮ ಎಂಬದನ್ನು ಮಕ್ಕಳಿಗೆ ವಿವರಿಸಿರಿ. ದೇವರನ್ನು ನೋಡಲು ಸ್ಪಷ್ಟವಾಗಿ ನಮಗೆ ಆಗದೆ ಹೋದರು, ದೇವರೊಂದಿಗೆ ನಮಗಿರುವ ಅನುಭವಗಳು ನಾವು ಆತನಲ್ಲಿ ನಂಬಿಕೆಯನ್ನಿಡಲು ಮತ್ತು ನಮ್ಮ ಜೀವಿತದಲ್ಲಿ ಆತನ ಕಾರ್ಯಗಳನ್ನು ಗುರಿತಿಸಿಕೊಳ್ಳಲು ಸಹಾಯ ಮಾಡುತ್ತದೆ.

## ಹಾಜರಾತಿ

ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ದಾನಿಯೇಲ

## ಹೋಮ್ ವರ್ಕ್




ಈ ವಾರದ ಪ್ರತಿದಿನ, ಒಂದೆರೆಡು ನಿಮಿಷವಾದರೂ ಒಬ್ಬರೇ ಪ್ರಾರ್ಥನೆ ಮಾಡಿರಿ. ಆ ದಿನದ ಒಳ್ಳೆಯ ಕಾರ್ಯಗಳಿಗೆ ದೇವರಿಗೆ ಸ್ತೋತ್ರ ಮಾಡಿರಿ ಮತ್ತು ಶಾಲೆಯಲ್ಲಿ ಹಾಗೂ ಮನೆಯಲ್ಲಿ ನಂಬಿಗಸ್ತರಾಗಿರಲು ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ. ದೇವರು ನಿಮ್ಮ ಮೇಲೆ ಇಟ್ಟಿರುವ ಪ್ರೀತಿಯ ಬಗ್ಗೆ ಯೋಚಿಸಿರಿ ಮತ್ತು ನೀವೂ ಆತನನ್ನು ಪ್ರೀತಿಸುವದಾಗಿ ಹೇಳಿರಿ.

ಓದಿರಿ

ದಿನ 1: ಯೋನ 1:1-9

ದಿನ 2: ಯೋನ 1:10-17

ದಿನ 3: ಯೋನ 2:1-10

ದಿನ 4: ಯೋನ 3:1-10

ದಿನ 5: ಯೋನ 4:1-10

# 12. ಓಡಿ ಹೋಗಬೇಡಿರಿ



ಸತ್ಯವೇದ ಕಥೆ: ಯೋನ

ಯೋನ 1-4

## ಕಂಠಪಾಠ ವಚನ

**ಕೀರ್ತನೆಗಳು 51:10 ಶುದ್ಧ ಹೃದಯವನು ದೇವಾ, ನಿರ್ಮಿಸು ।ಅಂತರಂಗವನು ಚೇತನಗೊಳಿಸು ॥**

## ಕಥೆಯ ಅವಶ್ಯಕತೆ



ರಾಜುಗೆ ಅವನ ತಂದೆ, ಮಧ್ಯಾಹ್ನ ಮನೆಯಲ್ಲಿ ಒಂದು ಕೂಟವಿದೆ ಆದ್ದರಿಂದ, ಮನೆಯನ್ನು ಶುಚಿ ಮಾಡು ಎಂದು ಹೇಳಿದರು. ರಾಜುಗೆ ತಂದೆಯ ಮಾತು ಇಷ್ಟವಾಗಲಿಲ್ಲ, ಯಾಕಂದರೆ ಮನೆ ತುಂಬಾ ಗಲೀಜಾಗಿತ್ತು. ಆದ್ದರಿಂದ ಅವನು ತನ್ನ ಸ್ಕೇಟ್ ಬೋರ್ಡ್ ತೆಗೆದುಕೊಂಡು ಸ್ನೇಹಿತರ ಜೊತೆ ಹೊರಟು ಹೋದನು.

## ಮುಖ್ಯ ಪಾಠ

ನಂಬಿಕೆಯ ವೀರರಲ್ಲಿ ನಾವು ದೇವರಲ್ಲಿ ಭರವಸೆಯನ್ನಿಡುವ ಮತ್ತು ದೇವರಿಗೆ ವಿಧೇಯರಾಗಿ ನಡೆದುಕೊಳ್ಳುವ ಎಲ್ಲಾ ವಿಧಾನಗಳನ್ನು ನೋಡಿಕೊಂಡಿದ್ದೇವೆ. ಆದರೆ ನಿಮಗೆ ಮಾಡಲು ಇಷ್ಟವಿಲ್ಲದಿರುವ ಕೆಲಸವನ್ನು ಮಾಡುವಂತೆ ದೇವರು ಹೇಳುವಾಗ ಏನಾಗುತ್ತದೆ?

ದೇವರು ಯೋನ ಎಂಬ ವ್ಯಕ್ತಿಗೆ ನೀನು ನಿನವೆ ಪಟ್ಟಣಕ್ಕೆ ಹೋಗಿ ಅದನ್ನು ಖಂಡಿಸು ಎಂದು ಹೇಳಿದನು. ಯೋನ ತನ್ನ ಬಟ್ಟೆಬರೆಯನ್ನು ತೆಗೆದುಕೊಂಡು ಸಂತೋಷವಾಗಿ ಅವರಿಗೆ ದೇವರ ಕೃಪೆಯ ಶುಭವಾರ್ತೆ ಹೇಳಲು ಹೊರಟನು – ಇಲ್ಲ. ಯೋನ ನಿನವೆಯ ಜನರನ್ನು ದ್ವೇಷಿಸುತ್ತಿದ್ದನು ಮತ್ತು ದೇವರು ಅವರನ್ನು ನಾಶಮಾಡಬೇಕೆಂದು ಬಯಸುತ್ತಿದ್ದನು. ಆದ್ದರಿಂದ ಅವನು ಬೇರೆ ಕಡೆಗೆ ಓಡಿ ಹೋಗಲು ಬಯಸಿದನು. ನಾವು ದೇವರಿಗೆ ಅವಿಧೇಯರಾಗುವಾಗ, ಸತ್ಯವೇದ ಓದದೆ ಅಥವಾ ಪ್ರಾರ್ಥನೆ ಮಾಡದೆ ದೇವರಿಂದ ಓಡಿ ಹೋಗಲು ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ನಾವು ಪ್ರಾಮಾಣಿಕರಾಗಿರುವದನ್ನು ನಿಲ್ಲಿಸುತ್ತೇವೆ ಯಾಕಂದರೆ ಒಂದುವೇಳೆ ಜನರಿಗೆ ನಮ್ಮ ಹೃದಯದ ವಿಷಯಗಳು ಗೊತ್ತಾದರೆ, ನಾವು ಯಥಾರ್ಥಯಿಲ್ಲದವರು ಎಂಬದು ಗೊತ್ತಾಗುತ್ತದೆ ಎಂದು ಹೆದರಿಕೊಳ್ಳುತ್ತೇವೆ. ಇದಲ್ಲದೆ ಎಲ್ಲಾ ವಿಷಯಗಳಲ್ಲಿಯೂ ನಾವು ಗೊಂದಲಗಳಿಗೆ ಒಳಗಾಗುತ್ತೇವೆ. ಆದರೆ ಸತ್ಯವೇನೆಂದರೆ ನಾವು ದೇವರನ್ನು ನಿರ್ಲಕ್ಷಿಸುತ್ತಿದ್ದೇವೆ ಹಾಗೂ ದೇವರಿಗೆ ಅವಿಧೇಯರಾಗುತ್ತಿದ್ದೇವೆ. ಯೋನ ನಿನವೆಗೆ ಹೋಗದೆ, ನಿನವೆಗಿಂತ ದೂರವಿದ್ದ ತಾರ್ಷಿಶ್ ಗೆ ಹೋಗುವ ಹಡಗನ್ನು ಹತ್ತಿದನು. ದೊಡ್ಡ ಬಿರುಗಾಳಿ ಬಂದದ್ದರಿಂದ ನಾವಿಕರು ಮತ್ತು ಪ್ರಯಾಣಿಕರು ಬಹಳವಾಗಿ ಹೆದರಿಕೊಂಡರು. ನಾನು ದೇವರಿಂದ ತಪ್ಪಿಸಿಕೊಳ್ಳಲು ಆಗುವದಿಲ್ಲ ಎಂಬದು ಯೋನನಿಗೆ ಮನವರಿಕೆಯಾದಾಗ, ನನ್ನನ್ನು ಸಮುದ್ರದೊಳಗೆ ಬಿಸಾಡಿರಿ ಎಂದು ಅವನೇ ಅವರಿಗೆ ಹೇಳಿದನು. ದೇವರು ಒಂದು ದೊಡ್ಡ ಮೀನಿಗೆ ಯೋನನನ್ನು ನುಂಗು ಎಂದು ಅಪ್ಪಣೆ ಕೊಟ್ಟನು. ದೇವರು ನಿಮ್ಮನ್ನು ಬಹಳವಾಗಿ ಪ್ರೀತಿಸುವದರಿಂದ ನಿಮ್ಮ ಕುರಿತು ಯೋಚಿಸುತ್ತಾನೆ ಮತ್ತು ಆತನಿಗೆ ವಿಧೇಯರಾಗಿ ನಡೆದುಕೊಳ್ಳಲು ನಿಮಗೆ ಸಹಾಯ ಮಾಡುತ್ತಾನೆ. ಅವನನ್ನು ಒಣನೆಲದ ಮೇಲೆ ಕಾರಿಬಿಡುವಂತೆ ದೇವರು ಮತ್ತೊಮ್ಮೆ ಮೀನಿಗೆ ಆಜ್ಞಾಪಿಸಿದನು, ಆಗ ಅವನು ದೇವರಿಗೆ ವಿಧೇಯನಾಗಿ ನಿನವೆಗೆ ಹೋದನು. ಜನ ಅವನ ಸಂದೇಶವನ್ನು ಕೇಳಿದರು ಮತ್ತು ಪಶ್ಚಾತ್ತಾಪಪಟ್ಟರು,

ಹಾಗು ದೇವರು ಪಟ್ಟಣವನ್ನು ನಾಶಮಾಡಲಿಲ್ಲ. ಯೋನ ನಿನವೆ ಪಟ್ಟಣದವರನ್ನು ಇನ್ನೂ ದ್ವೇಷಿಸುತ್ತಿದ್ದನು ಮತ್ತು ಅವರನ್ನು ಉಳಿಸಿದ್ದಕ್ಕಾಗಿ ದೇವರ ಮೇಲೆ ಕೋಪ ಮಾಡಿಕೊಂಡನು. ಆದರೆ ದೇವರು ಎಲ್ಲಾ ಜನರನ್ನು ಪ್ರೀತಿಸುತ್ತಾನೆ ಮತ್ತು ಅವರಲ್ಲಿ ಒಬ್ಬರಾದರೂ ನಾಶವಾಗುವದು ಆತನಿಗೆ ಇಷ್ಟವಿಲ್ಲ, ಆದರ ಜನರು ಪಶ್ಚತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಬೇಕು (2 ಪೇತ್ರ 3:9).

ನಿಮಗೆ ಮಾಡಲು ಇಷ್ಟವಿಲ್ಲದ ಕಾರ್ಯವನ್ನು ಮಾಡುವಂತೆ ದೇವರು ಹೇಳಿದರೆ ನೀವೇನು ಮಾಡುವಿರಿ? ಯೋನನ ಹಾಗೆ ನೀವು ದೇವರಿಂದ ತಪ್ಪಿಸಿಕೊಳ್ಳಲ ಆಗುವದಿಲ್ಲ. ನಿಮಗೆ ಇಷ್ಟವಿಲ್ಲದ ಜನರ ಬಳಿ ಆತನು ನಿಮ್ಮನ್ನು ಕಳುಹಿಸುತ್ತಾ ಇರುವದಾದರೆ, ಈ ಕಾರ್ಯಗಳನ್ನು ಪ್ರಯತ್ನಿಸಿರಿ. ಅವರಿಗಾಗಿ ಪ್ರಾರ್ಥನೆ ಮಾಡಿದರೆ ನಿಮ್ಮ ಮನೋಭಾವನೆ ಬದಲಾಗಬಹುದು (ಮತ್ತಾಯ 5:44). ನಿಮಗೆ ನೋವಾಗುವಂತೆ ಅವರು ಏನು ಮಾಡಿದ್ದಾರೆ ಅಥವಾ ನಿಮ್ಮನ್ನು ಪ್ರೀತಿಸುವವರ ಕುರಿತು ನೀವು ಯೋಚಿಸಬಹುದು, ನಂತರ ಅವರನ್ನು ಕ್ಷಮಿಸಬಹುದು ಮತ್ತು ಅವರಿಂದ ಯಾವುದೇ ರೀತಿಯ ಕಾರ್ಯಗಳ ನಿರೀಕ್ಷಸುವದನ್ನು ನಿಲ್ಲಿಸಬಹುದು. ನೀವು ಮಾಡಿರುವ ಎಲ್ಲಾ ರೀತಿಯ ಕೆಟ್ಟ ಕಾರ್ಯಗಳಿಗೆ ಪ್ರತಿಯಾಗಿ ದೇವರ ನಿಮ್ಮಿಂದ ಏನೂ ನಿರೀಕ್ಷಿಸುವದಿಲ್ಲ ಎಂಬದನ್ನು ಮರೆಯಬೇಡಿರಿ (ಮತ್ತಾಯ 18:21-35). ಒಂದುವೇಳೆ ಯಾರೊಂದಿಗಾದರೂ ನಿಮಗೆ ಸರಿಯಾದ ಸಂಬಂಧವಿಲ್ಲವೆಂದರೆ, ಅವರಿಗೆ ಪ್ರಶ್ನೆಗಳನ್ನು ಕೇಳಿರಿ ಮತ್ತು ಅವರ ದೃಷ್ಟಿಕೊನಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿರಿ. ಒಂದುವೇಳೆ ನಿಮಗೆ ತೊಂದರೆಯಾಗುವಂಥ ಕಾರ್ಯಗಳನ್ನು ಅವರು ಮಾಡಿದರೆ, ನಿಮ್ಮ ಹೃದಯ ಹಾಗೂ ಕ್ರಿಯೆಗಳನ್ನು ಪರೀಕ್ಷಿಸಿಕೊಳ್ಳಿರಿ – ನಿಮ್ಮಲ್ಲಿಯೂ ಅದೇ ರೀತಿಯ ಪಾಪ ಇರುವದು ಒಂದುವೇಳೆ ನಿಮಗೆ ಗೊತ್ತಾಗಬಹುದು (ರೋಮಾ 2:1). ದೇವರಿಗೆ ವಿಧೇಯರಾಗದೆ ಇರಲು ನಿಮಗೆ ಅನೇಕ ಕಾರಣಗಳಿರಬಹುದು, ನಿಮ್ಮ ಹೃದಯವನ್ನು ಬದಲಾಯಿಸಲು ನೀವು ದೇವರಿಂದ ಸಹಾಯ ಪಡೆಯಬಹುದು ಮತ್ತು ಆತನಿಗೆ ವಿಧೇಯರಾಗಿ ನಡೆದುಕೊಳ್ಳಲು ಬೇಕಾದ ಸಹಾಯವನ್ನೂ ಪಡೆಯಬಹುದು. ದೇವರಿಗೆ ವಿಧೇಯರಾಗಲು ನೀವು ಬಯಸದೆ ಇರುವ ಸಮಯವು ನಿಮ್ಮ ಹೃದಯವನ್ನು ಬದಲಾಯಿಸಿಕೊಳ್ಳಲು ನಿಮಗೆ ದೊರೆಯುವ ಒಳ್ಳೆಯ ಅವಕಾಶವಾಗಿದೆ.


ನನ್ನ ಹೃದಯವನ್ನು ಬದಲಾಯಿಸಲು ಬೇಡಿಕೊಳ್ಳಲು ಮತ್ತು ಇಷ್ಟವಿಲ್ಲದೆ ಇರುವಾಗಲೂ ದೇವರಿಗೆ ವಿಧೇಯನಾಗುವ ಆಯ್ಕೆಯನ್ನು ನಾನು ಮಾಡಿಕೊಳ್ಳುತ್ತೇನೆ.

### ವಿಶ್ಲೇಷಣೆ

ಪಾರ್ಕ್ ನಲ್ಲಿ ಸ್ಕೇಟಿಂಗ್ ಮಾಡುವಾಗ, ರಾಜುವಿನ ಸ್ಕೇಟ್ ಬೋರ್ಡ್ ನ ಒಂದು ಚಕ್ರ ಮುರಿದು ಹೋಯಿತು, ಆದ್ದರಿಂದ ರಾಜು ಕೆಳಗೆ ಬಿದ್ದನು, ಅವನ ಸಂಗಡ ಅವನ ಸ್ನೇಹಿತರೂ ಬಿದ್ದರು. ಪ್ರಾರಂಭದಲ್ಲಿ ರಾಜುಗೆ ತನ್ನ ಸ್ಕೇಟ್ ಬೋರ್ಡ್ ಮೇಲೆ ಮತ್ತು ಮಧ್ಯದಲ್ಲಿ ಅಡ್ಡಬಂದದ್ದಕ್ಕೆ ಅವನ ಸ್ನೇಹಿತರ ಮೇಲೆ ಬಹಳ ಕೋಪ ಬಂದಿತು, ಅಲ್ಲದೆ ತನ್ನ ವಿಷಯದಲ್ಲಿಯೂ ಅವನು ಬೇಸರ ಮಾಡಿಕೊಂಡನು. ಆದರೆ ಸುತ್ತಮುತ್ತಲು ನೋಡುವಾಗ ಎಲ್ಲರಿಗೂ ಗಾಯವಾಗಿರುವದು ತಿಳಿದು, ರಾಜು ಕ್ಷಮಾಪಣೆ ಕೇಳಿದನು, ತಪ್ಪೆಲ್ಲಾ ನನ್ನದೇ ಎಂದು ಹೇಳಿದನು. ಅವನು ಮನೆಗೆ ಹೋಗಿ ತನ್ನ ತಂದೆಯ ಹತ್ತಿರವೂ ಕ್ಷಮಾಪಣೆ ಕೇಳಿದನು ಮತ್ತು ಮನೆಯನ್ನು ಶುಚಿ ಮಾಡಲು ಪ್ರಾರಂಭಿಸಿದನು.



### ಚಟುವಟಿಕೆ



ನಿಮ್ಮ ಬೆನ್ನ ಮೇಲೆ ಹೆಸರು

ಬಣ್ಣಗಳು, ಪ್ರಾಣಿಗಳು, ಹಣ್ಣುಗಳು ಇತ್ಯಾದಿಗಳೊಂದಿಗೆ ಹಾಳೆಗಳನ್ನು ಸಿದ್ಧಮಾಡಿರಿ ಮತ್ತು ಮಕ್ಕಳ ಬೆನ್ನ ಮೇಲೆ ಒಂದೊಂದೇ ಹಾಳೆಯನ್ನು ಅವರ ಹೆಸರುಗಳಾಗಿ ಅಂಟಿಸಿರಿ, ಮತ್ತು ಮಕ್ಕಳಿಗೆ ಬೇರೊಂದು ಪೇಪರ್ ಹಾಗೂ ಪೆನ್ಸಿಲ್ ಕೊಡಿರಿ. ನೀವು

ಹೇಳುವಾಗ ಮಕ್ಕಳು ಬೇರೆಯವರ ಬೆನ್ನ ಮೇಲಿರುವ ಹೆಸರನ್ನು ತಮ್ಮ ಹಾಳೆಯಲ್ಲಿ ಬರೆಯಲು ಪ್ರಯತ್ನಿಸಬೇಕು ಆದರೆ ತಮ್ಮ ಬೆನ್ನ ಮೇಲಿರುವದನ್ನು ಬೇರೆಯವರಿಗೆ ತೋರಿಸದಂತೆ ತಪ್ಪಿಸಿಕೊಳ್ಳಬೇಕು. ತಮ್ಮ ಬೆನ್ನ ಮೇಲಿರುವ ಹೆಸರು ಬೇರೆಯವರಿಗೆ ಗೊತ್ತಾಗ ಬಾರದೆಂಬ ಕಾರಣಕ್ಕೆ ಅವರು ಕೂರುವದು, ಓಡುವದು, ಜಿಗಿಯುವದು ಇತ್ಯಾದಿ ಕಾರ್ಯಗಳನ್ನು ಮಾಡುವಂತೆ ಮಾಡುತ್ತದೆ. ಸಮಯ ಮುಗಿದ ನಂತರ, ಯಾರ ಹೆಚ್ಚು ಹೆಸರುಗಳನ್ನು ಬರೆದಿರುತ್ತಾರೋ ಅವರು ಗೆಲ್ಲುತ್ತಾರೆ.

### ಟೈಮ್ ಲೈನ್

ಯೋನನ ಕಥೆ ಯಾವ ವರ್ಷದಲ್ಲಿ ಸಂಭವಿಸಿತು? ಉತ್ತರ: ಬಹುಶಃ ಕ್ರಿ.ಶ 790 ರಲ್ಲಿ.

| | | | | | | | | | |
|---|---|---|---|---|---|---|---|---|---|
| ಬಿ | ಯೋ | ಳಿ | ಅ | ನು | ದ | ಕೊಂ | ಗಿ | ಡ | ಅ |
| ರು | ಕೊಂ | ರು | ದ | ಕ್ಷಿ | ದ | ಪ | ತ್ತಾ | ಶ್ಚಾ | ಪ |
| ಗಾ | ಸಂ | ಹೋ | ವಿ | ಳಿ | ದ | ಸಿ | ಳಿ | ಯೋ | ಹ |
| ಳಿ | ಡಿ | ಕೊಂ | ರು | ಯೋ | ಕ್ಷಿ | ಕೊಂ | ಪ್ಪಿ | ದ | ಡ |
| ಓ | ರು | ಶ್ | ಗಾ | ನಿ | ನ | ವೆ | ರು | ತ | ಗು |
| ಳಿ | ರ್ಡಿ | ವಿ | ಶ್ | ತೆ | ದ | ರು | ಶ | ವಿ | ಯೋ |
| ತಾ | ದ | ರು | ಯ | ಯೋ | ಹ | ದ | ಕ | ದೇ | ಅ |
| ಯೋ | ಕ | ಧೇ | ಕೊಂ | ಸಂ | ಮೀ | ಶ್ | ಕೊಂ | ಗಾ | ಸಂ |
| ನಾ | ವಿ | ಕ | ರು | ಕ್ಷಿ | ನು | ದ | ಸಿ | ಕ್ಷಿ | ರ |






### ಸರಿ ಅಥವಾ ತಪ್ಪು

ಉತ್ತರ ಸರಿಯಾಗಿದ್ದರೆ ವೃತ್ತ ಹಾಕಿರಿ ಇಲ್ಲವಾದರೆ ಈ ಗುರುತು ಹಾಕಿರಿ

1. ದೊಡ್ಡ ಮೀನು ಯೋನನನ್ನು ತಿಂದಿತು.
2. ಯೋನನ ನಿನವೆಯ ಜನರನ್ನು ಬಹಳವಾಗಿ ಪ್ರೀತಿಸುತ್ತಿದ್ದನು.
3. ದೇವರು ಯಾವಾಗಲೂ ನಿಮ್ಮ ಬಗ್ಗೆ ಚಿಂತಿಸುತ್ತಾನೆ.
4. ಯೋನ ಪ್ರಾರಂಭದಲ್ಲಿ ವಿಧೇಯನಾದನು.
5. ಕೆಲವೊಮ್ಮೆ ನಮಗೆ ಮಾಡಲು ಇಷ್ಟವಿಲ್ಲದಿರುವ ಕಾರ್ಯಗಳನ್ನು ಮಾಡುವಂತೆ ದೇವರು ನಮಗೆ ಹೇಳುತ್ತಾನೆ.

## ಒಗಟಿನ ಉತ್ತರಗಳು

ಪ್ರಶ್ನೆಗಳು ಮತ್ತು ಉತ್ತರಗಳು 12


**(ಹಿರಿಯ ವಿದ್ಯಾರ್ಥಿಗಳಿಗೆ)**

1. ಯಾರಿಗೂ ಗೊತ್ತಾಗಲಿಲ್ಲವೆಂದರೆ ಅದು ನಿಜವಾಗಿಯೂ ದೇವರ ಆಜ್ಞೆಗಳಿಂದ ಓಡಿ ಹೋಗುವದಾಗಿದೆಯೇ?
   ಹೌದು. ಅಥವಾ ದೇವರಿಗೆ ಗೊತ್ತಾಗದಂತೆ ಬಚ್ಚಿಟ್ಟುಕೊಳ್ಳಬಹುದು ಎಂಬದಾಗಿ ನಿಮಗೆ ಅನ್ನಿಸುತ್ತದೆಯೇ? ನಾವು ನಮ್ಮ ತಂದೆತಾಯಿಗಳು ಅಥವಾ ಶಿಕ್ಷಕರಿಗೆ ಗೊತ್ತಾಗದಂತೆ ಮತ್ತು ದೇವರಿಗೆ ಗೊತ್ತಾಗದಂತೆ ಅಡಗಿಕೊಳ್ಳಬಹುದಾದ ಸ್ಥಳಗಳು ಯಾವುವು ಎಂಬದಾಗಿ ಕೇಳುವ ಮೂಲಕ ಮಕ್ಕಳೊಂದಿಗೆ ಕೆಲ ಹೊತ್ತು ತಮಾಷೆ ಮಾಡಿರಿ. ಉದಾಹರಣೆಗೆ, “ನೀವು ನಿಮ್ಮ ಹಾಸಿಗೆಯ ಕೆಳಗಿರುವ ನಿಮ್ಮನ್ನು ನೋಡಲು ದೇವರಿಂದ ಸಾಧ್ಯವೇ?”
2. ಮತ್ತಾಯ 13 ರಲ್ಲಿರುವ ಸಾಮ್ಯವನ್ನು ಓದಿರಿ ಮತ್ತು ನಿಮಗೆ ಯಾವ ಭೂಮಿ ಬೇಕು ಎಂಬದನ್ನು ತೀರ್ಮಾನಿಸಿರಿ. ತೀರ್ಮಾನ ತೆಗೆದುಕೊಳ್ಳಿರಿ. ಒಳ್ಳೇತನವನ್ನು ಕೊಡುವ ಜೀವಿತವು ನಿಮಗೆ ಬೇಕೋ?
   ಸಾಮ್ಯವನ್ನು ಓದಿದ ನಂತರ, ಬಿತ್ತಲ್ಪಟ್ಟ ಬೀಜಕ್ಕಿಂತ 100 ರಷ್ಟು ಹೆಚ್ಚು ಫಲವನ್ನು ಕೊಡುವ ಒಳ್ಳೆಯ ನೆಲವಾಗಿರಲು ಬಯಸುತ್ತೀರೋ ಎಂಬದನ್ನು ಒಂದು ಕ್ಷಣ ಆಲೋಚಿಸಿರಿ. ನೋಡಿ, ನಮ್ಮ ಹೃದಯಗಳಲ್ಲಿ ಒಂದುವೇಳೆ ಕಲ್ಲುಗಳಿದ್ದರೆ ಅಥವಾ ಬೇರುಗಳು ಹರಡಿಕೊಳ್ಳಲು ಸ್ಥಳಾವಕಾಶ ಇಲ್ಲದಿದ್ದರೆ ನಾವು ಸರಿಪಡಿಸ ಬಹುದು. ನಮ್ಮ ನೆಲವನ್ನು ಸರಿಪಡಿಸಿಕೊಳ್ಳಲು ಸಹಾಯ ಮಾಡುವ ಸುಲಭವಾದ ಮಾರ್ಗ ವಿಧೇಯತೆ . . . ದೇವರು ಏನಾದರು ಮಾಡಲು ಹೇಳುವಾಗ ದಯವಿಟ್ಟು ಆತನ ಬಳಿಯಿಂದ ಓಡಿಹೋಗಬೇಡಿರಿ. ಆದರೆ ಬಹುತೇಕ ಸಮಯಗಳಲ್ಲಿ ದೇವರು ನಮ್ಮ ಹಿತಕ್ಕಾಗಿಯೇ ಏನಾದರು ಮಾಡಲು ಹೇಳುತ್ತಾನೆ ಮತ್ತು ನಾವು ಓಡಿ ಹೋದರೆ, ಜೀವನದಲ್ಲಿ ದೊರೆಯುವ ಫಲದಿಂದ ದೂರವಾಗುತ್ತೇವೆ.

## ಆಟ

ತಿಮಿಂಗಲ

ಈ ಆಟದಲ್ಲಿ, ಮಕ್ಕಳು ತಮ್ಮ ಕೈಗಳನ್ನು ಉದ್ದ ಚಾಚಿ ಮಧ್ಯದಿಂದ ಅಗಲಕ್ಕೆ ತೆಗೆಯಬೇಕು ಹಾಗೂ ಮುಚ್ಚಬೇಕು ಮತ್ತು ಕೋಣೆಯೊಳಗಿರುವ ಇತರೆ ಮಕ್ಕಳನ್ನು ಮುಟ್ಟಬೇಕು. ಯಾವ ಮಕ್ಕಳನ್ನು ಮುಟ್ಟಲಾಗುತ್ತದೆಯೋ ಅವರು ತಿಮಿಂಗಲದ ಹಾಗೆ ಕೈಗಳನ್ನು ಚಾಚುವವರ ಹಿಂದೆ ನಿಲ್ಲಬೇಕು ಮತ್ತು ಹಾಗೆಯೇ ಹಿಂದೆ  ಇನ್ನೂ ಮಕ್ಕಳನ್ನು ಸೇರಿಸಿಕೊಳ್ಳಬೇಕು. ಕಡೆಯಲ್ಲಿ ಯಾವ ಮಕ್ಕಳು ಮುಟ್ಟಿಸಿಕೊಳ್ಳದೆ ತಪ್ಪಿಸಿಕೊಂಡಿರುತ್ತಾರೋ ಅವರನ್ನು ಶ್ಲಾಘಿಸಬೇಕು.



## ಹಾಜರಾತಿ




ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಯೋನ

## ಹೋಮ್ ವರ್ಕ್

ದೇವರು ನಿಮಗೆ ಏನು ಮಾಡುವಂತೆ ಹೇಳುತ್ತಿದ್ದಾನೆ? ಏನು ಮಾಡಬೇಕೆಂಬದು ನಿಮಗೆ ಗೊತ್ತಿದ್ದರೂ ಅದನ್ನು ಮಾಡದೆ ನೀವು ತಡಮಾಡುತ್ತ ಇದ್ದೀರೋ? ತಡಮಾಡಬೇಡಿರಿ ಮತ್ತು ದೂರು ಹೇಳಬೇಡಿರಿ. ಹೋಗಿ, ಮಾಡಿರಿ.

ಓದಿರಿ

ದಿನ 1: ಜೆಕರ್ಯ 7:1-7

ದಿನ 2: ಜೆಕರ್ಯ 7:8-14

ದಿನ 3: ಜೆಕರ್ಯ 8:1-8

ದಿನ 4: ಜೆಕರ್ಯ 8:9-13

ದಿನ 5: ಜೆಕರ್ಯ 8:14-23

# 13. ಸತ್ಯವನ್ನು ಪ್ರಕಟಿಸಿರಿ



ಸತ್ಯವೇದ ಕಥೆ: ಜೆಕರ್ಯ
ಜೆಕರ್ಯ 7-8

## ಕಂಠಪಾಠ ವಚನ

೧ ಥೆಸಲೋನಿಯರಿಗೆ **5:11** ಆದುದರಿಂದ ನೀವು ಈಗ ನಡೆದುಕೊಳ್ಳುತ್ತಿರುವಂತೆ, ಒಬ್ಬರನ್ನೊಬ್ಬರು ಪ್ರೋತ್ಸಾಹಿಸಿ, ಒಬ್ಬರ ಭಕ್ತಿಯನ್ನೊಬ್ಬರು ವೃದ್ಧಿಗೊಳಿಸಿರಿ.



## ಕಥೆಯ ಅವಶ್ಯಕತೆ

ಇತ್ತೀಚೆಗೆ ಯೋಹಾನನು ತನ್ನ ಕೆಲವು ಹೊಸ ಸ್ನೇಹಿತರೊಂದಿಗೆ ಆಟ ಆಡುತ್ತಾ ಇದ್ದನು. ಅವನಿಗೆ ಇಷ್ಟವಾಗದ ಕಾರ್ಯಗಳನ್ನು ಆ ಸ್ನೇಹಿತರು ಮಾಡುತ್ತಾ ಇದ್ದರು, ಅವರ ಕಾರ್ಯಗಳಿಂದ ಜನರಿಗೆ ಬಹಳ ತೊಂದರೆ ಆಗುತ್ತಾ ಇತ್ತು. ಅವರು ಯೋಹಾನನನ್ನು ಗೇಲಿ ಮಾಡಿದರು ಮತ್ತು ನೀನು ಮನೆಗೆ ಹೋಗಿ ಆಟ ಆಡು ಎಂದು ಹೇಳಿದರು.

## ಮುಖ್ಯ ಪಾಠ

ಕಡೆಯದಾಗಿ ಮತ್ತೊಬ್ಬ ನಂಬಿಕೆಯ ವೀರನನ್ನು ನೋಡಿಕೊಳ್ಳೋಣ. ಯೆಹೂದ್ಯರು ಪಾರಸಿಯ ಸಾಮ್ರಾಜ್ಯದಲ್ಲಿ ಸೆರೆವಾಸವನ್ನು ಅನುಭವಿಸಿ ಹಿಂದಿರುಗುತ್ತಿದ್ದ ಸಮಯದಲ್ಲಿ ಜೆಕರ್ಯನು ಪ್ರವಾದಿಯಾಗಿದ್ದನು. ಸತ್ಯವೇದದಲ್ಲಿರುವ ಇತರೆ ಪ್ರವಾದಿಗಳಂತೆ, ಜೆಕರ್ಯನಿಗೆ ಸತ್ಯವನ್ನು ಪ್ರಕಟಪಡಿಸುವ, ತನ್ನ ಸುತ್ತಮುತ್ತಲಿನಲ್ಲಿರುವ ಜನರಿಗೆ ದೇವರ ವಾಕ್ಯವನ್ನು ಪ್ರಕಟಪಡಿಸುವ ಕೆಲವನ್ನು ಕೊಡಲಾಗಿತ್ತು. ತಾವು ಆಯಾ ಸಮಯಗಳಲ್ಲಿ ಉಪವಾಸವನ್ನು ಮಾಡಬೇಕೆ ಎಂಬದನ್ನು ಕೇಳಲು ಜನರು ಅವನ ಬಳಿಗೆ ಬಂದಾಗ, ದೇವರು ಅವನಿಗೆ ತಿಳಿಸಿದ ಸತ್ಯವನ್ನು ಅವರಿಗೆ ಹೇಳಲು ಅವನು ಹೆದರಿಕೊಳ್ಳಲಿಲ್ಲ. ಅವರು ದೇವರಿಗೆ ಹತ್ತಿರವಾಗಲು ಉಪವಾಸ ಮಾಡುತ್ತಾ ಇರಲಿಲ್ಲ ಬದಲಾಗಿ ಆತ್ಮೀಕರೆಂದು ತೋರ್ಪಡಿಸಿಕೊಳ್ಳುವ ಸಲುವಾಗಿ ಉಪವಾಸವನ್ನು ಸಂಪ್ರದಾಯದಂತೆ ಮಾಡುತ್ತಾ ಇದ್ದರು. ಇದೇ ಪ್ರಕಾರ, ದೇವರು ನಮ್ಮ ಹೃದಯವನ್ನು ನೋಡುತ್ತಾನೆ ಮತ್ತು ನಾವು ಯಾವ ಉದ್ದೇಶದಿಂದ ಕಾರ್ಯಗಳನ್ನು ಮಾಡುತ್ತೇವೆ ಎಂಬದನ್ನು ತಿಳಿದುಕೊಳ್ಳುತ್ತಾನೆ. ಅವರು ಉಪವಾಸ ಮಾಡುತ್ತಾ ತಮ್ಮನ್ನು ಆತ್ಮೀಕರೆಂದು ತೋರ್ಪಡಿಸಿಕೊಳ್ಳುವ ಸಮಯದಲ್ಲಿ ಇತರರೊಂದಿಗೆ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದರು. ದೇವರು ಅದನ್ನು ದ್ವೇಷಿಸುತ್ತಾನೆ. ಇತರರನ್ನು ನೋಯಿಸುತ್ತಾ ತಮ್ಮನ್ನು ಆತ್ಮೀಕರೆಂದು ತೋರ್ಪಡಿಸಿಕೊಳ್ಳುತ್ತಿದ್ದ ಫರಿಸಾಯರನ್ನು ಯೇಸು ಕ್ರಿಸ್ತನು ಗದರಿಸಿದನು (ಮಾರ್ಕ 12:40). ಜನರು ಮಾಡುತ್ತಿದ್ದ ಕೆಟ್ಟ ಕಾರ್ಯಗಳನ್ನು ಅವರಿಗೆ ತಿಳಿಸುವದು ಮಾತ್ರವಲ್ಲ ಬದಲಾಗಿ ಬದಲಾವಣೆ ಹಾಗೂ ಒಳ್ಳೆಯದಕ್ಕಾಗಿ ಅವರಲ್ಲಿ ನಿರೀಕ್ಷೆಯನ್ನು ಹುಟ್ಟಿಸಲು ದೇವರು ಜೆಕರ್ಯನನ್ನು ಉಪಯೋಗಿಸಿಕೊಂಡನು. ಜನರು ಇತರರ ವಿಷಯದಲ್ಲಿ ನ್ಯಾಯ, ಕರುಣೆ ಮತ್ತು ದಯೆಯಿಂದ ನಡೆದುಕೊಳ್ಳುವಂತೆ ಅವರನ್ನು ಪ್ರೋತ್ಸಾಹಪಡಿಸಲು ದೇವರು ಜೆಕರ್ಯನನ್ನು ಉಪಯೋಗಿಸಿಕೊಂಡನು. ನಾವು ಬಲಹೀನತಯಲ್ಲಿ ಇರುವವರಿಗೆ ಸಹಾಯ ಮಾಡಬೇಕು, ನಮ್ಮ ಹೃದಯದಲ್ಲಿ ಅವರ ಬಗ್ಗೆ ಕೇಡು ಯೋಚಿಸಬಾರದು, ಸತ್ಯವನ್ನು ಹೇಳಬೇಕು ಮತ್ತು ಸಮಾಧಾನದಿಂದ ನಡೆದುಕೊಳ್ಳಬೇಕೆಂದು ದೇವರು ಬಯಸುತ್ತಾನೆ. ಅವರ ಉಪವಾಸವು ಹೊರಟು ಹೋಗುವದಾಗಿರಲಿಲ್ಲ ಆದರೆ ದೇವರು ಅದನ್ನು ಸಂತೋಷ ಹಾಗೂ ಆಚರಣೆಯ ಸಮಯವಾಗಿ ಬದಲಾಯಿಸ ಬೇಕೆಂದಿದ್ದನು. ಸತ್ಯವನ್ನು ಜನರಿಗೆ ಮತ್ತೆಮತ್ತೆ ಪ್ರಕಟಪಡಿಸಲು, ಹಿಂದೆ ದೇವರು ಹೇಳಿರುವ ವಿಷಯಗಳನ್ನೆಲ್ಲಾ ಅವರ ನೆನಪಿಗೆ ತರಲು, ದೇವರನ್ನು ಹುಡುವಂತೆ ಅವರನ್ನು

ಪ್ರೋತ್ಸಾಹಪಡಿಸಲು, ಒಬ್ಬರೊಂದಿಗೊಬ್ಬರು ಸಮಾಧಾನದಿಂದ ನಡೆದುಕೊಳ್ಳಲು ಮತ್ತು ಯೇಸು ಕ್ರಿಸ್ತನ ಬರೋಣವನ್ನು ಪ್ರಕಟಪಡೀಸಲು ದೇವರು ಜೆಕರ್ಯನನ್ನು ಉಪಯೋಗಿಸಿ ಕೊಂಡನು.

ಇದೇ ಪ್ರಕಾರ, ನಾವು ಒಬ್ಬರನ್ನೊಬ್ಬರು ದೇವರ ವಾಕ್ಯಗಳಿಂದ ಪ್ರೋತ್ಸಾಹಪಡಿಸಬಹುದು (1 ಥೆಸಲೊನಿಕ 5:11, ಇಬ್ರಿಯ 3:13). ದೇವರು ವಾಕ್ಯ ಏನು ಹೇಳುತ್ತದೆ ಎಂಬದು ನಿಮಗೇ ಗೊತ್ತಿಲ್ಲವೆಂದರೆ ಇತರರನ್ನು ಪ್ರೋತ್ಸಾಹಪಡಿಸಲು ನಿಮ್ಮಿಂದ ಆಗುವದಿಲ್ಲ. ಪ್ರತಿದಿನ ದೇವರ ವಾಕ್ಯ ಓದಿರಿ (ಯೋಹಾನ 15:5-8). ಇಂದು ನಾನು ಹೊಸಬರನ್ನು ಭೇಟಿ ಮಾಡುತ್ತೇನೆ ಎಂದು ಊಹಿಸಿಕೊಳ್ಳಿರಿ. ನೀನು ಹೇಗೆ ಒಳ್ಳೆಯ ಸ್ನೇಹಿತರಾಗುವಿರಿ? ಯಾರನ್ನಾದರೂ ಚೆನ್ನಾಗಿ ತಿಳಿದುಕೊಳ್ಳಬೇಕೆಂದರೆ ನೀವು ಅವರೊಂದಿಗೆ ಸಮಯವನ್ನು ಕಳೆಯಬೇಕು. ದೇವರ ನಿಮ್ಮ ಪ್ರಿಯ ಮಿತ್ರನಾಗುವ ತನಕ ನೀವು ದೇವರ ವಾಕ್ಯಗಳನ್ನು ಓದಲು ಸಮಯವನ್ನು ಕೊಡುವವರಾಗಿರಬೇಕು – ನಂತರ ಅದನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗಬೇಕು. ಕ್ರೈಸ್ತತ್ವವು ನೀವು ಶಾಲೆಯಲ್ಲಿ ಓದಿ ಮುಗಿಸಿದ ನಂತರ ಪದವಿ ಪಡೆದುಕೊಂಡರೆ ಅಲ್ಲಿಗೇ ಮುಗಿಯಿತು ಎಂಬದಾಗಿ ಅಂದುಕೊಳ್ಳುವ ರೀತಿಯಲ್ಲ. ದೇವರ ವಿಷಯದಲ್ಲಿ ಪ್ರತಿದಿನ ಹೊಸ ವಿಷಯಗಳು ಇರುತ್ತವೆ! ಆತನನ್ನು ಹಿಂಬಾಲಿಸುತ್ತಲೇ ಇರಿ, ಆತನ ವಾಕ್ಯಗಳನ್ನು ಓದಿರಿ, ನಂಬಿಕೆಯ ವೀರರ ಪಾಠಗಳನ್ನು ಓದಿರಿ (ನಾವು ಕೆಲವರನ್ನು ಮಾತ್ರವೇ ನೋಡಿದ್ದೇವೆ ಇನ್ನೂ ಅನೇಕರಿದ್ದಾರೆ) ಮತ್ತು ಆತನನ್ನು ಹಿಂಬಾಲಿಸಲು ಇತರರನ್ನು ಪ್ರೋತ್ಸಾಹಪಡಿಸಿರಿ.

ನಾನು ದೇವರ ವಾಕ್ಯವನ್ನು ಓದುವ ಮತ್ತು ಇತರರನ್ನು ಅದರಿಂದ ಪ್ರೋತ್ಸಾಹಪಡಿಸುವ ಆಯ್ಕೆ ಮಾಡಿಕೊಳ್ಳುತ್ತೇನೆ.

### ವಿಶ್ಲೇಷಣೆ




ಯೋಹಾನನ ತಾಯಿ ನೀನು ಯಾಕೆ ನಿನ್ನ ಸ್ನೇಹಿತರ ಜೊತೆ ಆಡುತ್ತಿಲ್ಲ ಎಂದು ಕೇಳಿದಾಗ, ಅವರು ಮಾಡುವಕಾರ್ಯಗಳನ್ನು ಅವನು ಹೇಳಿದನು. ಯೋಹಾನನು ಮನೆಯಲ್ಲಿಯೇ ಇರಲು ತೀರ್ಮಾನಿಸಿದನು ಮತ್ತು ಅವನು ಒಂಟಿಯಾಗಿರುವಾಗಲೂ, ಅವನಿಗೆ ಬೇಸರವಾಗಲಿಲ್ಲ ಯಾಕಂದರೆ ಅವನು ಸತ್ಯವನ್ನು ಹೇಳಿದ್ದನು.

### ಚಟುವಟಿಕೆ

ನೆನಪಿನ ಆಲ್ಬಮ್

ಎಲ್ಲಾ ಮಕ್ಕಳಿಗೂ ಒಂದು ಹಾಳೆಯನ್ನು ಮಡಚಿ ಕೊಡಿರಿ. ಒಂದು ಕಡೆಯಲ್ಲಿ ಮಕ್ಕಳು ಭಾವ ಚಿತ್ರವನ್ನು ಅಂಟಿಸಬಹುದು ಅಥವಾ ಚಿತ್ರವನ್ನು ಬಿಡಿಸಬಹುದು. ಮತ್ತೊಂದು ಕಡೆಯಲ್ಲಿ, ಮಕ್ಕಳು ತಮ್ಮ ಕುರಿತು ಏನಾದರೂ ಬರೆಯಬಹುದು, ಅಂದರೆ ಅವರು ಮಾಡಿದ ದೊಡ್ಡ ತುಂಟತನ, ಅವರಿಗೆ ಏನು ಇಷ್ಟ, ಅವರ ಪ್ರಿಯ ಗೆಳೆಯ ಯಾರು, ಇತ್ಯಾದಿ. ಅಲ್ಬಮ್ ಗಳನ್ನೆಲ್ಲಾ ಮಾಡಿದ ನಂತರ, ಅವುಗಳನ್ನು ಅದಲುಬದಲು ಮಾಡಿ ವಿದ್ಯಾರ್ಥಿಗಳಿಗೆ ಹಂಚಿರಿ. ಅವುಗಳನ್ನು ಜೋರಾಗಿ ಓದಿರಿ ಮತ್ತು ಪ್ರತಿಯೊಂದು ಫೋಟೋ ತೋರಿಸಿರಿ, ಮಕ್ಕಳು ಯಾರ ಆಲ್ಬಮ್ ತಮಗೆ ಸಿಕ್ಕಿದೆ ಎಂಬದನ್ನು ಊಹಿಸಬೇಕು.




### ಟೈಮ್ ಲೈನ್

ಯಾವ ವರ್ಷದಲ್ಲಿ ಜೆಕರ್ಯನು ಪ್ರವಾದನೆ ಮಾಡಲು ಪ್ರಾರಂಭಿಸಿದನು? ಉತ್ತರ: ಬಹುಶಃ ಕ್ರಿ.ಶ. 520 ರಲ್ಲಿ.

## ಒಗಟಿನ ಉತ್ತರಗಳು







## ಪ್ರಶ್ನೆಗಳು ಮತ್ತು ಉತ್ತರಗಳು

**(ಹಿರಿಯ ವಿದ್ಯಾರ್ಥಿಗಳಿಗೆ)**

1. **ಒಂದುವೇಳೆ ಶಿಕ್ಷಕ ನಿಮಗೆ ಶಿಕ್ಷೆ ಕೊಟ್ಟರೂ ನೀವು ನಿಜವಾಗಿಯೂ ಸತ್ಯವನ್ನು ಹೇಳಬೇಕೇ?**
   ಖಂಡಿತವಾಗಿಯೂ, ಸತ್ಯವನ್ನೇ ಹೇಳಬೇಕು, ಆದರೆ ಶಿಕ್ಷಕ ಬೈಯ್ಯುವಾಗ ಬೇರೆ ಪರಿಸ್ಥಿತಿಗಳ ಬಗ್ಗೆ ಮಾತನಾಡಲು ಪ್ರಯತ್ನಿಸಿರಿ. ಉದಾಹರಣೆಗೆ, ಓದುವದನ್ನು ಕಲಿತುಕೊಳ್ಳದೆ ಇರುವ ಮಗುವನ್ನು ಶಿಕ್ಷಕ ಗದರಿಸುವದು ಒಳ್ಳೆಯದೇ ಆಗಿದೆ, ಯಾಕಂದರೆ ಅದರಿಂದ ಆ ಮಗುವಿಗೇ ಸಹಾಯವಾಗುತ್ತದೆ. ಒಂದುವೇಳೆ ವಿದ್ಯಾರ್ಥಿ ಸುಳ್ಳು ಹೇಳಿದರೆ, ಅವನಿಗೆ ಯಾವುದೇ ಸಹಾಯ ಸಿಗುವದಿಲ್ಲ ಮತ್ತು ಹೇಗೆ ಓದಬೇಕು ಎಂಬದನ್ನು ತಿಳಿಯದೆಯೇ ಅವನು ಬೆಳೆಯುತ್ತಾನೆ.
2. **ಬೇರೆಯವರಿಗೆ ಒಳ್ಳೆಯದಾಗುತ್ತದೆ ಎಂದರೆ ಸುಳ್ಳು ಹೇಳುವದು ಸರಿಯೇ, ಇಲ್ಲ?**
   ವಿವಿಧ ರೀತಿಯ ಪರಿಸ್ಥಿತಿಗಳು ಮತ್ತು ವಿವಿಧ ರೀತಿಯ ಸುಳ್ಳುಗಳ ಬಗ್ಗೆ ಮಾತನಾಡಿರಿ. ಸುಳ್ಳುಗಳು ಅಥವಾ ತಪ್ಪಾದ ಸೂಚನೆಗಳು ಜನರಿಗೆ ಸಂತೋಷವನ್ನು ಕೊಡುತ್ತವೆ ಆದರೆ ಭವಿಷ್ಯದಲ್ಲಿ ಅವರಿಗೆ ತೊಂದರೆ ಮಾಡುತ್ತವೆ ಎಂಬದರ ಬಗ್ಗೆ ಮಾತನಾಡಿರಿ.
3. **ಸತ್ಯ ಹೇಳುವದು ಯಾವಾಗಲೂ ಸುಲಭ, ಅಲ್ಲವೇ?**
   ಇಲ್ಲ, ಬಹುತೇಕ ಸಮಯಗಳಲ್ಲಿ ಸತ್ಯ ಹೇಳುವದಕ್ಕಿಂತಲೂ ಸುಳ್ಳು ಹೇಳುವದೇ ಸುಲಭ. ಜೆಕರ್ಯನಿಗೆ ಕೇಡಿನ ಕುರಿತಾದ ಪ್ರವಾದನೆ ಹೇಳಲು ಇಷ್ಟವಿಲ್ಲದೆ ಇರಬಹುದು ಆದರೆ ಅವನು ದೇವರಿಗೆ ವಿಧೇಯನಾಗಲೇ ಬೇಕಾಗಿತ್ತು ಮತ್ತು ದೇವರು ತನ್ನ ಜನರಿಗೆ ಏನು ಹೇಳಿದ್ದನೋ ಅದನ್ನು ಹೇಳಬೇಕಾಗಿತ್ತು.

### ಆಟ




ಈ ಆಟಕ್ಕಾಗಿ, ಮಕ್ಕಳೆಲ್ಲರಿಗೂ ಸಿಗುವ ಹಾಗೆ ಈ ಪಠ್ಯದಲ್ಲಿರುವ ವೀರರ ಹೆಸರುಗಳನ್ನು ಹಾಳೆಯ ಮೇಲೆ ಬರೆಯಿರಿ. ಪ್ರತಿಯೊಂದು ಮಗುವಿನ ಬೆನ್ನಿನ ಮೇಲೆ ವೀರನ ಹೆಸರಿರುವ ಹಾಳೆಯನ್ನು ಅಂಟಿಸಿರಿ ಆದರೆ ಅದು ಅವರಿಗೆ ಗೊತ್ತಾಗಬಾರದು. ಮಕ್ಕಳು ಕೆಳಗೆ ಕೊಡಲಾಗಿರುವ ನಿಯಮಗಳ ಪಾಲನೆಯಿಂದ ಅವನು ಯಾವ ವೀರನಾಗಿರಬಹುದು ಎಂಬದನ್ನು ಊಹಿಸಿ ಹೇಳಬೇಕು:

- ಅವರು ತಮ್ಮ ಜೊತೆಯಲ್ಲಿವವರಿಗೆ 1 ಪ್ರಶ್ನೆಗಿಂತ ಹೆಚ್ಚಿ ಪ್ರಶ್ನೆಯನ್ನು ಕೇಳಬಾರದು.
- ಅವರು ಒಟ್ಟು 3 ಪ್ರಶ್ನೆಗಳನ್ನು ಮಾತ್ರವೇ ಕೇಳಬಹುದು.
- 'ಹೌದು' ಅಥವಾ 'ಇಲ್ಲ' ಎಂಬದಾಗಿ ಮಾತ್ರವೇ ಪ್ರಶ್ನೆಗಳಿಗೆ ಉತ್ತರಿಸಬೇಕು.

ಸರಿಯಾದ ಉತ್ತರ ಹೇಳುವ ಮಕ್ಕಳು ಹಾಳೆಯನ್ನು ಮುಂದಕ್ಕೆ ಹಿಡಿದುಕೊಳ್ಳಬೇಕು.

### ಹಾಜರಾತಿ




ತರಗತಿಗೆ ಬಂದ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:
ಸೆರೆವಾಸ

### ಹೋಮ್ ವರ್ಕ್

ಕೆಲವು ವಾರಗಳ ಹಿಂದೆ, ಪ್ರತಿದಿನ ಸತ್ಯವೇದ ಓದಬೇಕು ಎಂಬ ಅಸೈನ್ಮೆಂಟ್ ಕೊಡಲಾಗಿತ್ತು. ಇದು ನಿಮಗೆ ಇನ್ನೊಂದು ಅವಕಾಶವಾಗಿದೆ. ಈ ವಾರದ ಪ್ರತಿದಿನ ಕೆಲವು ನಿಮಿಷಗಳಾದರೂ ತಪ್ಪದೆ ಸತ್ಯವೇದ ಓದಿರಿ. ಒಂದುವೇಳೆ ಎಂದಾದರೂ ಓದಲು ಆಗಲಿಲ್ಲವೆಂದರೆ ಚಿಂತಿಸಬೇಡಿರಿ ಬದಲಾಗಿ ಪ್ರತಿದಿನ ಓದಿರಿ ಮತ್ತು ಓದುವದನ್ನು ಅಭ್ಯಾಸ ಮಾಡಿಕೊಳ್ಳಿರಿ. ದಿನದ ಯಾವ ಸಮಯದಲ್ಲಿ ನೀವು ಚೆನ್ನಾಗಿ ಓದಬಹುದು? ಸತ್ಯವೇದವನ್ನು ನೀವು ನಿಮ್ಮ ಹಾಸಿಗೆಯ ಮೇಲೆ, ಆಟದ ಗೊಂಬೆಗಳ ನಡುವೆ ಅಥವಾ ಸುಲಭವಾಗಿ ಕಾಣಿಸುವ ಸ್ಥಳದಲ್ಲಿ ಇಡಬೇಕು. ಒಂದುವೇಳೆ ನಿಮ್ಮ ಮೊಬೈಲ್ ನಲ್ಲಿ ಸತ್ಯವೇದ ಇರುವದಾದರೆ, ನಿಮ್ಮ ಮನೆಯ ಬಾಗಿಲಿಗೆ ಒಂದು ಚಿಕ್ಕ ಹಾಳೆಯ ಮೇಲೆ ಸತ್ಯವೇದ ಓದಬೇಕು ಎಂದು ಬರೆಯುವ ಮೂಲಕ ಯಾವಾಗಲೂ ನೆನಪು ಮಾಡಿಕೊಳ್ಳಿರಿ. ಯಾರಿಗೂ ಪ್ರಮಾಣ ಮಾಡಬೇಡಿರಿ ಯಾಕಂದರೆ ಮಾನವರಾದ ನಾವು ಪ್ರಮಾಣವನ್ನು ಕಾಪಾಡಿಕೊಳ್ಳಲು ವಿಫಲರಾಗುತ್ತೇವೆ. ನಿಮ್ಮ ಜೀವಿತದ ಪ್ರತಿಯೊಂದು ದಿನ ತಪ್ಪದೆ ಸತ್ಯವೇದವನ್ನು ಓದಿರಿ.

ಓದಿರಿ
ಯಾವುದೇ ಅಸೈನ್ಮೆಂಟ್ ಇಲ್ಲ.



www.ChildrenAreImportant.com
info@childrenareimportant.com
We are located in Mexico.
00-52-592-924-9041